
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

09 ಸೆಪ್ಟೆಂಬರ್ 2015 ಪುಟ 20 ರೂ. 15/-


ಹೊಸ ಅಂಕಣ

WhatsApp ಭಯೋತ್ಪಾದನೆ



ಕಳ್ಳರೇ ಬೇಕು ಎಂದ ಜನತೆ


ಾಂಧಿ, ಅಂಬೇಡ್ಕರ್, ಲೋಹಿಯಾ, ಾರ್ಲ್ ಮಾರ್ಕ್ಸ್ ಜೋಕಾಲಿ



ಮಹದಾಯಿ



ಕೈಕೊಟ್ಟ ಮೋದಿ



ಬನ್ನಂಜೆ

ನಾಯಕ್ ಹತ್ಯೆ ರಹಸ್ಯ ಹೇಳುವನಾ?


ರಾಯಚೂರು



ಮರೆಯಾದ ಮೌನಿ

ಂಡ್ಯ:ಮಾದೇಗೌಡರ ಪೊಲಿಟಿಕಲ್ ಪಾಳೇಗಾರಿಕೆ

ಸಾರ್ವತ್ರಿಕ ಮುಷ್ಕರ 2015: ನಮ್ಮ ಜವಾಬ್ದಾ[ರಿ]



ಪ್ರತೀ ವರ್ಷವೂ ಅಲ್ಲಲ್ಲಿ ಸಾರ್ವತ್ರಿಕ ಮುಷ್ಕರ-general strike ಎನ್ನುವ ಪೋಸ್ಟರ್‌ಅನ್ನು ಫೆಬ್ರವರಿ ತಿಂಗಳಲ್ಲಿ ಅಥವಾ ಇನ್ನಾವುದಾದರೂ ಒಂದು ತಿಂಗಳಲ್ಲಿ ನೋಡುತ್ತಿದ್ದೆವು. 'ಅವತ್ತು ಬ್ಯಾಂಕ್ ಇರಲ್ಲ; ಬಸ್‌ಗಳು ಇರುತ್ತಾ ಇಲ್ಲವಾ ಅಂತ ಗೊಂದಲ, ಆಟೋಗಳೂ ಸಹ ಕಡಿಮೆ ಇರುತ್ತವೆಯಾದ್ದರಿಂದ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂಬ ಮುನ್ನೆಚ್ಚರಿಕೆ ಇಷ್ಟಕ್ಕೆ ಹೆಚ್ಚಿನವರ 'ಪಾಲ್ಗೊಳ್ಳುವಿಕೆ' ಇರುತ್ತಿತ್ತು. ಇದು ಕೆಲವು ಕಾರ್ಮಿಕ ಸಂಘಟನೆಗಳು ಸೇರಿ ನೀಡುವ ಮುಷ್ಕರದ ಕರೆಯಾದ್ದರಿಂದ, ಆಯಾ ಕಾರ್ಮಿಕ ಸಂಘಟನೆಗಳ ಸದಸ್ಯರುಗಳಿಗೆ ಇನ್ನೂ ಹೆಚ್ಚಿನ ಮಾಹಿತಿ ಇರುತ್ತಿತ್ತು. ಕೆಲವು ಸಾರಿ ಈ ಮುಷ್ಕರವು ಎರಡು ದಿನಗಳ ಕಾಲ ನಡೆಯುತ್ತಿತ್ತು. ಆಗಲೂ ಚಿತ್ರಣ ಇದಕ್ಕಿಂತ ಭಿನ್ನವಾಗಿರುತ್ತಿರಲಿಲ್ಲ.

ಆದರೆ, ಈ ಸಾರಿಯ ಸಾರ್ವತ್ರಿಕ ಮುಷ್ಕರ ಇನ್ನೂ ಹೆಚ್ಚು ಗಮನ ಸೆಳೆದಿದೆ. ಹೆಚ್ಚುಕಡಿಮೆ ದೇಶದ ಎಲ್ಲಾ ಬಗೆಯ ಉದ್ಯೋಗಸ್ಥ ವಿಭಾಗಗಳು ಸೆಪ್ಟೆಂಬರ್ 2ರ ಮುಷ್ಕರಕ್ಕೆ ಸಿದ್ಧತೆ ಮಾಡಿಕೊಂಡಿವೆ. ಯೂನಿಯನ್‌ಗಳೆಂದರೇನೇ ಅವು ಎಡಪಕ್ಷಗಳಿಗೆ ಸಂಯೋಜಿತವಾದ ಕಾರ್ಮಿಕ ಸಂಘಟನೆಗಳು ಎನ್ನುವ ಅಭಿಪ್ರಾಯವಿದೆ. ಈ ಸಾರಿಯೂ ಎಡಪಕ್ಷಗಳ ಯೂನಿಯನ್‌ಗಳು ವಿಶೇಷವಾದ ಮುತುವರ್ಜಿಯಿಂದ ಇದನ್ನು ಸಂಘಟಿಸಲು ಪ್ರಯತ್ನ ಹಾಕಿವೆ. ಆದರೆ, 'ಆಳುವ ಪಕ್ಷ'ಗಳ ಯೂನಿಯನ್‌ಗಳಾದ ಇಂಟಕ್ (ಕಾಂಗ್ರೆಸ್) ಮತ್ತು ಬಿಎಂಎಸ್ (ಬಿಜೆಪಿ-ಆರೆಸ್ಸೆಸ್) ಸಹ ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿವೆ. ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಎನ್‌ಡಿಎ, ಯುಪಿಎ ಮತ್ತು ಎರಡರಲ್ಲೂ ಇರದ ಪಕ್ಷಗಳ ಯೂನಿಯನ್‌ಗಳೂ ಮುಷ್ಕರಕ್ಕೆ ಬೆಂಬಲ ನೀಡುತ್ತಿವೆ.

ಇದಕ್ಕೆ ಕಾರಣವಿಲ್ಲದಿಲ್ಲ. ಕಾರ್ಮಿಕರನ್ನು ಸಂಘಟಿಸುತ್ತಿರುವ ಯಾವುದೇ ಸಂಘಟನೆಯಾದರೂ, ಇಂದಿನ ಒಟ್ಟಾರೆ ಪರಿಸ್ಥಿತಿಯಲ್ಲಿ ಸರ್ಕಾರದ ವಿರುದ್ಧ ಗಟ್ಟಿ ನಿಲುವು ತೆಗೆದುಕೊಳ್ಳದೇ ಇರುವುದು ಸಾಧ್ಯವಿಲ್ಲ. ಹಾಗಾಗಿ, ಇದು 'ಬೇರೆ ಸಂಘಟನೆ' ಕರೆ ಕೊಟ್ಟಿರುವ ಮುಷ್ಕರ; ಹಾಗಾಗಿ ನಾವು ಬೆಂಬಲಿಸುವುದು ಬೇಡ ಎನ್ನುವ ಧೋರಣೆ ಹೊಂದಿರುವ ಸಂಘಟನೆಗಳು ತಮ್ಮದೇ ಕಾರ್ಮಿಕರಿಂದ ಪ್ರತಿರೋಧ ಎದುರಿಸಬೇಕಾಗುತ್ತದೆ. ಆದರೆ, ಪ್ರಶ್ನೆಯಿರುವುದು ಕಾರ್ಮಿಕ ಸಂಘಟನೆಗಳ ಧೋರಣೆಯ ಬಗ್ಗೆ ಅಲ್ಲ, 'ಇತರ ನಾಗರಿಕ' ವಿಭಾಗಗಳದ್ದು. ಸಾರ್ವತ್ರಿಕ ಮುಷ್ಕರವೆಂದಾಗಲೇ, ಅದು ಇಡೀ ಸಮಾಜವನ್ನು ಕದಲಿಸುವ ಹೋರಾಟವಾಗಬೇಕು. ನಮ್ಮನ್ನೂ ಒಳಗೊಳ್ಳಲು ಈ ಕಾರ್ಮಿಕ ಸಂಘಟನೆಗಳು ಏನು ಮಾಡಿವೆ, ಹಾಗಾಗಿ ನಾವು ಅದರೊಟ್ಟಿಗೆ ಬರುವುದಿಲ್ಲ ಎಂಬ ಅಭಿಪ್ರಾಯ ಯಾರದ್ದಾದರೂ ಇರಬಹುದು. ಆ ವಿಮರ್ಶೆ-ಸಮೀಕ್ಷೆಗಳನ್ನು ಮಾಡುವಷ್ಟು ಸಮಯ ಉಳಿದಿಲ್ಲ. ಮುಂದಿನ ವಾರ, ಇದೇ ದಿನ ದೇಶದ ಕಾರ್ಮಿಕರು ಮುಷ್ಕರ ನಿರತವಾಗಿರುತ್ತಾರೆ. ಅವರೊಟ್ಟಿಗೆ ಜೊತೆ ಸೇರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಈ ಸಾರ್ವತ್ರಿಕ ಮುಷ್ಕರ ಎಂಬುದೇನು, ಭಾರತದಲ್ಲಿ ಅದು ಹೇಗೆ ನಡೆಯುತ್ತಿದೆ, ಈ ಸಾರಿಯ ಮುಷ್ಕರದ ಪ್ರಧಾನ ಹಕ್ಕೊತ್ತಾಯಗಳೇನು ಎಂಬುದನ್ನು ಪ್ರಸಕ್ತ ವಾರ ಚರ್ಚಿಸುವ ಅಗತ್ಯವಿದೆಯೆನಿಸುತ್ತದೆ.

ಸಾಮಾನ್ಯವಾಗಿ ಒಂದು ನಗರ, ಒಂದು ಪ್ರದೇಶ ಅಥವಾ ಇಡೀ ದೇಶದ ಬಹುತೇಕ ಕಾರ್ಮಿಕರು ಕೆಲವು ನಿರ್ದಿಷ್ಟ ಹಕ್ಕೊತ್ತಾಯಗಳನ್ನು ಮುಂದಿಟ್ಟು ನಡೆಸುವ ಮುಷ್ಕರವನ್ನು ಸಾರ್ವತ್ರಿಕ ಮುಷ್ಕರ ಎಂದು ಕರೆಯಲಾಗುತ್ತದೆ. ಯೂರೋಪ್‌ನಲ್ಲಿ ಕೈಗಾರಿಕಾ ಕ್ರಾಂತಿ ಉಂಟಾದ ನಂತರ, ಸಮಾಜದ ಅತೀ ದೊಡ್ಡ ಜನಸಂಖ್ಯೆ ಕಾರ್ಮಿಕ ವರ್ಗದ್ದೇ ಆದ ನಂತರ, ಕಾರ್ಮಿಕರ ಚಳವಳಿಗಳೂ ಆರಂಭವಾದವು. ಅದರ ಭಾಗವಾಗಿ ಸಾರ್ವತ್ರಿಕ ಮುಷ್ಕರವೂ ಹುಟ್ಟಿಕೊಂಡಿತು. ಕ್ರಿಸ್ತಪೂರ್ವದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಾರ್ವತ್ರಿಕ ಮುಷ್ಕರಗಳ ರೀತಿಯ ಚಳವಳಿ ನಡೆಯುತ್ತಿದ್ದವು ಎಂದು ಹೇಳುವವರು ಇದ್ದಾರೆ. ಆದರೆ, ನಿರ್ದಿಷ್ಟವಾಗಿ ವಿಲಿಯಂ ಬೆನ್‌ಬೋ ಎಂಬಾತ ಇಂಗ್ಲೆಂಡ್‌ನಲ್ಲಿ ಒಂದು ಕಿರುಪುಸ್ತಿಕೆಯನ್ನು ಹೊರತಂದಲ್ಲಿಂದ ಇವತ್ತಿನ ರೀತಿಯ ಸಾರ್ವತ್ರಿಕ ಮುಷ್ಕರವು ಆರಂಭವಾಯಿತು. 28ನೇ ಜನವರಿ 1832ರಲ್ಲಿ ಹೊರಬಂದ ಆ ಕಿರುಪುಸ್ತಕದ ಹೆಸರು 'ಮಹಾ ರಾಷ್ಟ್ರೀಯ ರಜಾ ದಿನ ಮತ್ತು ದುಡಿವ ವರ್ಗದ ಅಧಿವೇಶನ' ಎಂದು. ಚಾರ್ಟಿಸ್ಟರು ಎಂದು ಕರೆಯಲಾಗುವ ಒಂದು ರೀತಿಯ ಸಮಾಜವಾದಿ ಹೋರಾಟಗಾರರ 1839ರ ವರ್ಷದ ಅಧಿವೇಶನವು ಬೆನ್‌ಬೋನ ಪರಿಕಲ್ಪನೆಯನ್ನು ಒಪ್ಪಿಕೊಂಡು ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿತು. ಸಾಮಾನ್ಯವಾಗಿ, ಕಾರ್ಮಿಕ ಸಂಘಗಳು ನಿರ್ದಿಷ್ಟ ಕೆಲಸದ ಸ್ಥಳದ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುತ್ತವೆ. ಆದರೆ, ಸಾರ್ವತ್ರಿಕ ಮುಷ್ಕರದ ಸಂದರ್ಭದಲ್ಲಿ ಎಲ್ಲಾ ಕಾರ್ಮಿಕರು, ದುಡಿವ ಜನರು ಮತ್ತು ದೇಶದ ಜನರ ಸಮಸ್ಯೆಗಳು ಹಾಗೂ ರಾಜಕೀಯ ಬೇಡಿಕೆಗಳಿಗಾಗಿ ಚಳವಳಿ ಹೂಡಲಾಗುತ್ತದೆ.

1842ರಲ್ಲಿ ನಡೆದ ಆಧುನಿಕ ಜಗತ್ತಿನ ಮೊಟ್ಟ ಮೊದಲ ಸಾರ್ವತ್ರಿಕ ಮುಷ್ಕರವು ಕೆಲವು ರೀತಿಯಲ್ಲಿ ಐತಿಹಾಸಿಕವಾದುದಾಗಿತ್ತು. ಚಾರ್ಟಿಸ್ಟರು ಬ್ರಿಟನ್ ಸಂಸತ್ತಿಗೆ ನೀಡಿದ ಎರಡನೆಯ ಹಕ್ಕೊತ್ತಾಯ ಪಟ್ಟಿಯನ್ನು ಏಪ್ರಿಲ್ 1842ರಲ್ಲಿ ಸಂಸತ್ತು ತಿರಸ್ಕರಿಸಿತ್ತು. ಹೀಗಾಗಿ ಸ್ಟಾಫೋರ್ಡ್‌ಶೈರ್‌ನ ಕಲ್ಲಿದ್ದಲು ಗಣಿಗಳ ಕಾರ್ಮಿಕರು ಮುಷ್ಕರ ಆರಂಭಿಸಿದರು. ಇದು ಲಂಕಾಶೈರ್‌ನಲ್ಲಿನ ಗಿರಣಿಗಳು, ಡುಂಡೀ, ದಕ್ಷಿಣ ವೇಲ್ಸ್, ಕಾರ್ನ್‌ವೆಲ್ ಹಾಗೂ ಇನ್ನಿತರೆಡೆಗಳ ಕಲ್ಲಿದ್ದಲು ಗಣಿಗಳಿಗೂ ಹಬ್ಬಿತು. ಈ ಮುಷ್ಕರದ ಸಂದರ್ಭದಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ಚಳವಳಿ ನಿರತರಾಗಿದ್ದರು! ಮೊದಲ ಮುಷ್ಕರವು ಪ್ರಧಾನವಾಗಿ ಕಾರ್ಮಿಕರಿಗೆ ಹೆಚ್ಚಿನ ವೇತನ ಹಾಗೂ ಸೌಲಭ್ಯಗಳಿಗಾಗಿಯೇ ಆರಂಭವಾದರೂ, ಹಲವಾರು ರಾಜಕೀಯ ಹಕ್ಕೊತ್ತಾಯಗಳನ್ನೂ ಮುಂದಿಟ್ಟಿತ್ತು.

ಆ ನಂತರದ ವರ್ಷಗಳಲ್ಲಿ ಎಲ್ಲರಿಗೂ ಮತದಾನ ಹಕ್ಕು ಕೇಳಲು, ದಿನಕ್ಕೆ 8 ಗಂಟೆ ಕೆಲಸದ ಅವಧಿ ನಿಗದಿಪಡಿಸಲು, ಸಾಮಾಜಿಕ ಭದ್ರತೆಯ ಕ್ರಮಗ[ಳಿಗಾಗಿ], ಕಾರ್ಮಿಕರ ರಾಜ್ಯಾಧಿಕಾರಕ್ಕಾಗಿ ಸೇರಿದಂತೆ ಹತ್ತು [...] ರೀತಿಯ ಹಕ್ಕೊತ್ತಾಯಗಳನ್ನು ಮುಂದಿಟ್ಟ ಸಾ[ರ್ವತ್ರಿಕ] ಮುಷ್ಕರಗಳು ನಡೆದವು.

ಕಾರ್ಮಿಕ ಚಳವಳಿಗಳು ಬೆಳೆದ ಹಾಗೆ, ಸಾ[ರ್ವತ್ರಿಕ] ಮುಷ್ಕರದ ಪರಿಕಲ್ಪನೆಯೂ ಬೆಳೆಯಿತು. ಚಳವಳಿ[...] ದೊಡ್ಡದಾಗಿದ್ದರೂ, ಕಾರ್ಮಿಕರಿಗೆ ರಾಜಕೀಯ ಅ[...] ಇರಲಿಲ್ಲವಾದ್ದರಿಂದ, ಅವರು ಅಧಿಕಾರ ಯಂತ್ರಾಂ[ಗವನ್ನು] ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ, [...] ತಮ್ಮೊಟ್ಟಿಗೆ ಸೇರದ ಅಸಂಘಟಿತ ಕಾರ್ಮಿಕ[...] ಜೊತೆಗೂಡಿಸಿಕೊಂಡು ನಡೆಸುವ ಸಾರ್ವತ್ರಿಕ ಮುಷ್[ಕರ] ದೇಶದಲ್ಲಿ ಎಲ್ಲಾ ಬಗೆಯ ಉತ್ಪಾದಕ ಚಟುವಟಿಕೆ[...] ಸ್ಥಗಿತಗೊಳಿಸುವುದು, ಆಳುವ ವರ್ಗದ ಸ[...] ಯಂತ್ರಾಂಗವನ್ನು ನಿಲ್ಲಿಸಿ ಬಿಡುವುದು ಮತ್ತು [...] ಉಪಭೋಗಕ್ಕೆ ಬೇಕಾದ ವಸ್ತುಗಳೂ ಸಿಗದಂತೆ ಮಾ[...] ಹಾಗೂ ಇವೆಲ್ಲದರ ಮುಖಾಂತರ ಬಂಡವಾ[ಳಶಾಹಿ] ವ್ಯವಸ್ಥೆಯು ದುರ್ಬಲವಾಗುವಂತೆ ಮಾಡುವುದು; [...] ಎಲ್ಲಾ ಉತ್ಪಾದಕ ಶಕ್ತಿಗಳ ಮೇಲೆ ಕಾರ್ಮಿಕ ಸ[...] ಮುಖಾಂತರ ಕಾರ್ಮಿಕ ವರ್ಗವೇ [...] ತೆಗೆದುಕೊಳ್ಳುವುದು. ಈ ರೀತಿಯಾಗಿ ಅದರ ಪ[...] ವಿಸ್ತಾರಗೊಂಡಿತು. ಆನಂತರ ಜಗತ್ತಿನಲ್ಲಿ ನಡೆದ ಕಾ[ರ್ಮಿಕ] ವರ್ಗದ ಕ್ರಾಂತಿಗಳ ಸಂದರ್ಭದಲ್ಲೂ ಸಾ[ರ್ವತ್ರಿಕ] ಮುಷ್ಕರಗಳು ಪ್ರಮುಖ ಪಾತ್ರ ವಹಿಸಿದವು. 19[...] ಬ್ರಿಟನ್‌ನಲ್ಲಿ ನಡೆದ ಸಾರ್ವತ್ರಿಕ ಮುಷ್ಕರವು ಮೇ [...] 13ರವರೆಗೆ 9 ದಿನಗಳ ಕಾಲ ನಡೆಯಿತು.

ಭಾರತದಲ್ಲಿ ಎಡಪಕ್ಷಗಳು ಈ ರೀತಿಯ ಸಾ[ರ್ವತ್ರಿಕ] ಮುಷ್ಕರವನ್ನು ಒಂದು ಚಳವಳಿಯ ರೂಪವಾಗಿ ಬ[ಳಸಿಕೊಂಡು] ಬಂದಿದ್ದಾರೆ. ಆದರೆ, ಎಲ್ಲಾ ಸಂದರ್ಭಗಳಲ್ಲೂ [...] ಇಡೀ ಸಮಾಜದ ಗಮನ ಸೆಳೆಯಲು, ಸಮಾಜದ[...] ವರ್ಗಗಳ ಬೆಂಬಲ ಗಳಿಸಲು ಯಶಸ್ವಿಯಾ[...] ಕೆಲವೊಮ್ಮೆ ಕಾರ್ಮಿಕರೂ ಸಹ ಸಂಪೂರ್ಣ ಸಾ[...] ಮುಷ್ಕರಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಹೀಗಾಗಿ ಸಾ[ರ್ವತ್ರಿಕ] ಮುಷ್ಕರವೆಂಬುದು ಒಂದು ವಾರ್ಷಿಕ ಸಾಂಪ್ರ[ದಾಯಿಕ] ಕ್ರಮದಂತೆಯೂ ಆಗಿಬಿಟ್ಟಿತ್ತು. ಆದರೆ, ಕಳೆದ [...] ವರ್ಷಗಳಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳು [...] ಸೇರಿ ಸಾರ್ವತ್ರಿಕ ಮುಷ್ಕರವನ್ನು ಸಂಘ[ಟಿಸಲು] ಆರಂಭಿಸಿದ್ದಾರೆ. 1991ರ ಉದಾರೀಕರಣ ನೀತಿಗಳ[...] ಈ ವರ್ಷದ ಮುಷ್ಕರವು 16ನೇ ಸಾ[ರ್ವತ್ರಿಕ] ಮುಷ್ಕರವಾಗಿದ್ದು, ಎಲ್ಲಾ 11 ಕೇಂದ್ರೀಯ ಕಾ[ರ್ಮಿಕ] ಸಂಘಟನೆಗಳು ಮತ್ತು ರಾಷ್ಟ್ರೀಯ ಕಾರ್ಮಿಕ ಒಕ[್ಕೂಟಗಳ] ಜಂಟಿ ವೇದಿಕೆಯ ವತಿಯಿಂದ ಕರೆ ನೀಡಲಾ[ಗಿರುವ] ಸಾರ್ವತ್ರಿಕ ಮುಷ್ಕರ ಇದಾಗಿದೆ. ಹಾಗಾಗಿ ಇದು [...] ಮಹತ್ವವನ್ನು ಪಡೆದುಕೊಂಡಿದೆ. ಮೇಲೆ ಹೇ[ಳಿದಂತೆ] ಇದುವರೆಗೆ ಅಧಿಕಾರ ನಡೆಸಿದ ಕಾಂಗ್ರೆಸ್ ಮತ್[ತು] ಅಧಿಕಾರ ನಡೆಸುತ್ತಿರುವ ಬಿಜೆಪಿಗೆ ಸಂಯೋಜ[ಿತವಾದ] ಕಾರ್ಮಿಕ ಸಂಘಟನೆಗಳೂ ಇದರಲ್ಲಿ ಸಕ್ರಿ[ಯವಾಗಿ] ಭಾಗಿಯಾಗುತ್ತಿವೆ. ಜುಲೈ 25ರಂದು ಬೆಂಗಳೂ[ರಿನಲ್ಲಿ] ನಡೆದ 'ಸಾರ್ವಜನಿಕ ವಲಯದ ಉದ್ದಿಮೆ'ಗಳ ಕಾರ್[ಮಿಕರ] ಒಕ್ಕೂಟವೂ ಸಂಪೂರ್ಣವಾಗಿ ಮುಷ್ಕರದಲ್ಲಿ ಭಾಗಿ[ಯಾಗುವ] ತೀರ್ಮಾನವನ್ನು ಕೈಗೊಂಡಿದೆ.

ಕಾರಣ ನಿಚ್ಚಳವಾಗಿದೆ. ದೇಶದ ಸಮಸ್ತ ದುಡ[ಿಯುವ] ಸಮುದಾಯಗಳು ಹಾಗೂ ಇತರ ಸಾಮಾನ್ಯ ವ[ರ್ಗ]ಗ[ಳು] ಮೋದಿಯ ಅಚ್ಛೇ ದಿನ್‌ನಲ್ಲಿ ನರಳುತ್ತಿವೆ. ಭೂ[...] ಕಾಯ್ದೆ, ಬೆಂಬಲ ಬೆಲೆಗಳನ್ನು ಸೀಮಿತಗೊಳಿಸುತ್ತಿ[...] ಕೃಷಿಯನ್ನು ಮತ್ತಷ್ಟು ಉದಾರೀಕರಣಕ್ಕೆ ತೆರೆದಿಡುತ್ತಿ[...] ಎಲ್ಲವೂ ಕೃಷಿ ಕ್ಷೇತ್ರದ ಕತ್ತು ಹಿಸುಕುತ್ತಿದೆ. ಪರಿಣಾ[ಮವಾಗಿ] ಸರಣಿ ಆತ್ಮಹತ್ಯೆಗಳು ನಡೆಯುತ್ತಿವೆ. ಅದೇ ಸಂದ[ರ್ಭದಲ್ಲಿ] ಕೃಷಿಯಿಂದ ಬೇಸತ್ತು ನಗರಮುಖಿಯಾದವರು [...] ಅಭದ್ರತೆಯಿಂದ ಮತ್ತು ಹೆಚ್ಚಿದ ಜೀವನ [...] ನಿಭಾಯಿಸಲಾಗದೇ ಒದ್ದಾಡುತ್ತಿದ್ದಾರೆ. ಬಾಣ[...] ಬೆಂಕಿಗೆ ಬಿದ್ದ ಸಂದರ್ಭ ಅವರದ್ದು. ಎಲ್ಲಾ ಕ[...] ಕಾರ್ಮಿಕ ಪದ್ಧತಿಯೆಂಬ ಜೀತ. ಕಾರ್ಮಿಕ ಸಂಘಟ[ನೆ] ಕಟ್ಟಿಕೊಳ್ಳಲು ಹೋದರೆ, ಕೆಲಸ ಕಳೆದುಕೊಳ್ಳು[...] ಕಾರ್ಮಿಕ ಕಾನೂನುಗಳನ್ನು ಮತ್ತಷ್ಟು ದುರ್ಬಲಗ[...] ದುರ್ಬಲಗೊಳಿಸುತ್ತಿರುವ ಸರ್ಕಾರ. ಹೀಗಿರುವ ಪರಿ[ಸ್ಥಿತಿಯಲ್ಲಿ] ಇಡೀ ದೇಶದ ಜನತೆ ಒಂದಾಗುವ ಅನಿವಾ[ರ್ಯತೆ] ಉಂಟಾಗಿರುವುದು ಎದ್ದು ಕಾಣುತ್ತಿದೆ. ಹಾಗ[ಾಗಿಯೇ] ಸಾರ್ವತ್ರಿಕ ಮುಷ್ಕರದ ಕರೆಗೆ ತೀವ್ರ ಸ್ಪಂದನೆ ಉ[...] ಈ ಸಂದರ್ಭದಲ್ಲಿ ಎಲ್ಲಾ ಪ್ರಜ್ಞಾವಂತರೂ [...] ಜೊತೆಗೂಡುವುದು ನಮ್ಮ ಕರ್ತವ್ಯವೆಂದು ಭಾವಿ[...]

Extraausgabe. Sonnabend, den 9. November 1918.

Vorwärts

Berliner Volksblatt.

Zentralorgan der sozialdemokratischen Partei Deutschlands.

Generalstreik!

Der Arbeiter- und Soldatenrat von Berlin hat den Generalstreik beschlossen. Alle Betriebe stehen still. Die notwendige Versorgung der Bevölkerung wird aufrecht erhalten.

Ein großer Teil der Garnison hat sich in geschlossenen Truppenkörpern mit Maschinengewehren und Geschützen dem Arbeiter- und Soldatenrat zur Verfügung gestellt.

Die Bewegung wird gemeinschaftlich geleitet von der Sozialdemokratischen Partei Deutschlands und der Unabhängigen sozialdemokratischen Partei Deutschlands.

Arbeiter, Soldaten, sorgt für Aufrechterhaltung der Ruhe und Ordnung.

Es lebe die soziale Republik!

Der Arbeiter- und Soldatenrat.

2015ರ ಸಾರ್ವತ್ರಿಕ ಮುಷ್ಕರದ ಹಕ್ಕೊತ್ತಾಯಗಳು

1. ಸಾರ್ವಜನಿಕ ಪಡಿತರ ವಿತರಕ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು ಮತ್ತು ಸರಕು ಮಾರುಕಟ್ಟೆಯಲ್ಲಿ ಸಟ್ಟಾ ವ್ಯವಹಾರವನ್ನು ನಿಷೇಧಿಸುವ ಮೂಲಕ ಬೆಲೆ ಏರಿಕೆಯನ್ನು ತಹಬಂದಿಗೆ ತರಲು ತುರ್ತು ಕ್ರಮಗಳು
2. ಉದ್ಯೋಗ ಸೃಷ್ಟಿಗೆ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವ ಮೂಲಕ ನಿರುದ್ಯೋಗವನ್ನು ಕಡಿಮೆ ಮಾಡುವುದು
3. ಯಾವುದೇ ರಿಯಾಯಿತಿ ತೋರದೆ, ಎಲ್ಲಾ ಮೂಲ ಕಾರ್ಮಿಕ ಕಾನೂನುಗಳನ್ನೂ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವವರ ಮೇಲೆ ಕಠಿಣ ಕಾನೂನು ಕ್ರಮ
4. ಎಲ್ಲಾ ಬಗೆಯ ಕಾರ್ಮಿಕರಿಗೂ ಸಾರ್ವತ್ರಿಕ ಸಾಮಾಜಿಕ ಭದ್ರತೆಯನ್ನು ಒದಗಿಸುವುದು
5. 15,000 ರೂ.ಗಳಿಗೆ ಕಡಿಮೆಯಿಲ್ಲದಂತೆ ಕನಿಷ್ಠ ವೇತನ ಹಾಗೂ ಬೆಲೆ ಏರಿಕೆಗೆ ತಕ್ಕಂತೆ ಇದರ ಏರಿಕೆ
6. ಎಲ್ಲಾ ಕಾರ್ಮಿಕರಿಗೂ ಕನಿಷ್ಠ 3000 ರೂ.ಗಳ ಖಚಿತ ನಿವೃತ್ತಿ ವೇತನ
7. ಕೇಂದ್ರೀಯ ಮತ್ತು ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಬಂಡವಾಳ ಹಿಂತೆಗೆತವನ್ನು ನಿಲ್ಲಿಸುವುದು
8. ವರ್ಷಪೂರ್ತಿ ನಡೆಯುವ ಯಾವುದೇ ಕೆಲಸವನ್ನು ಗುತ್ತಿಗೆಗೆ ನೀಡುವುದನ್ನು ನಿಲ್ಲಿಸಬೇಕು ಮತ್ತು ಒಂದೇ ಬಗೆಯ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ ಹಾಗೂ ಸೌಲಭ್ಯಗಳನ್ನು ನೀಡಬೇಕು
9. ಬೋನಸ್ ಮತ್ತು ಪಿಎಫ್ ನೀಡಲು ಇರುವ ವೇತನದ ಮತ್ತು ಅರ್ಹತೆಯ ಎಲ್ಲಾ ಮಿತಿಗಳನ್ನು ತೆಗೆದುಹಾಕುವುದು ಮತ್ತು ಗ್ರಾಚ್ಯುಟಿಯ ಪ್ರಮಾಣವನ್ನು ಏರಿಸುವುದು
10. ಅರ್ಜಿ ಸಲ್ಲಿಸಿದ 45 ದಿನಗಳಲ್ಲಿ ಕಾರ್ಮಿಕ ಸಂಘದ ಕಡ್ಡಾಯ ನೋಂದಾವಣೆ ಮಾಡುವುದು ಮತ್ತು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಿ 87 ಮತ್ತು ಸಿ 98ನ್ನು ತಕ್ಷಣದಿಂದ ಜಾರಿ ಮಾಡುವುದು
11. ಕಾರ್ಮಿಕ ಕಾನೂನುಗಳ ತಿದ್ದುಪಡಿ ಮಾಡಬಾರದು
12. ರೈಲ್ವೇ, ವಿಮೆ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ವಿದೇಶೀ ನೇರ ಹೂಡಿಕೆಗೆ ಅವಕಾಶ ಕೊಡಬಾರದು.

ಹಿಂದೂಗಳೇ ಅಲ್ಪಸಂಖ್ಯಾತರಾದಾಗ ಏನಾಗುತ್ತದೆ?



• ಗೌರಿ ಲಂಕೇಶ್
editorlankesh@gmail.com

ಮಂಗಳವಾರ ಕೇಂದ್ರ ಸರ್ಕಾರವು 2011ರ ಧರ್ಮಾಧಾರಿತ ಜನಗಣತಿಯ ವಿವರಗಳನ್ನು ಬಿಡುಗಡೆ ಮಾಡಿದ್ದು ಅದನ್ನು ಚೆಡ್ಡಿ ಪಡೆಗಳು ತಮ್ಮ ವಿಕೃತ ಆಂದೋಲನಕ್ಕೆ ಬಳಸಿಕೊಳ್ಳುತ್ತಿವೆ. ಅದಕ್ಕೆ ಪುಷ್ಟಿ ನೀಡುವಂತೆ ಹಲವು ಮಾಧ್ಯಮಗಳೂ ಕೆಲಸ ಮಾಡಿವೆ. ಉದಾಹರಣೆಗೆ ಹೆಚ್ಚಿನ ಪತ್ರಿಕೆ ಮತ್ತು ವೆಬ್‌ಸೈಟುಗಳು 'ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ 13.8 ಕೋಟಿಯಿಂದ 17.22 ಕೋಟಿಗೆ ಏರಿದ್ದು ಹಿಂದೂಗಳ ಜನಸಂಖ್ಯೆ ಶೇ. 0.7ರಷ್ಟು ಕುಸಿದಿದೆ' ಎಂದೂ, 'ಮೊದಲ ಬಾರಿಗೆ ಹಿಂದೂಗಳ ಪ್ರಮಾಣ ಶೇ. 80ಕ್ಕಿಂತಲೂ ಕೆಳಗೆ ಕುಸಿದಿದೆ' ಎಂದೂ ವರದಿ ಮಾಡಿವೆ. ಇದನ್ನು ಬಳಸಿಕೊಂಡು ಚೆಡ್ಡಿಗಳು "ಮುಸಲ್ಮಾನರು ಹೀಗೇ ಹೆಚ್ಚುತ್ತಾ ಹೋದರೆ ಸದ್ಯದಲ್ಲೇ ಭಾರತದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಾರೆ" ಎಂದು ಬೊಬ್ಬೆಹೊಡೆಯಲು ಸಜ್ಜಾಗುತ್ತಿದ್ದಾರೆ. ಆದರೆ ವಾಸ್ತವ ಏನು?

ಈಗ ಭಾರತದ ಒಟ್ಟಾರೆ ಜನಸಂಖ್ಯೆ 121 ಕೋಟಿ. ಅದರಲ್ಲಿ ಹಿಂದೂಗಳು ಸುಮಾರು 97 ಕೋಟಿ ಇದ್ದರೆ ಮುಸಲ್ಮಾನರು ಕೇವಲ 17 ಕೋಟಿ. ಅಂದರೆ ಈಗಲೂ ಮುಸಲ್ಮಾನರಿಗಿಂತ ಇಲ್ಲಿ 80 ಕೋಟಿ ಹಿಂದೂಗಳೇ ಹೆಚ್ಚಿದ್ದಾರೆ. (ಹಿಂದೂಗಳು ಶೇ. 79 ಇದ್ದು ಮುಸಲ್ಮಾನರು ಶೇ. 14 ಇದ್ದಾರೆ)

ಹೌದು, ಹಿಂದೂ ಮತ್ತು ಮುಸಲ್ಮಾನರ ಶೇಕಡಾವಾರು ಏರಿಕೆಯಲ್ಲಿ ವ್ಯತ್ಯಾಸಗಳಿವೆ. ಉದಾಹರಣೆಗೆ 1951ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 84.1 ಹಿಂದೂಗಳಿದ್ದರೆ, ಈಗ ಅದು 79.8 ಶೇ. ಆಗಿದೆ. ಅಂದರೆ ಕಳೆದ ಆರು ದಶಕಗಳಲ್ಲಿ ಹಿಂದೂಗಳ ಸಂಖ್ಯೆ ಹೆಚ್ಚಾಗಿದ್ದರೂ ಶೇಕಡಾವಾರು ಲೆಕ್ಕದಲ್ಲಿ ಕೇವಲ 4.3% ಕಡಿಮೆ ಆಗಿದೆ ಅಷ್ಟೆ. ಹಾಗೆಯೇ ಇದೇ ಅವಧಿಯಲ್ಲಿ ಮುಸಲ್ಮಾನರ ಶೇಕಡಾವಾರು ಸಂಖ್ಯೆ 9.9%ರಿಂದ 14.23%ಗೆ ಏರಿದೆ (ಅದೂ ಶೇ. 4.3). ಇದನ್ನು ಇನ್ನೊಂದು ರೀತಿಯಲ್ಲೂ ನೋಡಬಹುದು.

ನರಹಂತಕ ನರೇಂದ್ರ ಮೋದಿ ಆರೋಪಿಸುವಂತೆ ಪ್ರತಿ ಮುಸಲ್ಮಾನ ಪುರುಷ ನಾಲ್ಕು ಮಹಿಳೆಯರನ್ನು ಮದುವೆಯಾಗಿ, 25 ಮಕ್ಕಳನ್ನು ಹೆರುತ್ತಾ ಬಂದಿದ್ದರೂ ಅವರು ತಮ್ಮ ಒಟ್ಟು ಜನಸಂಖ್ಯೆಯನ್ನು ಕೇವಲ 4 ಪರ್ಸೆಂಟ್ ಹೆಚ್ಚಿಸಿಕೊಳ್ಳುವುದಕ್ಕೆ ಬರೋಬ್ಬರಿ ಅರವತ್ತು ವರ್ಷಗಳನ್ನೇ ತೆಗೆದುಕೊಂಡಿದ್ದಾರೆ! ಹೀಗಿರುವಾಗ ಇಂತಹ ಮುಸಲ್ಮಾನರು ತಮಗಿಂತ ಶೇ. 66 ಹೆಚ್ಚಿರುವ ಹಿಂದೂಗಳನ್ನು ಹಿಂದಿಕ್ಕಿ ಬಹುಸಂಖ್ಯಾತರಾಗಬೇಕೆಂದರೆ ಇನ್ನೆಷ್ಟು ವರ್ಷಗಳು ಬೇಕಾಗಬಹುದು? ತಮಾಷೆಯ ವಿಷಯಕ್ಕೆ ಆಮೇಲೆ ಬರೋಣ.

1991-2001 ದಶಕದಲ್ಲಿ ಹಿಂದೂಗಳ ಸಂಖ್ಯೆ ಶೇ. 19.92 ಏರಿದ್ದರೆ ಮುಸಲ್ಮಾನರ ಸಂಖ್ಯೆ ಶೇ. 29.52 ಏರಿತ್ತು. ಅಂದರೆ ಎರಡೂ ಸಮುದಾಯಗಳ ನಡುವೆ ಬರೋಬ್ಬರಿ ಶೇ. 9.6 ವ್ಯತ್ಯಾಸವಿತ್ತು. ಆದರೆ 2001-2011ರ ದಶಕದಲ್ಲಿ ಹಿಂದೂಗಳ ಸಂಖ್ಯೆ ಶೇ. 16.76 ಏರಿದ್ದರೆ, ಮುಸಲ್ಮಾನರ ಸಂಖ್ಯೆ ಶೇ. 24.6 ಏರಿದೆ. ಈ ದಶಕದಲ್ಲಿನ ವ್ಯತ್ಯಾಸ ಶೇ. 7.84. ಅಷ್ಟೇ ಅಲ್ಲ, ಕಳೆದ ದಶಕದಲ್ಲಿ ಹಿಂದೂಗಳ ಸಂಖ್ಯೆ ಏರಿಕೆ ಪ್ರಮಾಣ ಶೇ. 3.1 ಮಾತ್ರ ಕಡಿಮೆ ಆಗಿದ್ದರೆ, ಮುಸಲ್ಮಾನರ ಸಂಖ್ಯಾ ಏರಿಕೆ ಪ್ರಮಾಣ ಶೇ. 4.9 ಕ್ಕೆ ಕುಸಿದಿದೆ. ಇದರ ಅರ್ಥ ಹಿಂದೂಗಳಂತೆ ಮುಸಲ್ಮಾನರೂ ಕಳೆದ ದಶಕದಲ್ಲಿ ಕಡಿಮೆ ಮಕ್ಕಳನ್ನು ಹೆರುತ್ತಿದ್ದಾರೆ ಎಂದಾಗುತ್ತದೆ. ಅಂದಹಾಗೆ 2001ರಿಂದ 2011ರ ತನಕ ಹಿಂದೂಗಳ ಜನಸಂಖ್ಯಾ ಏರಿಕೆಯಲ್ಲಿ ಶೇ 0.7 ಕುಸಿತ ಆಗಿದ್ದರೂ ಅವರ ಒಟ್ಟು ಸಂಖ್ಯೆಯಲ್ಲಿ ಸುಮಾರು 15 ಕೋಟಿ ಹೆಚ್ಚಳವಾಗಿದೆ.

ಜನಸಂಖ್ಯಾ ತಜ್ಞರ ಪ್ರಕಾರ ಯಾವುದೇ ಸಮುದಾಯ ಅಭಿವೃದ್ಧಿ ಹೊಂದುತ್ತಾ ಹೋದಂತೆ ಅದರ ಜನಸಂಖ್ಯಾ ಏರಿಕೆ ಪ್ರಮಾಣ ಕಡಿಮೆ ಆಗುತ್ತಾ ಬರುತ್ತದೆ. ಕೊನೆಗೆ ಅಭಿವೃದ್ಧಿ ಹೊಂದಿದ ನಂತರ ಜನಸಂಖ್ಯೆ ಕಡಿಮೆ ಆಗುತ್ತಾ ಹೋಗುತ್ತದೆ (ಈಗ ಅಮೆರಿಕ, ಯೂರೋಪ್ ಮತ್ತು ಜಪಾನ್ ದೇಶಗಳಲ್ಲಿ ಆಗುತ್ತಿರುವಂತೆ). ಈ ಕಾರಣಕ್ಕೆ ನಮ್ಮ ದೇಶದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಬಲಿಷ್ಠರಾಗಿರುವ ಹಿಂದೂಗಳ ಜನಸಂಖ್ಯಾ ಏರಿಕೆ ಪ್ರಮಾಣ ಕಳೆದ ಆರು ದಶಕಗಳಲ್ಲಿ ಕಡಿಮೆಯಾಗುತ್ತಾ ಬಂದಿದ್ದು ಅದೀಗ ಮುಸಲ್ಮಾನ ಸಮುದಾಯದಲ್ಲೂ ಪುನರಾವರ್ತನೆ ಆಗುತ್ತಿದೆ ಎಂದು ತಜ್ಞರು ವಿಶ್ಲೇಷಿಸುತ್ತಾರೆ. ಅಂದರೆ ಇನ್ನೆರಡು ಅಥವಾ ಮೂರು ದಶಕಗಳ ನಂತರ ನಮ್ಮ ಜನಸಂಖ್ಯಾ ಏರಿಕೆಯಲ್ಲಿ ಸ್ಥಗಿತತೆ ಕಂಡುಬಂದು ಆನಂತರ ಇಲ್ಲೂ ಜನಸಂಖ್ಯೆ ಕಡಿಮೆ ಆಗುತ್ತಾ ಹೋಗುತ್ತದೆ.

ಆದರೆ ಇಂತಹ ತರ್ಕಗಳು ಚೆಡ್ಡಿಗಳಿಗೆ ಬೇಡ. ಅವರಿಗೆ ಏನಿದ್ದರೂ ಸುಳ್ಳು ಸುದ್ದಿ ಹಬ್ಬಿಸಿ ಕೋಮು ದ್ವೇಷ ಹೆಚ್ಚಿಸಲು ಸಾಮಗ್ರಿ ಬೇಕಷ್ಟೆ. ಅದಕ್ಕೆಂದು ಅವರು ಎಂತಹ ಕೆಲಸಕ್ಕೂ ಹೇಸುವುದಿಲ್ಲ. ಉದಾಹರಣೆಗೆ 2001ರ ಧರ್ಮಾಧಾರಿತ ಜನಸಂಖ್ಯಾ ಲೆಕ್ಕಗಳು ಹೊರಬಿದ್ದಾಗ "ಅಯ್ಯಯ್ಯೋ, ಮುಸಲ್ಮಾನರ ಸಂಖ್ಯೆ ಅದೆಷ್ಟು ದೊಡ್ಡದಾಗಿ ಬೆಳೆದಿದೆ ನೋಡಿ" ಎಂದು ಬಾಯಿಬಡಿದುಕೊಂಡಿದ್ದರು. ಆದರೆ ಏನಾಗಿತ್ತೆಂದರೆ 1991ರಲ್ಲಿ ಜನಗಣತಿ ನಡೆದಾಗ ಮುಸಲ್ಮಾನರೇ ಹೆಚ್ಚಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದ್ದಿದ್ದರಿಂದ ಅಲ್ಲಿ ಜನಗಣತಿಯನ್ನು ಮಾಡಿರಲಿಲ್ಲ. ಆದರೆ 2001ರಲ್ಲಿ ಪರಿಸ್ಥಿತಿ ಒಂದಿಷ್ಟು ಸುಧಾರಿಸಿದ್ದರಿಂದ ಆ ರಾಜ್ಯದ ಜನಸಂಖ್ಯೆಯನ್ನೂ ಗಣನೆಗೆ ತೆಗೆದುಕೊಳ್ಳಲಾಗಿತ್ತು. ಆ ಕಾರಣಕ್ಕೆ ಲೆಕ್ಕದಲ್ಲಿ ಮುಸಲ್ಮಾನರ ಸಂಖ್ಯೆ ಹೆಚ್ಚಾಗಿತ್ತು. ಆದರೆ ಈ ಮುಖ್ಯ ಅಂಶವನ್ನು ಚೆಡ್ಡಿಗಳು ಮುಚ್ಚಿಟ್ಟು ಅಪಪ್ರಚಾರದಲ್ಲಿ ತೊಡಗಿದ್ದರು.

ಈಗಲೂ ಅಂತಹದ್ದೇ ಚೇಷ್ಟೆಯನ್ನು ಮಾಡುತ್ತಿದ್ದಾರೆ. "ಜನಗಣತಿಯ ಅಂಕಿಅಂಶಗಳ ಪ್ರಕಾರ ಬಾಂಗ್ಲಾ ದೇಶಕ್ಕೆ ಹತ್ತಿರವಿರುವ ಅಸ್ಸಾಮ್, ಪಶ್ಚಿಮ ಬಂಗಾಳ ಮತ್ತು ಇತರೆ ರಾಜ್ಯಗಳಲ್ಲಿ ಮುಸಲ್ಮಾನರ ಸಂಖ್ಯೆ ಹೆಚ್ಚಾಗಿದೆ. ಇದರ ಅರ್ಥ ಆ ದೇಶದಿಂದ ಮುಸಲ್ಮಾನರು ಅಕ್ರಮವಾಗಿ ಭಾರತವನ್ನು ಪ್ರವೇಶಿಸುತ್ತಿದ್ದಾರೆ" ಎಂದು ಚೆಡ್ಡಿಗಳು ಬೊಬ್ಬೆ ಹೊಡೆಯಲು ಶುರುಹಚ್ಚಿಕೊಂಡಿದ್ದಾರೆ. ಜಮ್ಮು ಮತ್ತು ಕಾಶ್ಮೀರದ (ಮುಸ್ಲಿಮ್ ಶೇ. 70) ನಂತರ ಅಸ್ಸಾಮ್ ಹಿಂದಿನಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರನ್ನು ಹೊಂದಿರುವ ರಾಜ್ಯ. ಆದರೆ ಅಲ್ಲೂ ಮುಸಲ್ಮಾನರ ಸಂಖ್ಯೆ ಶೇ. 34 ಅಷ್ಟೆ. ಆ ರಾಜ್ಯಕ್ಕೆ ಬಾಂಗ್ಲಾ ದೇಶದವರು ನುಸುಳಿರಬಹುದು ಎಂದು ತರ್ಕಕ್ಕೆ ಇಟ್ಟುಕೊಂಡರೂ ಒಂದು ಸಮಸ್ಯೆ ಎದುರಾಗುತ್ತದೆ. ಅದೇನೆಂದರೆ ಅಸ್ಸಾಂ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರನ್ನು ಹೊಂದಿರುವ ರಾಜ್ಯಗಳೆಂದರೆ ಉತ್ತರಖಂಡ ಮತ್ತು ಕೇರಳ. ಈ ಎರಡೂ ರಾಜ್ಯಗಳಿಗೆ ಅದು ಹೇಗೆ ಬಾಂಗ್ಲಾ ಮುಸಲ್ಮಾನರು ನುಸುಳಿರಬಹುದು ಎಂಬ ಪ್ರಶ್ನೆಗೆ ಚೆಡ್ಡಿಗಳಲ್ಲಿ ಉತ್ತರ ಇರಲು ಸಾಧ್ಯವಿಲ್ಲ.

ಈಗ ಅದ್ಯಾವಾಗ ಮುಸಲ್ಮಾನರು ಹಿಂದೂಗಳನ್ನು ಹಿಂದಿಕ್ಕಿ ಬಹುಸಂಖ್ಯಾತರಾಗುತ್ತಾರೆ ಎಂಬ ಲೆಕ್ಕಾಚಾರಕ್ಕೆ ಬರೋಣ. "ಹಿಂದೂಗಳ ದೇಶವಾದ ಹಿಂದೂಸ್ಥಾನದಲ್ಲೇ ಮುಸಲ್ಮಾನರು ಹಿಂದೂಗಳನ್ನು ಅಪ್ರಸ್ತುತರಾಗಿಸುತ್ತಾರೆ, ಹುಷಾರ್" ಎಂಬ ಚೆಡ್ಡಿಗಳ ಬೆದರಿಕೆ ಸರಿಯಾ ಅಥವಾ ಸಾಧ್ಯವಾ ಎಂದು ನೋಡಿದರೆ ನಗು ಉಕ್ಕಿ ಬರುತ್ತದೆ. 2001ರ ಧರ್ಮಾಧಾರಿತ ಜನಗಣತಿಯ ಅಂಕಿಅಂಶಗಳು ಪ್ರಕಟಗೊಂಡಾಗ ದಿಲೀಪ್ ಡಿಸೋಜಾ ಎಂಬುವವರು ಒಂದು ಲೆಕ್ಕ ಕೊಟ್ಟಿದ್ದರು. ಅದು ಹೀಗಿದೆ: "1991ರಿಂದ 2001ರ ಅವಧಿಯಲ್ಲಿ ಮುಸಲ್ಮಾನರ ಸಂಖ್ಯಾ ಏರಿಕೆ ಪ್ರಮಾಣ ಹಿಂದೂಗಳಿಗಿಂತ ಹೆಚ್ಚಾಗಿದೆ ನಿಜ. ಆದರೆ ಇದೇ ಪ್ರಮಾಣದಲ್ಲಿ ಮುಸಲ್ಮಾನರು ಹೆಚ್ಚುತ್ತಾ ಹೋದರೆ ಅವರು ಹಿಂದೂಗಳಷ್ಟೇ ಜನಸಂಖ್ಯೆಯನ್ನು ಹೊಂದುವುದಕ್ಕೆ 220 ವರ್ಷಗಳು (ಅಂದರೆ ಕ್ರಿಸ್ತಶಕ 2233ರಲ್ಲಿ) ಬೇಕಾಗುತ್ತದೆ. ಆದರೂ ಇನ್ನೂ 220 ವರ್ಷಗಳ ನಂತರ ಸಂಭವಿಸಬಹುದೆಂಬ ಲೆಕ್ಕವನ್ನು ಕೊಟ್ಟು ಹಿಂದೂ ಮೂಲಭೂತವಾದಿಗಳು ಜನರಲ್ಲಿ ದಿಗಿಲನ್ನು ಮೂಡಿಸಲು ಯತ್ನಿಸುತ್ತಿದ್ದಾರೆ. ಹಾಗೆ ನೋಡಿದರೆ, 500 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಮಸೀದಿಯೊಂದನ್ನೇ ಬಂಡವಾಳ ಮಾಡಿಕೊಂಡು ರಕ್ತದ ಹೊಳೆಯನ್ನೇ ಹರಿಸಿದ್ದವರಿಗೆ ಇದು ಕಷ್ಟವೇನಲ್ಲ. ಆದರೂ ಅವರು ಹೇಳುವುದು ನಿಜವೇ ಆಗುತ್ತದೆ ಎಂದು ತರ್ಕಕ್ಕೆ ಇಟ್ಟುಕೊಳ್ಳೋಣ. ಆಗ ಪರಿಸ್ಥಿತಿ ಹೇಗಿರುತ್ತೆ? ಈಗಿನ ಜನಸಂಖ್ಯಾ ಏರಿಕೆ ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಲೆಕ್ಕ ಹಾಕಿದರೆ 2233ರಲ್ಲಿ ಭಾರತದಲ್ಲಿ 56 ಬಿಲಿಯನ್ ಹಿಂದೂಗಳು ಮತ್ತು 56 ಬಿಲಿಯನ್ ಮುಸಲ್ಮಾನರೂ ಇರುತ್ತಾರೆ. ಅಂದರೆ ಈಗ ಇಡೀ ಜಗತ್ತಿನಲ್ಲಿರುವ ಒಟ್ಟು ಜನಸಂಖ್ಯೆಯ 16 ಪಟ್ಟು ಹೆಚ್ಚು ಜನ ಭಾರತದಲ್ಲೇ ಕಿಕ್ಕಿರಿದಿರುತ್ತಾರೆ. ಅದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾದರೆ ಹೀಗೆ ಮಾಡಿ ನೋಡಿ. ಈಗ ನೀವು ಈ ಲೇಖನವನ್ನು ಒಬ್ಬರೇ ಒಂದು ಕೊಠಡಿಯಲ್ಲಿ ಕೂತು ಓದುತ್ತಿದ್ದೀರಿ ಎಂದುಕೊಳ್ಳಿ. 2233ರಲ್ಲಿ ಅದೇ ಕೊಠಡಿಯಲ್ಲಿ ನಿಮ್ಮೊಂದಿಗೆ ಇನ್ನೂ ನೂರು ಜನ ಇರುತ್ತಾರೆ. ಅವರಲ್ಲಿ ಐವತ್ತು ಜನ ಹಿಂದೂಗಳು ಮತ್ತು ಇನ್ನೈವತ್ತು ಜನ ಮುಸಲ್ಮಾನರೂ ಇರುತ್ತಾರೆ. ಅಂದರೆ ಈಗಿನ ಪ್ರತಿ ಭಾರತೀಯನ ಬದಲಾಗಿ ನೂರು ಭಾರತೀಯರು ಇರುತ್ತಾರೆ. ಅಂದಹಾಗೆ, ಇಲ್ಲಿ ನಾನು ಭಾರತದಲ್ಲಿರುವ ಇತರೆ ಕ್ರಿಶ್ಚಿಯನ್, ಜೈನ, ಸಿಖ್, ಪಾರ್ಸಿ, ಬೌದ್ಧರು ಮತ್ತು ಇತರೆ ಧರ್ಮೀಯರ ಸಂಖ್ಯಾ ಏರಿಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈಗ ಹಿಂದೂ ಮೂಲಭೂತವಾದಿಗಳು ಭಾರತದಲ್ಲಿ ಕ್ರಿಶ್ಚಿಯನ್ನರ ಸಂಖ್ಯೆಯೂ ಏರುತ್ತಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದೂ ಹಾಸ್ಯಮಯವಾಗಿದೆ. 1991ರಲ್ಲಿ 1.9 ಕೋಟಿ ಕ್ರಿಶ್ಚಿಯನ್ನರಿದ್ದರು. ಅದು 2001ರ ಹೊತ್ತಿಗೆ 2.4 ಕೋಟಿ ಆಗಿತ್ತು. ಅಂದರೆ ಅವರ ಸಂಖ್ಯಾ ಏರಿಕೆ ಪ್ರಮಾಣ ಶೇ 2.3 ಆಗಿತ್ತು. ಆ ಲೆಕ್ಕದಲ್ಲಿ ಹಿಂದೂಗಳ ಸಂಖ್ಯಾಬಲಕ್ಕೆ ಸರಿಸಮನಾಗಲು ಕ್ರಿಶ್ಚಿಯನ್ನರಿಗೆ 670 ವರ್ಷಗಳು ಬೇಕು. ಆಗ (ಕ್ರಿಸ್ತಶಕ 2671ರಲ್ಲಿ) ಭಾರತದ ಜನಸಂಖ್ಯೆ ಎಷ್ಟಿರುತ್ತದೆ ಗೊತ್ತಾ? 195 ಟ್ರಿಲಿಯನ್ ಹಿಂದೂಗಳು ಮತ್ತು 195 ಟ್ರಿಲಿಯನ್ ಕ್ರಿಶ್ಚಿಯನ್ನರು. ಇಲ್ಲೂ ನಾನು ಮುಸಲ್ಮಾನರ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅಂದರೆ ಭಾರತದಲ್ಲಿ ಹಿಂದೂಗಳು ಮತ್ತು ಕ್ರಿಶ್ಚಿಯನ್ನರು ಸಮ ಪ್ರಮಾಣಕ್ಕೆ ಏರಿದಾಗ ಈಗಿರುವ ಜಗತ್ತಿನ ಒಟ್ಟು ಜನಸಂಖ್ಯೆಯ 60,000 ಪಟ್ಟು ಹೆಚ್ಚು ಜನ ಭಾರತದಲ್ಲಿರುತ್ತಾರೆ. ಆಗ ಈಗಿನ ಪ್ರತಿ ಭಾರತೀಯನ ಜಾಗದಲ್ಲಿ 4,00,000 ಭಾರತೀಯರಿರುತ್ತಾರೆ." ಈ ಲೆಕ್ಕಾಚಾರ ಹಿಂದೂ ಮೂಲಭೂತವಾದಿಗಳ ಹುಚ್ಚಾಟವನ್ನು ಬಯಲುಗೊಳಿಸುತ್ತದಲ್ಲವೇ.

ಇದೇ ದಿಲೀಪ್ ಡಿಸೋಜಾ ಅವರು ಈಗ ಹೊರಬಿದ್ದಿರುವ ಅಂಕಿಅಂಶಗಳನ್ನು ಆಧರಿಸಿ ಹೊಸ ಲೆಕ್ಕವನ್ನು ಕೊಟ್ಟಿದ್ದಾರೆ. ಹಿಂದೂ ಮತ್ತು ಮುಸಲ್ಮಾನರ ಸಂಖ್ಯಾ ಏರಿಕೆ ಪ್ರಮಾಣ ಕಳೆದ ಒಂದು ದಶಕದಲ್ಲಿ ಕಡಿಮೆ ಆಗಿರುವುದರಿಂದ ಅವರ ಹೊಸ ಲೆಕ್ಕಾಚಾರದ ಪ್ರಕಾರ ನಮ್ಮ ದೇಶದಲ್ಲಿ ಹಿಂದೂ ಮತ್ತು ಮುಸಲ್ಮಾನರ ಸಂಖ್ಯಾಬಲ ಸಮಾನ ಆಗುವುದಕ್ಕೆ 270 ವರ್ಷಗಳು ಬೇಕಾಗುತ್ತದೆ (ಕ್ರಿಸ್ತಶಕ 2285). ಅಂದರೆ ಜಗತ್ತಿನ ಭೂಭಾಗದಲ್ಲಿ ಕೇವಲ ಶೇ. 2.4 ಮಾತ್ರ ಹೊಂದಿರುವ ಭಾರತದಲ್ಲಿ ಈಗಲೇ ಪ್ರತಿ ಚದರ ಕಿಲೋಮೀಟರ್‌ನಲ್ಲಿ 382 ಜನರಿದ್ದಾರೆ. ಡಿಸೋಜಾ ಅವರ ಪ್ರಕಾರ 2285ರಲ್ಲಿ ಈ ಪುಟ್ಟ ಭೂಪ್ರದೇಶದಲ್ಲಿ 64 ಬಿಲಿಯನ್ ಹಿಂದೂಗಳು ಮತ್ತು 64 ಬಿಲಿಯನ್ ಮುಸಲ್ಮಾನರಲ್ಲದೆ ಇತರೆ ಧಾರ್ಮಿಕ ಸಮುದಾಯದ ಜನರೂ ಇರುತ್ತಾರೆ.

ಇಷ್ಟು ಜನಸಂಖ್ಯೆಯ ಭಾರವನ್ನು ಯಾವುದೇ ದೇಶಕ್ಕೂ ಹೊರಲು ಸಾಧ್ಯವಿಲ್ಲವೇ ಇಲ್ಲ. ಜನಸಂಖ್ಯೆ ಆ ಪ್ರಮಾಣಕ್ಕೆ ಏರಿದರೆ ದೇಶ ಮಾತ್ರ ನಾಶವಾಗುವುದಿಲ್ಲ, ಇಡೀ ಜಗತ್ತೇ ಪತನಗೊಳ್ಳುತ್ತದೆ. ಆದ್ದರಿಂದ ಚೆಡ್ಡಿಗಳ ಹುಚ್ಚು ಪ್ರಚಾರಗಳಿಗೆ ಕಿವಿಗೊಡದೆ ಜನಸಂಖ್ಯಾ ಅಂಕಿಅಂಶಗಳನ್ನು ಗಮನಿಸಿದರೆ ವಾಸ್ತವವಾಗಿ ನಮ್ಮ ದೇಶಕ್ಕೆ ಒಂದಾನೊಂದು ಕಾಲದಲ್ಲಿ ದೊಡ್ಡ ತಲೆನೋವಾಗಿದ್ದ ಜನಸಂಖ್ಯೆಯು ಸದ್ಯದಲ್ಲೇ ಸ್ಥಗಿತಗೊಂಡು, ಅನಂತರ ಕಡಿಮೆ ಆಗುತ್ತಾ ಹೋಗುವ ಸಾಧ್ಯತೆ ಅರ್ಥವಾಗುತ್ತದೆ.

ಇಲ್ಲಿ ಕೊಟ್ಟಿರುವ ಬಾಕ್ಸ್‌ನಲ್ಲಿನ ಅಂಕಿಗಳನ್ನು ಆಧರಿಸಿದರೆ, ಕಳೆದ ಆರು ದಶಕಗಳಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ಹಿಂದೂಗಳ ಶೇಕಡಾವಾರು ಪ್ರಮಾಣ ಕಡಿಮೆ ಆಗಿರುವುದು ಸ್ಪಷ್ಟವಾಗುತ್ತದಲ್ಲದೆ, ಕ್ರಿಶ್ಚಿಯನ್ನರು, ಸಿಖ್ಖರು ಮತ್ತು ಬೌದ್ಧರ ಶೇ. ಪ್ರಮಾಣವೂ ಅರವತ್ತು ವರ್ಷಗಳ ಹಿಂದೆ ಇದ್ದದ್ದಕ್ಕೆ ವಾಪಸ್ಸಾಗಿರುವುದೂ ಗೊತ್ತಾಗುತ್ತದೆ. ಹಾಗೆಯೇ ಜೈನರ ಶೇಕಡಾವಾರು 1951ಕ್ಕಿಂತಲೂ ಕಡಿಮೆಯಾಗಿರುವುದು ಮತ್ತು ಪಾರ್ಸಿಗಳು ಶೇ. 0.13ರಿಂದ ಶೇ. 0.06ಕ್ಕೆ ಕುಗ್ಗಿರುವುದೂ ಗಮನಕ್ಕೆ ಬರುತ್ತದೆ. ಈಗಿನ ಮಾಹಿತಿಯ ಪ್ರಕಾರದಂತೆ ಮುಸಲ್ಮಾನರೂ ತಮ್ಮ ಸಂಖ್ಯಾ ಏರಿಕೆ ಪ್ರಮಾಣವನ್ನು ಕಡಿಮೆಗೊಳಿಸುತ್ತಾ ಹೋಗುವ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಆದ್ದರಿಂದ ಚೆಡ್ಡಿಗಳ ಸುಳ್ಳು ಪಿತೂರಿಗೆ ಯಾರೂ ಕಿವಿಗೊಡದಿದ್ದರೆ ನಮ್ಮ ಸಮಾಜದ ಆರೋಗ್ಯಕ್ಕೂ, ದೇಶದ ಭವಿಷ್ಯಕ್ಕೂ ಒಳ್ಳೆಯದಾಗುತ್ತದೆ. ■

ಭಾರತದಲ್ಲಿ ಪ್ರಮುಖ ಧರ್ಮ ಸಮೂಹಗಳ ಜನಸಂಖ್ಯಾ ಹೆಚ್ಚಳದ ಶೇಕಡಾವಾರು

ಧರ್ಮ	1951 ಜನಸಂಖ್ಯೆ%	1961 ಜನಸಂಖ್ಯೆ%	1971 ಜನಸಂಖ್ಯೆ%	1981 ಜನಸಂಖ್ಯೆ%	1991 ಜನಸಂಖ್ಯೆ%	2001 ಜನಸಂಖ್ಯೆ%	2011 ಜನಸಂಖ್ಯೆ%
...ಂದು	84.1%	83.45%	82.73%	82.30%	81.53%	80.46%	79.8%
...ುಸ್ಲಿ...	9.9%	10.69%	11.21%	11.75%	12.61%	13.43%	14.23%
...ಶ್ಚಿಯನ್	2.3%	2.44%	2.60%	2.44%	2.32%	2.34%	2.3%
...ಖ್ಖರು	1.79%	1.79%	1.89%	1.92%	1.94%	1.87%	1.7%
...ೌದ್ಧರು	0.74%	0.74%	0.70%	0.70%	0.77%	0.77%	0.7%
...ೈನರು	0.46%	0.46%	0.48%	0.47%	0.40%	0.41%	0.4%
...ಾರ್ಸಿಗಳು	0.13%	0.09%	0.09%	0.09%	0.08%	0.06%	0.06%
...ತರೆ	0.43%	0.43%	0.41%	0.42%	0.44%	0.72%	0.72%

2011ರ ಧರ್ಮಾಧಾರಿತ ಶೇಕಡವಾರು ಜನಸಂಖ್ಯೆ



ಹಿಂದೂಗಳು:	79.80%
ಮುಸ್ಲಿಮರು:	14.2%
ಕ್ರಿಶ್ಚಿಯನ್ನರು:	2.3%
ಸಿಖ್ಖರು:	1.7 %
ಬೌದ್ಧರು ಜೈನರು:	1.24%
ಇತರೆ:	0.7%


ಆ ಹುಡುಗನನ್ನು ಕಂಬಕ್ಕೆ ಕಟ್ಟಿ ಸುಟ್ಟು ಬಿ

ದೇವರಾಜ ಅರಸರ ಜನ್ಮ ಶತಮಾನೋತ್ಸವ ಆರಂಭಗೊಂಡಿದೆ. ಸ್ಥಗಿತಗೊಂಡಿದ್ದ ಈ ಸಮಾಜದ ತೇರನ್ನು ಉಸುಬಿನಿಂದ ಎಳೆದಂತೆ ಒಬ್ಬರೇ ಎಳೆದ ನಂತರ ಬಹುಜನರ ಕೈಗೆ ಕೊಟ್ಟು ನಿರ್ಗಮಿಸಿದ ಆ ಪರಿವರ್ತನೆಯ ಹರಿಕಾರನ ಅವಧಿಯಲ್ಲಿ ನಡೆದ ಐತಿಹಾಸಿಕ ಘಟನೆ ಒಂದೆರಡಲ್ಲ, ಹುಡುಕುತ್ತ ಹೋದರೆ ಈ ನಾಡಿನ ಕೇರಿಕೇರಿಗಳಲ್ಲಿ ಅರಸು ಯುಗದ ಘಟನೆ ಅನಾವರಣಗೊಳ್ಳುತ್ತವೆ.

ಶಿವಮೊಗ್ಗ ಜಿಲ್ಲೆಯ ಕುಂಸಿ ಹೋಬಳಿಯ ಉಬ್ಬನಳ್ಳಿಯಲ್ಲಿ ಇದ್ದದ್ದು ಮೂರೇ ವರ್ಗದ ಜನ. ಲಿಂಗಾಯತರು, ದೇವಾಂಗದವರು ಮತ್ತು ಹರಿಜನರು. ಊರೆಲ್ಲರಿಗೆ ಭೂಮಿಯಿದ್ದರೆ ಹರಿಜನರಿಗ್ಯಾರಿಗೂ ಭೂಮಿಯಿರಲಿಲ್ಲ. ಆದ ಕಾರಣ ಮೇಲುಜಾತಿಯನ್ನೇ ಅವಲಂಬಿಸಿ ಬದುಕಬೇಕು. ತಮ್ಮ ಇಡೀ ಸ್ವಾತಂತ್ರವನ್ನೇ ಮೇಲುಜಾತಿಗೆ ಒತ್ತೆಯಿಟ್ಟಂತಿದ್ದ ಹರಿಜನರು ಹೇಗಿದ್ದರೆಂದರೆ ಊರಗೌಡರ ಎದುರು ಉಸಿರೆತ್ತುತ್ತಿರಲಿಲ್ಲ.

ಊರಿನಿಂದ ತುಸು ದೂರವಿದ್ದ ಹರಿಜನ ಕೇರಿಯಲ್ಲಿ ಕುಡಿಯುವ ನೀರಿನ ಬಾವಿಯಾಗಲಿ, ಹಳ್ಳವಾಗಲಿ ಇರಲಿಲ್ಲ. ಆದ್ದರಿಂದ ಲಿಂಗಾಯತರು ಮತ್ತು ದೇವಾಂಗದ ಕೇರಿಯ ಸಮೀಪವಿದ್ದ ಸೇದುವ ಬಾವಿಯ ಹತ್ತಿರಕ್ಕೋಗಿ ತಮಗೆ ನಿಗದಿಯಾದ ಜಾಗದಲ್ಲಿ ಕೊಡ ಇಟ್ಟುಕೊಂಡು ನಿಲ್ಲುತ್ತಿದ್ದರು. ಆಗ ಲಿಂಗಾಯತರ ಅಥವಾ ದೇವಾಂಗದವರ ಹೆಂಗಸರು ತಾವು ನೀರು ಸೇದಿಕೊಂಡ ನಂತರ ಹರಿಜನರ ಕೊಡಗಳಿಗೆ ನೀರು ತಂದುಹಾಕುತ್ತಿದ್ದರು.

ಇದೇನು ದಾನಧರ್ಮದ ಕೆಲಸದಂತೆ ನಡೆಯುತ್ತಿರಲಿಲ್ಲ. ಬದಲಿಗೆ "ಇವುರದೊಂದು ಗೋಳು. ಇವ್ಯಾಕ್ ಬತ್ತವ್ರೊ ಇಲ್ಲಿ" ಎಂಬ ತಾತ್ಸಾರದ ಸಿಡಿಮಿಡಿಯಲ್ಲೇ ಕೊಡಕ್ಕೆ ನೀರು ಹಾಕುತ್ತಿದ್ದರು. ಬಹುತೇಕ ಹೆಂಗಸರು ಇವರಿಗೆ ನೀರು ಕೊಡುವಂತಹ ಶ್ರಮ ನೆನೆಸಿಕೊಂಡೇ "ಅಯ್ಯೋ ಒಲೆಮ್ಯಾಲೆ ಅಕ್ಕಿ ಇಟ್ಟು ಬಂದಿದ್ದೆ", "ಸಾರಿನ ಮಡಕೆ ವಲೆ ಮ್ಯಾಲಿತ್ತು", "ಮಗುಬುಟ್ಟು ಬಂದಿದ್ದೆ. ಅದು ಅಳತಾಯಿರಬವುದು" ಎಂದು ಗಡಿಬಿಡಿಯಿಂದ ಓಡುತ್ತಿದ್ದರು. ಕಡೆಗೆ ಯಾರೊ ಒಬ್ಬರು ಬಾವಿಯ ನೀರನ್ನು ಕೊಡಗಳಿಗೆ ಹಾಕಿ ಕಳಿಸುತ್ತಿದ್ದರು.



ಕಾದೂಕಾದೂ ಸಾಕಾದ ಹರಿಜನರ ಹೆಂಗಸರು ಅಂತೂ ಒಂದು ಕೊಡ ನೀರು ಸಿಕ್ಕ ಸಮಾಧಾನದಲ್ಲಿ ಮನೆ ಸೇರುತ್ತಿದ್ದರು.

ಇದು ಒಂದು ದಿನದ ಗೋಳಲ್ಲ. ಇಂತಹ ಗೋಳಿನಿಂದ ರೋಸಿಹೋದ ಹೆಣ್ಣುಮಗಳೊಬ್ಬಳು ತನ್ನ ತಮ್ಮನಿಗೆ "ನಾಗು, ನಿನಿಗೆ ನಾಲ್ಕಾಣೆ ಕೊಡ್ತಿನಿ. ಹೋಗಿ ನೀರಾಕಿಸಿಕೊಂಡು ಬತ್ತಿಯೇನಪ್ಪ" ಎಂದಳು. ನಾಗರಾಜು ಆರನೇ ತರಗತಿ ಓದುತ್ತಿದ್ದ ಹುಡುಗ. ಅಕ್ಕನಿಂದ ನಾಲ್ಕಾಣೆ ಪಡೆದದ್ದೂ ಅಲ್ಲದೆ ಹಗ್ಗ ತೆಗೆದುಕೊಂಡು ತನ್ನ ಚಿಕ್ಕಪ್ಪನ ಮಕ್ಕಳನ್ನು ಕರೆದುಕೊಂಡು ನೇರ ಹೋದವನೇ ಬಾವಿಯಿಂದ ನೀರು ಸೇದಿ ಕೊಡಗಳಿಗೆ ತುಂಬಿಸಿಕೊಂಡು ಹೊರಟ. ಇದನ್ನ ನೋಡಿದ ಮಹಿಳೆಯೊಬ್ಬಳು "ಅಯ್ಯೋ, ಅಯ್ಯೋ, ಹಾಳಾಗೋಯ್ತಲಪ್ಪ ಬಾವಿ. ವಲೇರುಡುಗ ಬಾವಿ ನೀರ ಹಾಳು ಮಾಡಿದನಲ್ಲ ಬರ್‍ರೊ" ಎಂದು ಕೂಗಿದಳು. ಅಷ್ಟರಲ್ಲಿ ನಾಗರಾಜು ತಾನು ಸೇದಿಕೊಂಡ ನೀರಿನೊಡನೆ ಮನೆಗೆ ಬಂದ. ಘಟನೆ ಕೇಳಿದವರು ಇನ್ನೇನಾಗುವುದೋ ಎಂದು ಹೆದರಿ ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ಕಾಯುತ್ತ ಕುಳಿತರು.

ಅತ್ತ ಬಾವಿಗೆ ಸಂಬಂಧಪಟ್ಟವರು ಊರಗೌಡನ ಬಳಿಗೆ ಹೋದರು. ಎಲ್ಲವನ್ನು ಕೇಳಿದ ಗೌಡ, "ಏನೋ ಹುಡುಗ ತಪ್ಪು ಮಾಡ್ಯವ್ನೆ. ಗೋಮೂತ್ರವ ಬಾವಿಗೆ ಹಾಕಿ, ನೀರ ಉಪಯೋಗಿಸಿ" ಎಂದು ಸಮಾಧಾನದ ಮಾತನ್ನು ಹೇಳಲು ಯತ್ನಿಸಿದ. ಆದರೆ ರೋಷಗೊಂಡ ಜನ ಇಂತಹ ತೀರ್ಪಿನಿಂದ ಶಮನಗೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಹುಡುಗನನ್ನು ಎಳೆದು ತಂದು ಕಂಬಕ್ಕೆ ಕಟ್ಟಿ ಸುಟ್ಟು ಬುಡಬೇಕೆಂದು ತೀರ್ಮಾನಿಸಿದರು. ಏಕೆಂದರೆ ಇನ್ನುಮುಂದೆ ಅವರು ನೀರನ್ನು ಮುಟ್ಟುವಂತೆಯೇ ಇರಲಿಲ್ಲ. ಹುಡುಗನ ಅಣ್ಣ ಲಿಂಗಾಯತರು ಮತ್ತು ದೇವಾಂಗದವರಿಗೆ ಎಷ್ಟು ನಿಷ್ಠನಾಗಿದ್ದನೆಂದರೆ ಅವನು ಇದ್ದಿದ್ದರೆ ಅವನೇ ಹುಡುಗನ ಕತೆಯನ್ನು ಮುಗಿಸುತ್ತಿದ್ದನಂತೆ. ಸುದೈವಕ್ಕೆ ಆ ದಿನ ಆತ ಇರಲಿಲ್ಲ.

ಇದ್ದಕ್ಕಿದ್ದಂತೆ ಊರ ಮುಂದಕ್ಕೆ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಬಂದ. ಆರಡಿ ಎತ್ತರವಿದ್ದ ಯೋಗಪ್ಪ ಎಂಬ ಕೂರ್ಗಿ ಉಬ್ಬನಳ್ಳಿ ಮುಂದೆ ಕಾಣಿಸಿಕೊಳ್ಳಲು ಕಾರಣ ಕೆಲವೇ ದಿನಗಳ ಹಿಂದೆ ತುರ್ತುಪರಿಸ್ಥಿತಿ ಜಾರಿಯಾಗಿದ್ದು ಇಂದಿರಾ ಗಾಂಧಿಯ ಇಪ್ಪತ್ತಂಶದ ಕಾರ್ಯಕ್ರಮವನ್ನು ಅರಸು ಪರಿಣಾಮಕಾರಿಯಾಗಿ ಜಾರಿ ಮಾಡಿದ್ದರು. ಆದ್ದರಿಂದ ಇನ್ಸ್‌ಪೆಕ್ಟರ್ ಯೋಗಪ್ಪ ಉಬ್ಬನಳ್ಳಿಗೆ ಬಂದು, ಊರ ಮುಖಂಡರನ್ನು ಕರೆದು "ನಿಮ್ಮಲ್ಲಿ ಯಾರಾದ್ರು ಹರಿಜನರನ್ನ ಜೀತಕ್ಕೆ ಇಟ್ಟುಕೊಂಡಿದ್ದೀರ?" ಎಂದರು. ಎಲ್ಲರೂ ಒಕ್ಕೊರಲಿನಿಂದ "ಇಲ್ಲ ಸ್ವಾಮಿ" ಎಂದರು.

"ಬಡವರ ಒಡವೆ ಅಡಮಡಗಿಕೊಂಡಿದ್ರೆ, ಪಾತ್ರೆ ಪರಡಿ ಅಡವಿಟ್ಟುಕೊಂಡಿದ್ರೆ ಮತ್ತೆ ನಂಬಿಕೆ ಕ್ರಯಕ್ಕೆ ಭೂಮಿ ಬರೆಸಿಕೊಂಡಿದ್ರೆ ಅವನ್ನೆಲ್ಲಾ ತಂದು ಇಲ್ಲಿಡಿ" ಎಂದರು. ಹೆದರಿದ ಜನ ತಮ್ಮ ಕೃತ್ಯಗಳನ್ನು ಮಾಲು ಸಮೇತ ತಂದು ಒಪ್ಪಿಸಿದರು.

ಈ ಅನಾಹುತದ ನಡುವೆ ಊರ ಬಾವಿ ನೀರು ಹಾಳು ಮಾಡಿದ ಹುಡುಗನ ಸುದ್ದಿಯನ್ನು ಎಲ್ಲರೂ ಮುಚ್ಚಿಕೊಂಡು ಸುಮ್ಮನಾದರು. ಆದರೂ ಮುಂದೆ ಒಬ್ಬರಾದ ಮೇಲೆ ಒಬ್ಬರಂತೆ ನಾಗರಾಜನ ಮೇಲೆ ಇಲ್ಲದ ದೂರು ಕೊಡುತ್ತ ಸುಮಾರು ಇಪ್ಪತ್ತೈದು ದೂರು ಕೊಟ್ಟರು.

ಇನ್ಸ್‌ಪೆಕ್ಟರ್ ಯೋಗಪ್ಪನಿಗೆ "ಹುಡುಗ ಸರಿ... ಕೆಲಸಗಳನ್ನು ಮಾಡುತ್ತಿದ್ದಾನಲ್ಲ, ಆದರೂ ಯಾಕೆ ... ಸುಳ್ಳು ದೂರು ಕೊಡುತ್ತಿದ್ದಾರೆ" ಎಂದು ಸಂಶಯವಾ... ಆದರೂ ಯಾವ ದೂರಿನ ಮೇಲೂ ಅವರು ... ಮಾಡಲಿಲ್ಲ.

ಉಬ್ಬನಳ್ಳಿ ಹರಿಜನ ಕೇರಿಯ ಜನ ನಾಗರ... ಸಂಪೂರ್ಣ ಬೆಂಬಲ ಕೊಟ್ಟರು. ನಾಗರಾಜು ... ಓದಿ ಯೋಗಪ್ಪನಂತೆಯೇ ಆಗಬೇಕೆಂದು ಪೊ... ಇನ್ಸ್‌ಪೆಕ್ಟರಾಗಲು ಓಡಾಡಿದ. ಆಗಲಿಲ್ಲ, ಆದರ... ಊರಿನಲ್ಲಿ ಹೋರಾಟ ಮುಂದುವರಿಸಿ, ಜನರನ್ನು ಸ... ಕಾಡು ಕಡಿದು ಎಲ್ಲರೂ ಭೂಮಿ ಮಾಡಿಕೊ... ಮಾಡಿದ. ಆ ಸಮಯದಲ್ಲಿ ಬಂದ ಕಾಡಿನ ಇಲಾಖೆಯ... "ನೀವೂ ಬಡವರು, ನಾನೂ ಬಡವ. ನಮ್ಮೂರಿ... ಜಾತಿಯವರಿಗೂ ಭೂಮಿಯಿದೆ. ನಮಗೆ ಮಾತ್ರ... ಆದ್ದರಿಂದ ಅಡ್ಡಿ ಮಾಡಬೇಡಿ" ಎಂದು ವಿನಂತಿಸಿ... ಕಾಡಿನ ಇಲಾಖೆಯವರು ಸುಮ್ಮನಾದರು.

ನಾಗರಾಜ್ ತನ್ನ ಊರಿನಿಂದಲೇ ಮೇಲೇಳು... ಭದ್ರಾವತಿಯಿಂದ ಪ್ರೊ. ಬಿ. ಕೃಷ್ಣಪ್ಪ, ಚಿಕ್ಕಮಗ... ರುದ್ರಸ್ವಾಮಿ, ಹಾಸನದಿಂದ ಚಂದ್ರಪ್ರಸಾದ ತ್ಯಾಗಿ... ಸಿದ್ದಲಿಂಗಯ್ಯ, ದೇವನೂರು ಹೀಗೆ ದಲಿತ ಶಕ್ತಿ ... ಯುಗದಲ್ಲಿ ದೈತ್ಯ ಶಕ್ತಿಯಾಗಿ ಹೊರಹೊಮ್ಮಿತು. ಅ... ಸ್ವಾತಂತ್ರ ಹೋರಾಟದ ಗಂಡು ಭೂಮಿಯಾದ ಈ... ಕರೆಸಿದ ನಾಗರಾಜ್, ಎಲ್ಲರ ನೆನಪಿನಲ್ಲುಳಿಯುವ ... ಸಭೆ ಮಾಡಿದರು.

ಉತ್ತರ ಭಾರತದಲ್ಲಿ ಉರಿಯುತ್ತಿದ್ದ ತುರ್ತು... ಯನ್ನು ಕರ್ನಾಟಕದ ಮಟ್ಟಿಗೆ ದಲಿತರ ಅಭಿವೃ... ಬಳಸಿಕೊಂಡು ಮತ್ತೆ ಅಧಿಕಾರಕ್ಕೆ ಬಂದ ... ಕಾರಣದಿಂದ ನಡೆದುಹೋದ ಘಟನೆಗಳು, ಅವರ ... ನೋತ್ಸವದ ಈ ಸಮಯದಲ್ಲಿ ಧನ್ಯತೆಯಿಂದ ನೆನೆ... ವಂತೆ ಮಾಡುತ್ತಿದೆ. ಅಂದಿನ ದಲಿತ ಹೋರಾ... ಎಚ್. ನಾಗರಾಜ್ ಇಂದು ಎಲ್ಲ ಜನಾಂಗದ... ಪ್ರೀತಿಸುವ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾರೆ.

■ ಬಿ.ಚಂದ್ರೇ...


ಮೊಟ್ಟ ಮೊದಲು ನಾವು ಬದಲಾಗಬೇಕು

ಬಿಬಿಎಂಪಿ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಕಾಂಗ್ರೆಸ್ಸಿನ ತಾರಾತಿಗಡಿ ರಾಜಕಾರಣಕ್ಕೆ ಸರಿಯಾದ ಪೆಟ್ಟು ಬಿದ್ದಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ಸಕ್ರಮವಾಗಿಯೋ, ಅಕ್ರಮವಾಗಿಯೋ ಕಟ್ಟಿಕೊಂಡ ಮನೆ ಕೆಡವುವುದು ಸಾಮಾನ್ಯ ಕೃತ್ಯವಲ್ಲ. ಅಂತಹ ಕೃತ್ಯವೆಸಗಿದ ಸರಕಾರದ ಕ್ರಮವನ್ನು ಮಾಧ್ಯಮಗಳು ಖಂಡಿಸಿದವು. ಮನೆ ಕಳೆದುಕೊಂಡವರ ಗೋಳನ್ನು ವಾರಗಟ್ಟಲೆ ವಾಹಿನಿಗಳು ಬಿತ್ತರಿಸಿದವು. ಕೋರ್ಟಿನ ಕಾನೂನು ಜಾರಿ ಮಾಡಲು ಹೋಗಿ ಕೈ ಸುಟ್ಟುಕೊಂಡ ಕಾಂಗ್ರೆಸ್ಸು ಪಾಲಿಕೆ ವಿಷಯದಲ್ಲಿ ಹುಡುಗಾಟವಾಡಿತು. ಅದೆಲ್ಲಕ್ಕಿಂತ ಮುಖ್ಯವಾಗಿ ಒಮ್ಮೆ ಬಿಜೆಪಿಗೆ ಮತ ಹಾಕಿದ ಮನಸ್ಸು ಜನಿವಾರ ಹಾಕಿಕೊಂಡ ಹುಮ್ಮಸ್ಸಿನಿಂದಲೇ ಪದೇ ಪದೇ ಮಾಡುತ್ತಾ ಹೋಗುತ್ತೆ. ಚುನಾವಣೆಯಲ್ಲಿ ಚಲಾವಣೆಯಾದ ಮತಗಳ ಪರಸಂಟೇಜಿನಲ್ಲಿ ಬಿಜೆಪಿಗಳು ಗಳಿಸಿದ ಮತಗಳ ಪರಸಂಟೇಜ್ ಎಷ್ಟೇ ಲೆಕ್ಕ ಹಾಕಿದರೂ ಕಾಲು ಭಾಗಕ್ಕೂ ಕಡಿಮೆಯಿದೆ. ಆದರೂ ಚೆಡ್ಡಿಗಳು ಇಡೀ ಬೆಂಗಳೂರೇ ತಮ್ಮದಾದಂತೆ ಬೀಗುತ್ತಿವೆಯಲ್ಲಾ, ಥೂತ್ತೇರಿ!

* * *

ಬಿಬಿಎಂಪಿ ಚುನಾವಣೆಯಲ್ಲಿ ಅಧಿಕಾರ ಹಿಡಿಯದಿದ್ದರೂ ಹಿಡಿಯುವವರಿಗೆ ಕಾಲುತೊಡರು ಕೊಡಲು ಸಜ್ಜಾಗಿ ಎಲ್ಲಾ 198 ಕ್ಷೇತ್ರಗಳಿಗೂ ಹುರಿಯಾಳುಗಳನ್ನು ಮಾಜಿ ಪ್ರಧಾನಿಗಳಾದ ದೇವೇಗೌಡರು ನಿಲ್ಲಿಸಿದ್ದರಂತಲ್ಲಾ. "ಗೆಲ್ಲಲಾಗದಿದ್ದರೂ ಅಷ್ಟೂ ಕ್ಷೇತ್ರಗಳಿಗೆ ಕ್ಯಾಂಡಿಡೇಟ್ ಹಾಕಿದ್ದು ಸರಿಯೇ?" ಎಂದು ಕೇಳಿದರೆ ದೇವೇಗೌಡರು "ಬೇರೆ ಪಾರ್ಟಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡರೆಂಬ ಆಪಾದನೆಯಿಂದ ತಪ್ಪಿಸಿಕೊಳ್ಳಲು ಎಲ್ಲಾ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಹಾಕಿದ್ದೆವು. ಆದರೂ ಇನ್ನೂ ಮಿಕ್ಕಿದ್ದರು" ಎಂದಿದ್ದಲ್ಲದೆ, ಮುಂಗಡವಾಗಿ "ಸದರಿ ಚುನಾವಣೆಯಲ್ಲಿ ಅಧಿಕಾರ ಮತ್ತು ಹಣದ ದುರ್ಬಳಕೆಯಾಗಿದೆ" ಎಂದು ಕಾಂಗ್ರೆಸ್ ದೂರಿದರೂ ಬಿಜೆಪಿ ಗದ್ದಿತಲ್ಲಾ, ಥೂತ್ತೇರಿ!!

* * *



ಅರಸು ಶತಮಾನೋತ್ಸವ ಆರಂಭಗೊಂಡಿದೆ. ಅರಸು ವಿರೋಧಿಗಳು, ಫಲಾನುಭವಿಗಳು ಮತ್ತು ಅರ್ಧದಲ್ಲೇ ಕೈಕೊಟ್ಟವರೆಲ್ಲಾ ಅರಸು ಹೊಗಳಲು ಹೊಗಳಿಕೆ ಪದ ಹುಡುಕುತ್ತಿರುವಾಗ, ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ "ನನ್ನ ಈ 83ನೇ ವರ್ಷದಲ್ಲೂ ಅರಸುರವರಿಂದ ಕಲಿಯುವುದಿದೆ" ಎಂದು ಗಂಭೀರವಾಗಿ ಹೇಳಿದ್ದಾರಲ್ಲಾ, ಇದನ್ನು ಕೇಳಿಸಿಕೊಂಡ ಮಂಡ್ಯದ ಹಳೆಯ ಜನ "ಇದೇ ಕೃಷ್ಣ ಅರಸು ಜೊತೆ ಆಡಳಿತ ಮಾಡಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಜೂಬಿಲಿ ಪಾರ್ಕಿನಲ್ಲಿ ಉಪವಾಸ ಮಲಗಿದ್ದ ಅದೂ ಸೋಫಾದ ಮೇಲೆ ಹಾಕಿದ್ದ ನುಣ್ಣನೆಯ ಹಾಸಿಗೆಯ ಮೇಲೆ. ಅಂತಹ ವ್ಯಕ್ತಿ, ಈಗ ಅದೂ 83ನೇ ಗಡಿ ದಾಟುವ ವಯಸ್ಸಲ್ಲಿ, ಅರಸುರವರಿಂದ ನಾನು ಕಲಿಯಬೇಕಿದೆ ಎಂದರೆ ಖಂಡಿತ ಇದು ಯಾರಿಗೋ ಹೇಳಿದ ಮಾತಿರಬೇಕು" ಎಂದು ಆಡಿಕೊಂಡರಂತಲ್ಲಾ, ಥೂತ್ತೇರಿ!!

* * *

ಮಂಡ್ಯದಲ್ಲಿ ಕೃಷ್ಣ ಇಲ್ಲದ ಅರಸುರವರಿಂದ ಅದೇನೋ ಕಲಿಯಲು ತವಕಿಸಿದರೆ ಅತ್ತ ಮಾದೇಗೌಡರು "ನೀನೊಬ್ಬ ಮಂತ್ರಿ. ಅವನೊಬ್ಬ ಡಿ.ಸಿ. ನಿಮ್ಮನ್ನು ಕೊಲೆ ಮಾಡಿ ಜೈಲಿಗೆ ಹೋಗುತ್ತೇನೆ" ಎಂದು ಶ್ರೀನಿವಾಸ್ ಪ್ರಸಾದ್ ಮತ್ತು ಡಿಸಿಗೆ ಹೆದರಿಸಿಬಿಟ್ಟರಲ್ಲಾ. "ನಿಜಕ್ಕೂ ಇಂತಹ ಮಾತನ್ನು ಮಾದೇಗೌಡರಂತಹ ಗಾಂಧಿವಾದಿ ಆಡಬಾರದಿತ್ತು. ಈಗಾಗಲೇ ಗಾಂಧಿ ಭವನ ನಿರ್ಮಿಸಿಕೊಂಡು ಅದರ ಎದುರು ಕೂರುವ ಮಾದೇಗೌಡರಿಗೆ ಮತ್ತೊಂದು ಗಾಂಧಿ ಭವನವೇಕೆ? ಅದೂ 20 ಎಕರೆ ಒಳಗೊಂಡ ಕಟ್ಟಡ" ಎಂದು ಮಂಡ್ಯದಲ್ಲಿ ಚರ್ಚೆ ನಡೆಯುತ್ತಿದೆಯಂತಲ್ಲಾ. ಈ ಮಧ್ಯೆ ಅಜೇಯ ಎಂದು ಹೆಸರಿಟ್ಟುಕೊಂಡಿರುವ ಡಿಸಿ ಹೆದರಿ, ಕಂಗಾಲಾಗಿ ಮಾದೇಗೌಡನೆಂಬ ಮುದುಕ ಯಾವ ಮಾಯದಲ್ಲಾದರೂ ಬಂದು ಹೊಟ್ಟೆಗೆ ಚೂರಿ ಹಾಕಿದರೆ ಗತಿಯೇನೆಂದು ಓಡಿ ಹೋಗಿ ಕ್ರಿಮಿನಲ್ ಕೇಸ್ ದಾಖಲು ಮಾಡಿದ್ದಾನಂತಲ್ಲಾ.

ಮಾದೇಗೌಡರ ದನಿಯಲ್ಲಿ ಒಂದಿಷ್ಟು ಫ್ಯೂಡಲ್ ಒರಟುತನ ಗುರುತಿಸಿರುವ ದಸಂಸ ಹುಡುಗರು ಇದೇ ಮಾದೇಗೌಡರು ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಬಿದ್ದ ಮಳೆಯಿಂದ ಪುಸ್ತಕ ಹಾಳಾದ ಮಳಿಗೆಯವರು "ಮಳೆ ಹಾನಿಯಿಂದ ಸಾವಿರಾರು ರೂಪಾಯಿ ಪುಸ್ತಕ ಹಾಳಾದೊ ಸಾರ್" ಎಂದಾಗ "ಏನ್ರಿ ನೀವು ದಲಿತರಂಗೆ ಸುಳ್ಳೇಳತೀರಲ್ಲಾ" ಎಂದು ದಲಿತರ ಪ್ರತಿಭಟನೆ ಎದುರಿಸಿದ್ದರು. ಈಗಲೂ ಕೂಡ ಶ್ರೀನಿವಾಸ್ ಪ್ರಸಾದರಲ್ಲದೆ ಇನ್ಯಾರಾದರೂ ಮಂತ್ರಿಯಾಗಿದ್ದರೆ ಹೀಗನ್ನುತ್ತಿದ್ದರೆ ಎಂಬ ಚರ್ಚೆ ಹುಟ್ಟು ಹಾಕುತ್ತಿದ್ದಾರಲ್ಲಾ, ಥೂತ್ತೇರಿ!!

* * *

ಇದೆಲ್ಲಕ್ಕಿಂತ ಮುಖ್ಯವಾಗಿ ಮಾದೇಗೌಡ ಅನುಭವಿ ರಾಜಕಾರಣಿ. ಹಿಂದೊಮ್ಮೆ ಇಂಜಿನಿಯರ್ ಕೆನ್ನೆಗೆ ಹೊಡೆದ ಮಾದೇಗೌಡರ ಸಿಟ್ಟು ಸಕಾರಣವಾದದ್ದೆ ಎಂದು ಭಾವಿಸಿದರೂ ಮಂಡ್ಯದ ಸಭೆಗಳಲ್ಲಿ ಅಂತಹ ಮಾತುಗಳನ್ನ


ಥೂತ್ತೇರಿ



ಯಾಹೂ

ಆಡಬಾರದು. ಏಕೆಂದರೆ ಮಂಡ್ಯದಲ್ಲಿ ನಡೆಯುವ ಯ... ಪಾರ್ಟಿ ಸಭೆಗಳಾಗಲಿ, , ಹೊಡೆದಾಟಗ... ಮುಕ್ತಾಯವಾಗುತ್ತವೆ. ಏಕೆಂದರೆ ಅಲ್ಲಿ ಮಾತಿನ ... ಜಾಸ್ತಿಯಾಗಿ ತಾಳ್ಮೆಯ ಕೊರತೆ ಕಂಡುಬರ... ಅನಾದಿಕಾಲದಿಂದಲೂ ನಡೆದುಬಂದಿದೆ. ... ಹುಡುಗರಿಗೆ ಕೈ ಮುಂದೆ. ಅಂತಾದ್ದರಲ್ಲಿ ... ದಕ್ಷತೆಯಿಂದಲೇ ಕೆಲಸ ಮಾಡುತ್ತ ಹೋಗು... ಡಿಸಿಯನ್ನು ಮತ್ತು ಮಂತ್ರಿಯನ್ನು ಇಷ್ಟೊಂದು ಹ... ನಿಂದಿಸಿದರೆ ಮಂಡ್ಯದ ಹುಡುಗರು ಅದನ್ನೇ ಮು... ಸುತ್ತಾರೆ. ಆದ್ದರಿಂದ ಮಾದೇಗೌಡರ ಮೇಲಿನ ಕ್ರಿ... ಕೇಸು ಸರಿ ಎಂಬುದು ಸರ್ಕಾರದ ಕರ್ಮಾ... ವಾದವಾಗಿದೆಯಲ್ಲಾ, ಥೂತ್ತೇರಿ!

* * *

ಈ ವಾರದ ತಮಾಷೆಯ ಸಂಗತಿ ಯಾವು... ನಮ್ಮ ರಾಘವೇಶ್ವರ ಸ್ವಾಮೀಜಿಯವರು ತಮ್ಮ ... ಉಪನ್ಯಾಸದಲ್ಲಿ "ನಮ್ಮನ್ನು ನಾವು ತಿದ್ದಿಕೊಳ್ಳ... ಎಂದಿರುವುದು. ಬಹಳ ದುಬಾರಿಯಾದ ಜ್ಞಾನೋದ... ಅದಕ್ಕಾಗಿ ಈ ನಾಡು ಬಹಳ ಬೆಲೆ ತೆತ್ತಿದೆ... ಮುಖ್ಯವಾಗಿ ಕಲೆ, ಸಾಹಿತ್ಯ ಸಂಗೀತ ಮತ್ತು ರಾಜಕಾ... ಶ್ರೇಷ್ಠತೆಯನ್ನು ಕಾಣಿಸಲು ಹೆಣಗುತ್ತಿದ್ದ ಹವ್ಯಕ ... ಹೋದಲ್ಲಿ ಬಂದಲ್ಲಿ ತನ್ನ ಪ್ರದೇಶ ಮತ್ತು ಜಾ... ಮುಚ್ಚಿಡುತ್ತಿದೆಯಂತೆ. ಜನಾಂಗದ ಹೆಣ್ಣುಮಕ್ಕಳು ... ಕಡೆ ಹೋಗಲು ಅಂಜುತ್ತಿವೆಯಂತೆ. ಸ್ವಾಮೀಜಿಗಳ ... ವಾಗಿ ಹಿಂದೆ ಸರಿದ ಜಡ್ಜುಗಳು ರಾಘು ಎಂ... ಬಂದಾಗ ಮೌನ ತಾಳುತ್ತಾರಂತೆ. ಇಂತವರ ಪ... ಕಾರಣಕರ್ತರಾದ ಧರ್ಮೇಶ್ವರ ಸ್ವಾಮಿಗಳು ... ಬದಲಿಸುವ ಬದಲು ನಾವು ಬದಲಾಗಬೇಕೆಂದಿರು... ಜ್ಞಾನೋದಯವೆನ್ನಬೇಕೊ, ಪಶ್ಚಾತ್ತಾಪ ಎನ್ನಬೇಕೊ ... ತಪ್ಪೊಪ್ಪಿಗೆ ಎನ್ನಬೇಕೊ ತಿಳಿಯುತ್ತಿಲ್ಲವಲ್ಲಾ, ಥೂ...



ಗಾಂಧಿ, ಅಂಬೇಡ್ಕರ್, ಲೋಹಿಯಾ, ಕಾರ್ಲ್‌ಮಾರ್ಕ್ಸ್ ಜೋಕಾಲಿ

ಇಲ್ಲಾಗುತ್ತಿರುವ ಬೆಳವಣಿಗೆಗಳನ್ನು ಸುಮ್ಮನೆ ಗಮನಿಸಬೇಕು ...ದುಕೊಂಡಿದ್ದೆ. ಆದರೆ ಮೌನಕ್ಕೆ ನಾನಾರ್ಥ. ಹಾಗಾಗಿ ಒಂದಿಷ್ಟು ಮಾತು... ...ವು ಮಾತುಗಳಲ್ಲ, ತೊಳಲಾಟ.

...ನಾನೀಗ ಮರೆಯಕ್ಕಾಗದೆ ಒದ್ದಾಡ್ತ ಇರೋದು- ಅದು ಬರ್ಮಾ ದೇಶದ ...ಗ್ರಗಾಮಿ ಬೌದ್ಧರಿಗೆ ರೋಹಿಂಗ್ಯಾ ಮುಸ್ಲಿಮ್ ಜನಾಂಗದ ಬಗ್ಗೆ ಇರುವ ...ಷದ ಕಿಚ್ಚಿನ ಆಳ ಅಗಲ ತಿಳಿಯದೆ ಒದ್ದಾಡುತ್ತಿದ್ದೇನೆ. ಆ ದ್ವೇಷ ಈಗಲೂ ...ರ್ಮಾದಲ್ಲಿ ಧಗಧಗಿಸುತ್ತಿದೆ. 2012ರಲ್ಲಿ ಬೌದ್ಧ ಮಹಿಳೆಯ ಮೇಲೆ ಮೂವರು ...ರೋಹಿಂಗ್ಯಾ ಮುಸ್ಲಿಮ್ ಯುವಕರು ಅತ್ಯಾಚಾರವೆಸಗಿ ಕೊಲೆ ಮಾಡಿದ್ದಾರೆ ...ಬ ಗಾಳಿ ಸುದ್ದಿಗೆ ವಾಟ್ಸಪ್, ಫೇಸ್‌ಬುಕ್, ಕರಪತ್ರಗಳು ಉಪ್ಪು ಖಾರ ...ದವು. ವಿರಂಟುನಂಥ ಉಗ್ರ ಬೌದ್ಧ ಸನ್ಯಾಸಿಗಳು ಪ್ರಚೋದನಾಕಾರಿ ...ಷಣ ಮಾಡಿ ಅದು ಉಲ್ಬಣವಾಗಿ ನಂತರ ಭುಗಿಲೆದ್ದ ಜನಾಂಗೀಯ ...ಸೆಯಲ್ಲಿ ಸುಮಾರು ಐದು ಸಾವಿರ ರೋಹಿಂಗ್ಯಾ ಮುಸ್ಲಿಮರು, ಕೆಲ ...ದ್ಧರು ಜೀವ ಕಳೆದುಕೊಂಡರು. ಲಕ್ಷಾಂತರ ಮುಸ್ಲಿಮರು ದೇಶ ತೊರೆದರು. ...ದಿಗೂ ಸುಮಾರು ಎಂಟು ಸಾವಿರದಷ್ಟು ರೋಹಿಂಗ್ಯಾ ಮುಸ್ಲಿಮರು, ...ರೆ ದೇಶಗಳಲ್ಲಿ ಪ್ರವೇಶ ಸಿಗದ ಕಾರಣವಾಗಿ ಸಮುದ್ರದ ಮಧ್ಯೆ ಅನ್ನ ...ಹಾರಕ್ಕೆ ಹಾತೊರೆಯುತ್ತ ದೇವರ ಮೊರೆ ಹೋಗಿದ್ದಾರೆ. ದಕ್ಷಿಣ ಥಾಯ್ಲೆಂಡ್‌ನಲ್ಲಿ ...ಧಿಕೃತವಾಗಿ ದೇಶ ಪ್ರವೇಶಿಸಿದವರನ್ನು ಕೊಂದು ಹೂಳಲಾಗಿದೆ ಎಂದು ...ಸಿರುವ ಕೆಲವು ಸಾಮೂಹಿಕ 'ಸಮಾಧಿಗಳೂ ಪತ್ತೆಯಾಗಿವೆ. ಹಾಗೂ ...ಕ್ಕೆ ಒಳಕಾರಣ- ಅಮೆರಿಕಾ ಮತ್ತು ಚೈನಾಗಳು ಒಬ್ಬರಿಗಿಂತ ಇನ್ನೊಬ್ಬರು ...ಲರಾಗಲು ಬಡದೇಶಗಳನ್ನು ತಿಂದು ಮುಗಿಸುವ ಆಟದ ಭಾಗ ಇದು ...ಬ ವಿಶ್ಲೇಷಣೆಯೂ ಇದೆ.

ಇದೆಲ್ಲವನ್ನೂ ಅರ್ಥಮಾಡಿಕೊಳ್ಳುವುದು ಹೇಗೆ? ನನ್ನನ್ನು ಮತ್ತೂ ಸುಸ್ತು ...ಡಿದ್ದು ಎಂದರೆ - ಬುದ್ಧನ ಉಪಾಸಕರು ಅನ್ನಿಸಿಕೊಂಡವರು ಅದರಲ್ಲೂ ...ದ್ಧ ಸನ್ಯಾಸಿಗಳು- ಬುದ್ಧನ ಕಾರುಣ್ಯ, ಎಚ್ಚರ, ಈ ಕ್ಷಣ-ಇವುಗಳನ್ನು ದಿನಾ ...ಸುವವರು ಇದನ್ನೆಲ್ಲಾ ಹೇಗೆ ಮಾಡಿದರು?

ಈಗ ನಾವೂ ನಮ್ಮನ್ನು ನೋಡಿಕೊಳ್ಳಬೇಕಾಗಿದೆ, ನಾವು ನಂಬಿಕೊಂಡ ...ದ್ಧಾಂತ, ಆಲೋಚನಾ ಪಥ, ಪಂಥ- ಅದು ಎಷ್ಟೇ ಮಹೋನ್ನತ ಇದ್ದರೂ ...ಟು ರೋಗಕ್ಕೂ ಸಾರಾಯಿ ಮದ್ದು ಎಂಬಂತೆ ಅದು ನಮ್ಮೊಳಗೆ ...ಸ್ವವಾಗಿ ಇದ್ದಲ್ಲಿ, ತನ್ನಂತೆ ಅಲ್ಲದ ಇನ್ನೊಂದು ಇರಬಾರದು ಎಂಬ ...ಸನೆಗೆ ಇದು ಕಾರಣವಾಗಬಹುದೆ? ಬರ್ಮಾದ ಬೌದ್ಧರ ಮುಸ್ಲಿಮ್ ...ಸನೆಗೂ ಹೀಗೇನೊ ಕಾರಣ ಇದ್ದಿರಬಹುದೇ? ಈಗ ನಾವು ನಮ್ಮ ...ಕ ಬುದ್ಧಿಯನ್ನೆಲ್ಲಾ ಕೈಬಿಟ್ಟು- ಇದನ್ನು ನೋಡಬೇಕಾಗಿದೆ. ಯಾಕೆಂದರೆ, ...ಮು ನೂರ್ ಮತ್ತು ಸಿರಿಮನೆ ಜಂಟಿ ಪ್ರಯತ್ನದಿಂದಾಗಿ ಈ ಸಭೆ ಇಲ್ಲಾಗ್ತ ... ನಾಳೆ ನೂರ್ ಒಂಟಿ ಸಭೆ, ಸಿರಿಮನೆ ಒಂಟಿ ಸಭೆ ಜರುಗುವುದು ...ಧ್ಯ ಎಂದು ಹೇಳುವ ಧೈರ್ಯ ನಮಗಿಲ್ಲ, ಹಾಗೆಯೇ ನಾಳಿದ್ದು ಅವರ ...ನಗಳದ್ದೂ ಆಗಬಹುದು. ಹಾಗಾಗಿ ಐಕ್ಯತೆ ಹೇಳಿದರೂ ಅದರ ...ನೊಳಗೇನೆ ಒಡಕಿನ ಬೀಜಗಳು ಇರಬಹುದು. ಇದು, ನಮ್ಮ ಒಳಗನ್ನು ... ನೋಡಿಕೊಳ್ಳಬೇಕಾದ ಕಾಲ.

...ದಿಕ್ಕೆಟ್ಟಂತಾಗುತ್ತಿದೆ. ಈಗ ಒಂದು ಚಂದಮಾಮ ಕತೆ. ಇನ್ನೊಂದು ... ಮುಂದಿಡುವೆ. ಕತೆ - ಒಂದೂರಲ್ಲಿ ಒಂದು ಹಳ್ಳ ಇತ್ತು, ಆ ಹಳ್ಳವನ್ನು ...ವುದಕ್ಕೆ ಆ ದಡಕ್ಕೂ ಈ ದಡಕ್ಕೂ ಒಂದು ಚಪ್ಪಡಿ ಕಲ್ಲಿನಂತಿದ್ದ ಕಲ್ಲಿತ್ತು. ...ವಿ ಅದನ್ನು ತುಳ್ಕಂಡು ಆ ದಡದಿಂದ ಈ ದಡ, ಈ ದಡದಿಂದ ಆ ದಡ ...ದ್ದರು. ಇದು ಮಾಮೂಲಿ. ಹೀಗೆ ಒಂದಿನ ಒಬ್ಬ ಆ ಚಪ್ಪಡಿ ಕಲ್ಲನ್ನು ...ದ ಮೇಲೆ ತಿರುಗಿ ನೋಡ್ತನೆ- ಅವನಿಗೆ ಆ ಕಲ್ಲಲ್ಲಿ ಕೆತ್ತಿದ್ದ ದೇವಿವಿಗ್ರಹ ...ಬಿಡುತ್ತದೆ. ಅವ ಭಯಭೀತನಾಗುತ್ತಾನೆ. ತುಳಿದದ್ದಕ್ಕೆ ತಪ್ಪಾಯ್ತು ಅಂತ ...ಟು ಕಲ್ಲಿಗೆ ಶರಣು ಮಾಡ್ತಾನೆ. ಶರಣು ಮಾಡಿ ಮುಂದೆ ಹೋಗಲು ...ದಾಗ ಯಾರೋ ಬಿಗಿಯಾಗಿ ಅವನ ಮೊಣಕಾಲು ಹಿಡಿದು ನಿಲ್ಲಿಸಿದಂತಾಗಿ ...ದಕ್ಕೆ ಚಲಿಸಲಾಗದೆ ತಿರುಗಿ ನೋಡ್ತಾನೆ- ನೋಡಿದರೆ ಕಲ್ಲಲ್ಲಿ ಇದ್ದ ಆ ... ಕಾಣಿಸಿಕೊಳ್ಳುತ್ತಾಳೆ. ಅಂತಾಳೆ- 'ಲೋ ಮಗನೆ, ನನಗೆ ಗುಡಿ ಕಟ್ಟಿಸದೆ ...ೂ ತಪ್ಪಿಸಿಕೊಂಡು ಹೋಗ್ತಿಯಾ?'- ಇದು ಕತೆ.

...ಇದು ನಮ್ಮ ಕತೆಯೂ ಹೌದು. ನಾವು ಅಂದುಕೊಂಡ ದೊಡ್ಡ ಸಿದ್ಧಾಂತವೋ ...ನ್ನೊಂದೋ ಮಗದೊಂದೋ ಅದರ ಮೇಲೆ ನಡೆದುಕೊಂಡುಹೋದರೆ ... ದಾಟ್ಕೊಂಡು ಹೋಗಬಹುದು. ಆದಕ್ಕೆ ಶರಣು ಮಾಡಿ ಪೂಜೆ ...ದರೆ ಅದಕ್ಕೆ ಗುಡಿ ಕಟ್ಟಬೇಕಾಗುತ್ತದೆ. ಅದು ರಕ್ತವನ್ನೂ ಕೇಳಬಹುದು. ...ಗ ಕಲ್ಪನೆಗೆ ಬರುವ ಒಂದು ಇಂಥದೇ ಸಭೆ. ಇದೇ ವೇದಿಕೆಗೆ ...ೂ ಬರಲಿ. ಬೌದ್ಧ ಮೀಮಾಂಸಕ ನಾಗಾರ್ಜುನನೂ ಬರಲಿ. ಅಕ್ಕಪಕ್ಕ ... ಇಬ್ಬರೂ ಮಾತಾಡಲಿ. ನಾಗಾರ್ಜುನನ ವಾಗ್ಝರಿ ಮುಂದೆ ಬುದ್ಧ ... ಅಗ್ಗವಾಗುವುದಿಲ್ಲವಾ? ಆದರೆ ಸಭೆ ಮುಗಿದ ಮೇಲೆ ನಾವು ಎಲ್ಲೇ ...ದರೂ ನಮ್ಮನ್ನು ಹಿಂಬಾಲಿಸುವುದು ಬುದ್ಧನ ಮಾತುಗಳಲ್ಲವೆ? ಹಾಗಾದರೆ ...ಅದು ಯಾವುದು? ಇದರ ಪಾಠ ಏನು?

ಆಗಸ್ಟ್ 15 ಮತ್ತು 16ರಂದು ದಾವಣಗೆರೆಯಲ್ಲಿ ನಡೆದ ಸಮಾನತೆಗಾಗಿ ಜನಾಂದೋಲನ ಸಮ್ಮೇಳನದಲ್ಲಿ ಸಾಹಿತಿ ದೇವನೂರ ಮಹಾದೇವ ಅವರು ವ್ಯಕ್ತಪಡಿಸಿದ ಆತಂಕ, ತಳಮಳ ಮತ್ತು ಆಶಯಗಳು ಇಲ್ಲಿವೆ...

ಹೀಗಿರಬಹುದೆ? ಬುದ್ಧನು ಜೀವನಕ್ಕೆ ಸ್ಪಂದಿಸಿ ತಾನು ಗ್ರಹಿಸಿದ್ದಕ್ಕೆ ನುಡಿಕೊಟ್ಟನೆ? ನಾಗಾರ್ಜುನ ಆಲೋಚನೆಯಲ್ಲಿ ಗ್ರಹಿಸಿದ್ದನ್ನು ಸೂತ್ರೀಕರಿಸಿ ಜೀವನ ನೋಡಿದನೆ? ಅವನಿಗೆ ಅವನ ಆಲೋಚನೆಗಳಿಗೆ ತಕ್ಕಂತೆ ಜೀವನ ಕಂಡಿತೆ? ಇದು ಹೌದಾದರೆ ನಾವೇನು ಮಾಡುತ್ತಿದ್ದೇವೆ?

ಗೊತ್ತಿದೆ ನನಗೆ, ನಾನು ಕೊಂಕಣ ಸುತ್ತಿ ಮೈಲಾರಕ್ಕೆ ಬರುತ್ತಿದ್ದೇನೆ. ಕಷ್ಟ ಪಡುತ್ತಿದ್ದೇನೆ. ಗಾಂಧಿ, ಅಂಬೇಡ್ಕರ್, ಕಾರ್ಲ್ ಮಾರ್ಕ್ಸ್, ಲೋಹಿಯಾ ಹೀಗೆ ಇವರ ಒಬ್ಬೊಬ್ಬರ ಹೆಸರಲ್ಲೆ ಹತ್ತಾರು ನೂರಾರು ಭಿನ್ನ ಭಿನ್ನ ಸಂತಾನ ಪಂಥಗಳು, ಸಿದ್ಧಾಂತಗಳೂ ಹುಟ್ಟಿಕೊಂಡಿವೆ. ಕೆಲವು ಕಡೆ ಕೈ ಕೈ ಮಿಲಾಯಿಸಿವೆ. ಇಂಥದರಲ್ಲಿ ಈ ನಾಲ್ವರನ್ನು ಒಟ್ಟಿಗೆ ಸೇರಿಸಿದರೆ ಇನ್ನು ಏನಪ್ಪ ಹೇಗಪ್ಪ ನಿಭಾಯಿಸುವುದು? ಸುಳಿವುಗಳನ್ನು ಹುಡುಕುತ್ತಿದ್ದೇನೆ - ನಿಮ್ಮೊಡನೆ.

ನಾವು, ಮನುಷ್ಯರ ಮೈಮೇಲೆ ಬರುವ ದೆವ್ವ ದೇವರು ಅಂತ ಗಮನಿಸಿದರೂ ಒಂದಿಷ್ಟು ಸುಳಿವು ಸಿಗಬಹುದೇನೊ. ಈ ದೆವ್ವ ದೇವರುಗಳು ಮನುಷ್ಯರನ್ನು ತಾವೇ ಹಿಡ್ಕಂಡು ಬಿಟ್ಟರೆ ಆಗ ಅವು ಹೇಳ್ದಂಗೆ ಹೇಳಬೇಕಾಗುತ್ತಂತೆ. ಅವು ಕುಣಿಸಿದಂಗೆ ಕುಣೀಬೇಕಂತೆ. ಆದರೆ ಮನುಷ್ಯರೇ ಅವುಗಳನ್ನು ವಶಪಡಿಸಿಕೊಂಡು ಬಿಟ್ಟರೆ ಆದೇ ಅವು-ನಾವು ಹೇಳ್ದಂಗೆ ಕೇಳ್ತವಂತೆ, ನಾವು ಮಾಡು ಅಂದುದನ್ನು ಮಾಡ್ತವಂತೆ- ಇದು ಇಲ್ಲಿಗೆ ಸಾಕು.


ಈಗ ನಾವು ಹೆಸರೇಳುತ್ತಿರುವ ಗಾಂಧಿ, ಅಂಬೇಡ್ಕರ್, ಕಾರ್ಲ್‌ಮಾರ್ಕ್ಸ್, ಲೋಹಿಯಾ ಇವರನ್ನು ನಾವು ಹೀಗೆ ವಶಪಡಿಸಿಕೊಳ್ಳಬಲ್ಲವೆ? ನಾಡಿ ಹಿಡಿಯಬಲ್ಲವೆ? ಇಲ್ಲದಿದ್ದರೆ ಇವರೇನು ಕಮ್ಮಿ ಅಲ್ಲ! ನಮ್ಮಲ್ಲಿ ಒಡಕು ತಂದಿಡುತ್ತಾರೆ. ಈ ದೊಡ್ಡ ಹೆಸರುಗಳೇ ಪರಸ್ಪರ ಹೊಡೆದಾಡಿ ಅಂತ ನಮಗೆ ಹೇಳಿಕೊಡುತ್ತಾರೆ.

ಹೀಗಿರುವಾಗ ಹೇಗೆ? ಸದ್ಯಕ್ಕೆ ನನಗೆ ಕಾಣುತ್ತಿರುವ ದಾರಿ ಹೀಗಿದೆ: ಈ ನಾಲ್ವರನ್ನೂ ಒಟ್ಟಿಗೆ ಕೂರಿಸಿ ನಮ್ಮ ಇಂದಿನ ಬದುಕಿನ ಪ್ರೀತಿ ಸಹನೆ ಸ್ವಾವಲಂಬನೆ ಸಮಾನತೆ ಘನತೆಗಾಗಿ ಏನು ಮಾಡುವುದು ಎಂದು ಮಾತಾಡೋಣ. ಹೀಗೆ ಮಾತಾಡ್ತ ಅಮೆರಿಕಾದ ಸಕ್ಕರೆಯನ್ನು ನಾವು ಭಾರತಕ್ಕೆ ತರಿಸಿಕೊಳ್ಳಬೇಕಾದರೆ ನಾವು ಕೊಡಬೇಕಾದ ಆಮದು ಸುಂಕ ಶೇ. 224. ಆದರೆ ನಮ್ಮ ದೇಶದ ಸಕ್ಕರೆಯನ್ನು ಅಮೆರಿಕದವರು ತರಿಸಿಕೊಂಡರೆ ಅವರ ಆಮದು ಸುಂಕ ಶೇ. 40 ಮಾತ್ರ! ಭಾರತದ ಸಕ್ಕರೆಯೇನು ಕಹಿಯೇ? ಇದೇನು ಅನ್ಯಾಯ ಅಂತ ಅವರು ನೊಂದುಕೊಳ್ಳಬಹುದು. ಹಾಗೆಯೇ ಭಾರತದ ಪ್ರಧಾನಿಯವರು ಚೈನಾಕ್ಕೆ ಭೇಟಿ ನೀಡುವ ಮೊದಲು- ರೇಷ್ಮೆ ಆಮದು ಸುಂಕವನ್ನು 10%ಗೆ ಇಳಿಸಿಬಿಡುತ್ತಾರೆ. ಪರಿಣಾಮವಾಗಿ ಭಾರತದಲ್ಲಿ ರೇಷ್ಮೆಗೂಡಿನ ದರ ನೆಲ ಕಚ್ಚುತ್ತದೆ. ಪರಿಣಾಮವಾಗಿ ರೈತ ತಾನು ಬೆಳೆದ ರೇಷ್ಮೆ ಬೆಳೆಗಳನ್ನು ತಾನೆ ತನ್ನ ಕೈಯಾರೇ ಧ್ವಂಸ ಮಾಡಿದ್ದೂ ಆಯ್ತು, ಆತ್ಮಹತ್ಯೆಗಳೂ ಆಯ್ತು. ಇದು ಚರ್ಚೆಗೆ ಬಂದರೆ ಆ ನಾಲ್ವರು ಏನು ಹೇಳಬಹುದು? ಹೀಗಿರಬಹುದಾ-'ನಮ್ಮ ಕಾಲದಲ್ಲಿ ಹೀಗಿರಲಿಲ್ಲ, ಒಂದು ದೇಶದ ದೊರೆ ಇನ್ನೊಂದು ದೇಶದ ದೊರೆ ಆಸ್ಥಾನಕ್ಕೆ ಹೋಗುವಾಗ ನೆನಪಿನ ಕೊಡುಗೆಯಾಗಿ ರೇಷ್ಮೆ ಬಟ್ಟೆ ವಸ್ತ್ರ ಕೊಂಡೊಯ್ಯುತ್ತಿದ್ದರು' ಅನ್ನಬಹುದು. ಆದರೆ ಇಂದಿನ ದೊರೆ - ಅಂದರೆ ಭಾರತದ ಪ್ರಧಾನಿ - ಏನು ಮಾಡಿಬಿಟ್ಟರು? ಅವರು ಭಾರತದ ರೇಷ್ಮೆ ಆಮದು ಸುಂಕ ಇಳಿಸಿಬಿಟ್ಟದ್ದರಿಂದ ಇಲ್ಲಿನ ರೇಷ್ಮೆ ಧಾರಣೆ ನೆಲಕಚ್ಚಿ ರೇಷ್ಮೆ ಬೆಳೆಗಾರರು ತಮ್ಮ ಕಸುಬನ್ನೇ ಕೈಬಿಟ್ಟು ನೆಲಕಚ್ಚಿ ಕೂರುವಂತಾಯ್ತು, ಜೊತೆಗೆ ಒಂದಿಷ್ಟು ಆತ್ಮಹತ್ಯೆಗಳೂ ಆದವು. ಇದು ಹೇಗೆ ಕಾಣುತ್ತದೆ? ಇದು ರೇಷ್ಮೆ ಬೆಳೆಯುವ ರೈತರ ಕತ್ತನ್ನೆ ಕುಯ್ದು ಚೈನಾ ದೊರೆಗೆ ಅಂದರೆ ಅಲ್ಲಿನ ಪ್ರಧಾನಿ ಮೆಚ್ಚಿಸಲು ಕಾಣಿಕೆ ಕೊಟ್ಟಂತೆ ಅಲ್ಲವೆ? ಇಲ್ಲಿ ನಾವು ಇದನ್ನು ಆತ್ಮಹತ್ಯೆ ಅನ್ನುತ್ತಿದ್ದೇವೆ! ಡಬ್ಲ್ಯೂಟಿಓ (WTO), ಗ್ಯಾಟ್ ಒಪ್ಪಂದ, ಸಬ್ಸಿಡಿ ನೀತಿ, ರಫ್ತು ಆಮದು ಇಂತಹವುಗಳನ್ನು ನಾವು ಅರಳಿಕಟ್ಟೆ ಚರ್ಚೆಯನ್ನಾಗಿಸಿ ಈ ನಾಲ್ವರಿಗೂ ಈಗ ಮಾತಾಡುಸ್ಲಿ ಎಂದು ಕೇಳಬೇಕಾಗಿದೆ.

ಆ ಅರಳಿಕಟ್ಟೆ ಚರ್ಚೆಯಲ್ಲಿ ಗಾಂಧಿ 'ಅಯ್ಯೋ ನಾನೇನು ಮಾತಾಡ್ಲಪ್ಪಾ, ಆ ಗೂಡ್ಸೆ ಅನ್ನೋ ಪುಣ್ಯಾತ್ಮ ಗುಂಡು ಹೊಡೆದು ನನಗೆ ರಾಮ ಅನ್ನಿಸಿಬಿಟ್ಟ. ಇಲ್ಲದಿದ್ರೆ ನೋಡಕ್ಕಾಗದೆ ಇನ್ನಾರು ತಿಂಗಳೊಳಗೆ ನಾನೇ ಆತ್ಮಹತ್ಯೆ ಮಾಡ್ಕತಿದ್ದೇನೇನೊ' ಅನ್ನಬಹುದು. ಈ ಗಾಂಧಿ ಎಂಬಾತ ಗುಂಡಾಕಿಸಿಕೊಂಡು ಸತ್ತರೂ ಸ್ವಕೇಂದ್ರೀತ (Self centered) ಅಂದ್ಕಂಡು ಕಾರ್ಲ್‌ಮಾರ್ಕ್ಸ್ 'ಕ್ಯೂಬಾದಲ್ಲಿ ಕೃಷಿಯು ನೈಸರ್ಗಿಕವಾದ ಕಾರಣ ಕೃಷಿಗೆ ಖರ್ಚುವೆಚ್ಚ ಗೌಣವಾಗಿ ನೈಸರ್ಗಿಕ ಆಹಾರ ಸೇವನೆಯಿಂದ ಜನರ ಆರೋಗ್ಯವೂ ಉತ್ತಮವಾಗಿದೆ ಎನ್ನಬಹುದು. ಆದರೆ ಕ್ಯೂಬಾದ ಮೇಲಾದ ದಿಗ್ಬಂಧನದ ಸಂದರ್ಭವೇ ನೈಸರ್ಗಿಕ ಕೃಷಿಯನ್ನು ಅಲ್ಲಿ ಅನಿವಾರ್ಯ ಮಾಡಿತು. ಆದರೆ ನೈಸರ್ಗಿಕ ಕೃಷಿಗೆ ಭಾರತದಲ್ಲಿ ಸಮರ ಮಾಡಬೇಕಾಗಿದೆ. ಇದೇ ಸಂದರ್ಭ ನೋಡಿಕೊಂಡು ಗಾಂಧಿ 'ರಾಳೆಗಾಂವ್ ಸಿದ್ಧಿಯಲ್ಲಿ ಅಣ್ಣಾ ಹಜಾರೆ ಅಂತ ಒಬ್ಬ ನನ್ನ ಹೆಸರೇಳ್ಕಂಡು ಭೂಮಿಗೆ ನೀರು ತಂದವನೆ, ಅಂತರ್‌ಜಲ ಹೆಚ್ಚಿಸಿದ್ದಾನೆ, ಅದನ್ನೂ ನೋಡಿ. ಹಾಗೆ ಇಳಂಗೊ ರಂಗಸ್ವಾಮಿ ಅಂತ ತಮಿಳುನಾಡಿನ ಕುತ್ತಮ್‌ಬಾಕ್ಕಂ ಎಂಬ ಊರವನು ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿ ಇಡೀ ಊರನ್ನೇ ಸ್ವಾವಲಂಬಿ ಮಾಡವನೆ, ಬೇರೆ ಬೇರೆ ಜಾತಿಯವರಿಗೆ ಅಕ್ಕಪಕ್ಕದಲ್ಲೆ ಮನೆ ಕಟ್ಟವ್ನೆ - ಅವನನ್ನೂ ನೋಡಿ' ಅನ್ನಬಹುದು. ಬೇಡ ಅನ್ನುವವರು ಯಾರು? ನಾವು ಅಲ್ಲಿಗೆ ಈಗಾಗಲೇ ಹೋಗಿಬರಬೇಕಾಗಿತ್ತು.


ಹಾಗೇ ಆ ನಾಲ್ವರ ನಡುವೆ ಭಾರತದಲ್ಲಿ ಈಗ ಹೆಚ್ಚುತ್ತಿರುವ ಜಾತಿ ಟೌನ್‌ಶಿಪ್ ಬಗ್ಗೆ ಪ್ರಸ್ತಾಪವಾದರೆ ಎಲ್ಲರೂ ವಿಷಣ್ಣರಾಗಬಹುದು. ಕಾರ್ಲ್ ಮಾರ್ಕ್ಸ್ 'ಏನ್ರೀ ಇದು? ಬಾಂಬ್ ಹಾಕಬೇಕು ಅಷ್ಟೆ' ಅಂದರೆ ಅದಕ್ಕೆ ಗಾಂಧಿ 'ಜೀವಪಾಯವಾಗದಂತೆ' ಎಂದು ತಿದ್ದುಪಡಿ ಮಾಡಬಹುದು. ಗಾಂಧಿ ಮಾತಿಗೆ ಕಾರ್ಲ್‌ಮಾರ್ಕ್ಸ್ ಒಂದು ಸ್ಮೈಲ್ ಕೊಡಬಹುದು. ಇವರ ಮಾತು ಮುಗಿಯುವುದರೊಳಗೆ ಅಂಬೇಡ್ಕರ್ ಮತ್ತು ಲೋಹಿಯಾ ಜಂಟಿಯಾಗಿ ಕಾರ್ಯಾಚರಣೆ ಜರುಗಿಸಲೂಬಹುದು. ಹಾಗೇ ಅಂತರ್ಜಾತಿ-ಧರ್ಮ ಮದುವೆಗೆ ಬೇಡ ಅನ್ನುವವರು ಯಾರು? ಕಾರ್ಲ್‌ಮಾರ್ಕ್ಸ್ 'ಸ್ವಲ್ಪ ಅಂತಾರಾಷ್ಟ್ರೀಯ ಮದುವೆಗಳು ಇರಲಿ' ಅನ್ನಬಹುದಷ್ಟೆ. ಅಷ್ಟೇಕೆ, ಕಾಮ-ಪ್ರೇಮದ ವಿಚಾರದಲ್ಲಿ ಲೋಹಿಯಾ ಜೊತೆ ಗುಪ್ತ ಸಮಾಲೋಚನೆಯನ್ನೂ ಮಾಡಬಹುದು. ಇದನ್ನು ಮಾರ್ಕ್ಸ್ ಅರ್ಥ ಮಾಡಿಕೊಳ್ಳಬಹುದು. ಆದರೆ ಗಾಂಧಿ, ಅಂಬೇಡ್ಕರ್‌ರವರ ಕಣ್ತಪ್ಪಿಸಬೇಕಷ್ಟೆ.

ಆಮೇಲೆ ಕಾರ್ಲ್‌ಮಾರ್ಕ್ಸ್ ಹೇಳಬಹುದು- ಗ್ರೀಸ್ ದೇಶಕ್ಕೂ ಹಾಗೂ ಬಂಡವಾಳದ ಜಾಗತೀಕರಣಕ್ಕೂ ಯುದ್ಧವಾಗಿ ಗ್ರೀಸ್ ಸೋತು ನೆಲ ಕಚ್ಚಿದ ಮೇಲೆ, ಗ್ರೀಸ್ ದೇಶವನ್ನು ಲೂಟಿ ಮಾಡಿದ್ದ ಅಲ್ಲಿನ ಬಂಡವಾಳಿಗರು ಶತಕೋಟಿಗಟ್ಟಲೆ ತಮ್ಮ ಲೂಟಿ ಸಂಪತ್ತನ್ನು ಗ್ರೀಸ್ ದೇಶದಿಂದ ಹೊರ ದೇಶಗಳಿಗೆ ಸುರಕ್ಷಿತವಾಗಿ ಸಾಗಿಸಿಬಿಟ್ಟಂತೆ ಭಾರತದಲ್ಲೂ ನಾಳೆ ಆಗಬಹುದು. ಭಾರತದಲ್ಲಿ ಬಕಾಸುರರಂತ ಬಂಡವಾಳಗಾರರಿದ್ದಾರೆ. ಈಗಲಿಂದಲೇ ಅವರ ಮೇಲೆ ಒಂದು ಕಣ್ಣಿಡಿ ಎನ್ನಬಹುದು. ಭಾರತದಲ್ಲಿ ಕೆಲವರ ಸಾರ್ವಜನಿಕವಾಗ ಬೇಕಿದ್ದ ನೈಸರ್ಗಿಕ ಸಂಪತ್ತು ಲೂಟಿ ಲಕ್ಷ ಲಕ್ಷ ಕೋಟಿಯಂತೆ. ಖಾಸಗೀ ಸಂಪತ್ತಿಗೆ ಹೆಚ್ಚೆಂದರೆ (ವಹಿವಾಟು ಇರುವುದರಿಂದ) ಒಂದು ಸಾವಿರ ಕೋಟಿಗೆ ಮಿತಗೊಳಿಸಿ, ಅದಾದ ಮೇಲಿನ ನೈಸರ್ಗಿಕ ಲೂಟಿಯ ಆ ಹೆಚ್ಚುವರಿ ಸಂಪತ್ತನ್ನು ಸಾರ್ವಜನಿಕ ಉಪಯೋಗಕ್ಕೆ ಅಂದರೆ - ಸಮಾನ ಉಚಿತ ಶಿಕ್ಷಣ, ಆರೋಗ್ಯ, ಅಂತರ್ಜಲ ಹೆಚ್ಚಿಸುವಿಕೆ- ಇತ್ಯಾದಿ, ಇತ್ಯಾದಿ ಸಾರ್ವಜನಿಕ ಕಾರ್ಯಕ್ಕೆ ಬಳಕೆಯಾಗಲಿ ಎಂದು ಮೊದಲ ಹೆಜ್ಜೆಯಿಡಲು, ಹೋರಾಡಲು ತಡೆದವರು ಯಾರು? ಗಾಂಧಿ, ಅಂಬೇಡ್ಕರ್, ಲೋಹಿಯಾ, ಕಾರ್ಲ್ ಮಾರ್ಕ್ಸ್ ಒಟ್ಟಾಗಿ ನಮಗೆ ಈ ಪ್ರಶ್ನೆ ಕೇಳಿಬಿಟ್ಟರೆ ಎಂದು ಭಯವಾಗುತ್ತಿದ್ದು, ಒಂದು ಗಾಂಧಿ ನುಡಿಯಿಂದಲೇ ಮಾತು ಮುಗಿಸಿಬಿಡುತ್ತೇನೆ: "ಮನುಷ್ಯ ತನ್ನನ್ನು ವಂಚಿಸಿಕೊಂಡಷ್ಟು ಬೇರೆ ಯಾರನ್ನೂ ವಂಚಿಸಿರಲಾರ"- ಈ ವಾಕ್ಯದಲ್ಲಿ ಆರು ಪದಗಳಿವೆ. ಒಂದರಕೆಳಗೊಂದು ಈ ಪದಗಳನ್ನು ಇಟ್ಟರೆ ಅದು ನಮ್ಮ ಲಂಕೇಶರ ನೀಲು ಪದ್ಯ ಆಗಿಬಿಡುತ್ತದೆ. ನಾವು ಆ ಪದಗಳ ಒಳಗನ್ನು ಅದರೊಳಗಿರುವ ನಮ್ಮನ್ನು ಕಂಡರೆ ಹೆಚ್ಚು ಲೋಕ ಬಿಚ್ಚಿಕೊಳ್ಳುತ್ತಾ ಸಮಷ್ಟಿ ಪ್ರಜ್ಞೆಗೂ ನಮಗೂ ಹೊಕ್ಕುಳಬಳ್ಳಿ ನಂಟು ಉಂಟಾಗಿ ನಮಗೂ ನಡೆನುಡಿ ಸಿಗಬಹುದು. ಆಗ ನಾವು ಮೊಳಕೆಯೊಡೆಯಲೂಬಹುದು. ಯಾಕೆಂದರೆ, ಕರ್ನಾಟಕದ ಮಣ್ಣಲ್ಲಿ ಆ ಮೇಲ್ಕಂಡ ನಾಲ್ವರಂತೆಯೇ ನೂರಾರು ವಚನಕಾರರು ಒಂದೇ ಕಾಲಮಾನದಲ್ಲಿ ತಾವೆಲ್ಲರೂ ಒಬ್ಬ ಎಂಬಂತೆ ವಿಮೋಚನೆಗಾಗಿ ಕೈ ಕೈ ಹಿಡಿದು ಒಟ್ಟಾಗಿ ನಡೆದಾಡಿದ ನೆಲ ಇದು. ಅವರ ಉಸಿರಾಟಗಳು ಇಲ್ಲಿ ಇನ್ನೂ ಉಸಿರಾಡುತ್ತಿರಲೂಬಹುದು.



■ ದೇವನೂರ ಮಹಾದೇವ

ಮಾದೇಗೌಡರ ಇಬ್ಬಂದಿತನ ಮತ್ತು ಪೊಲಿಟಿಕಲ್ ಪಾಳೇಗಾರಿ



'ನೀವೊಬ್ಬ ಮಿನಿಸ್ಟರ್. ಇವನೊಬ್ಬ ಡಿಸಿ. ನಿಮ್ಮೆಲ್ಲನ್ನೂ ಕೊಲೆ ಮಾಡಿ ಜೈಲಿಗೆ ಹೋಗ್ತೀನಿ.'

ಹಳೇಕಾಲದ ಅಂಬಿ ಸಿನಿಮಾ ಶೈಲಿಯ ಇಂತಹ ರೆಬೆಲ್ ಮಾತುಗಳನ್ನು ಉದುರಿಸಿದ್ದು ಹಿರಿಯ ಗಾಂಧೀವಾದಿ, ಮಂಡ್ಯ ಗಾಂಧಿ ಭವನ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಮತ್ತು ಮಾಜಿ ಸಂಸದ ಜಿ.ಮಾದೇಗೌಡರು. ಹೇಳಿಕೇಳಿ ಅವರಿಗೀಗ 88ರ ಪ್ರಾಯ. ಈ ವಯಸ್ಸಿನಲ್ಲಿ ಕೊಲೆ ಮಾಡುವ ತಾಕತ್ತು ಮಾದೇಗೌಡರಲ್ಲಿ ಉಳಿದಿಲ್ಲ ಎನ್ನುವುದು ವಾಸ್ತವವೇ ಆದರೂ ಅವರ ಮಾತಿನಲ್ಲಿ ಪಾಳೇಗಾರಿಕೆಯ ಫ್ಯೂಡಲ್ ಗತ್ತು ನುಸುಳಿರುವುದು ಸುಳ್ಳಲ್ಲ. ಇದನ್ನೊಂದು ಸಾತ್ವಿಕ ಸಿಟ್ಟು ಅಂತಲೇ ಪರಿಗಣಿಸಿದರೂ ಹಾಗೆ ರೇಗಾಡುವ ನೈತಿಕತೆಯನ್ನು ಮಾದೇಗೌಡರು ಉಳಿಸಿಕೊಂಡಿದ್ದಾರಾ ಎಂದರೆ, ಅದೂ ಇಲ್ಲ. ಆರು ಬಾರಿ ಶಾಸಕರಾಗಿ, ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಅವರು ಇತ್ತೀಚಿನ ದಿನಗಳಲ್ಲಿ ಪುತ್ರವ್ಯಾಮೋಹಿಯಾಗಿ ಗುರುತಿಸಿಕೊಳ್ಳುತ್ತಿರುವುದೇ ಹೆಚ್ಚಾಗಿದೆ. ಏಕೆಂದರೆ, ಈ ಇಳಿವಯಸ್ಸಿನಲ್ಲೂ ಅವರು ತಮ್ಮ ಮಗ ಮಧುಗೌಡನಿಗೆ ರಾಜಕಾರಣದಲ್ಲಿ ಸೂಕ್ತ ನೆಲೆ ಕಲ್ಪಿಸಲು ತಿಣುಕಾಡುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಗಾಂಧಿ ಭವನ ನಿರ್ಮಿಸಲು ಜಾಗ ಪಡೆದು ಅಲ್ಲಿ ವಾಣಿಜ್ಯ ಮಳಿಗೆಗಳನ್ನೂ ನಿರ್ಮಿಸಿ ಭೂಮಂಜೂರಾತಿ ನಿಯಮವನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪವೂ ಅವರ ಮೇಲಿದೆ. ಇತರ ರಾಜಕೀಯ ನಾಯಕರುಗಳ ಜೊತೆಗೆ ಪೊಲಿಟಿಕಲ್ ವೈರತ್ವ ಸೃಷ್ಟಿಸಿಕೊಂಡು ಸಹಜ ರಾಜಕಾರಣದ ಕಾದಾಟಕ್ಕಿಳಿದಿರುವ ಅವರಲ್ಲಿ 'ಗಾಂಧಿವಾದ'ದ ಛಾಯೆ ಉಳಿದಿಲ್ಲ ಎಂಬ ಮಾತುಗಳು ಕೇಳಿಬರುತ್ತಿರುವ ಹೊತ್ತಿನಲ್ಲೇ ಈ ರಾದ್ಧಾಂತ ಮಾಡಿಕೊಂಡು ಅಂಥಾ ಹೇಳಿಕೆಗಳಿಗೆ ಪುಷ್ಟಿ ಒದಗಿಸಿಕೊಡುತ್ತಿದ್ದಾರೆ.

ಮಗ ಮಧುಗೌಡನನ್ನು ಹೇಗಾದರೂ ಸರಿ ಎಂಎಲ್‌ಎ ಮಾಡಲೇಬೇಕೆಂದು ಮಾದೇಗೌಡರು ನಡೆಸುತ್ತಿರುವ ತಿಣುಕಾಟಗಳ್ಯಾವುವೂ ಕೈ ಹಿಡಿಯುತ್ತಿಲ್ಲ. ಜನರೊಂದಿಗೆ ಬೆರೆಯದ ಸ್ಟಾಂಡರ್ಡ್ ರಾಜಕಾರಣಿಯಂತೆ ಪೋಜು ಕೊಡುವ ಮಧುಗೌಡನನ್ನು ಜನ 'ನಮ್ಮವನೆಂದು' ಸ್ವೀಕರಿಸಿದಂತೆ ಕಾಣುತ್ತಿಲ್ಲ. ಮಗನಿಗೆ ರಾಜಕೀಯ ಸ್ಥಾನಮಾನ ಕೊಡಿಸುವ ಏಕೈಕ ಉದ್ದೇಶದಿಂದ ಗಾಂಧಿವಾದಿ ಎಂದು ಹೇಳಿಕೊಳ್ಳುತ್ತಲೇ ಗಾಂಧಿ ಕೊಂದವರ ಪಕ್ಷವೆಂದೇ ಜನಸಾಮಾನ್ಯರಿಂದ ಕರೆಸಿಕೊಳ್ಳುವ ಬಿಜೆಪಿಯ ಸಂಗ ಮಾಡುವ ಮೂಲಕ ಮಾದೇಗೌಡರು ತಮ್ಮ ಸ್ವಾರ್ಥ ಮತ್ತು ಇಬ್ಬಂದಿತನವನ್ನು ಜಗಜ್ಜಾಹೀರುಮಾಡಿಕೊಂಡಿದ್ದರು. ಆ ಮೂಲಕ ಜನರ ಮನಸ್ಸಿನಲ್ಲಿ ಗಾಂಧಿವಾದಿಯಾಗಿದ್ದ ಮಾದೇಗೌಡರು ಅವಕಾಶವಾದಿ ರಾಜಕಾರಣಿಯ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ.

ಅವತ್ತು ನಡೆದದ್ದೇನು

ಗಾಂಧಿ ಭವನ ಸ್ಮಾರಕ ಟ್ರಸ್ಟ್ ವತಿಯಿಂದ ಗಾಂಧಿಗ್ರಾಮ ಮಾಡಲು 20 ಎಕರೆ ಜಮೀನು ನೀಡುವಂತೆ ಮಾದೇಗೌಡರು ಒಂದೂವರೆ ವರ್ಷದ ಹಿಂದೆಯೇ ಜಿಲ್ಲಾಡಳಿತಕ್ಕೆ ಅರ್ಜಿ ಸಲ್ಲಿಸಿ ಓಡಾಡುತ್ತಿದ್ದಾರೆ. ಇದೇ ವಿಷಯವಾಗಿ ಒಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೂ ಎಡತಾಕಿದ್ದರು. ಅವರ ಮನವಿಯನ್ನು ಆಲಿಸಿದ ಸಿಎಂ, ಈ ಕುರಿತು ಪರಿಶೀಲನೆ ಮಾಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಲಿಖಿತ ಆದೇಶ ನೀಡಿದ್ದರು. ಮುಖ್ಯಮಂತ್ರಿಯಿಂದಲೇ ಪರಿಶೀಲನೆಯ ಶಿಫಾರಸ್ಸು ಬಂದಮೇಲೆ ಈ ಮುನ್ನ ಮಾದೇಗೌಡರು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದ ಅರ್ಜಿ ಚಲನೆ ಪಡೆದುಕೊಂಡು ಜಿಲ್ಲಾಧಿಕಾರಿ ಅಜಯ್ ನಾಗಭೂಷಣ್‌ರ ಮೇಜು ತಲುಪಿತ್ತು. ನಿಯಮಗಳ ಪ್ರಕಾರ ಖಾಸಗಿ ಟ್ರಸ್ಟ್‌ವೊಂದಕ್ಕೆ 20 ಎಕರೆ ಭೂಮಿ ನೀಡಲು ಸಾಧ್ಯವಿಲ್ಲವೆಂದು ಷರಾ ಬರೆದ ಡಿಸಿ ಸಾಹೇಬರು ಮಾದೇಗೌಡರ ಅರ್ಜಿಯನ್ನು ತಿರಸ್ಕರಿಸಿದ್ದರು. ಈ ಸಂಗತಿಯೇ ಮಾದೇಗೌಡರ ಇಳಿವಯಸ್ಸಿನ ಫ್ಯೂಡಲ್ ರಕ್ತ ಕೊತಕೊತ ಕುದಿಯುವಂತೆ ಮಾಡಿದ್ದು.

ಇದೇ ಆಗಸ್ಟ್ 18ರಂದು ಜಿಲ್ಲೆಯ ಬರಪರಿಸ್ಥಿತಿ ಚರ್ಚೆಗೆಂದು ನಗರದ ಪ್ರವಾಸಿಮಂದಿರದಲ್ಲಿ ಕಂದಾಯ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಆಗಮಿಸಿದ್ದರು. ಯಥಾಪ್ರಕಾರ ಡಿಸಿ ನಾಗಭೂಷಣ್‌ರು ಅಲ್ಲಿ ಹಾಜರಿದ್ದರು. ಆಗ ಏಕಾಏಕಿ ಸಭೆಗೆ ಧಾವಿಸಿದ ಮಾದೇಗೌಡರು "ನೀವೊಬ್ರು ಮಿನಿಸ್ಟರ್, ಇವನೊಬ್ಬ ಡಿಸಿ. ನೀವೆಲ್ಲಾ ಕೆಲಸಕ್ಕೆ ಬಾರದಿರೋರು. ಇಂತಹ ಅಧಿಕಾರಿಗಳ ಮಾತು ಕೇಳಿಕೊಂಡು ರಾಜ್ಯಭಾರ ಮಾಡ್ತೀರಿ. ಇಂತಹ ಡಿಸಿ ನಮಗೆ ಬೇಕಾಗಿಲ್ಲ, ವರ್ಗಾವಣೆ ಮಾಡಿ, ಇಲ್ಲದಿದ್ದರೆ ನಾವೇ ಓಡಿಸಬೇಕಾಗುತ್ತದೆ. ನಿಮ್ಮೆಲ್ಲನ್ನೂ ಕೊಲೆ ಮಾಡಿ ಜೈಲಿಗೆ ಹೋಗ್ತೀನಿ. ಇಂತಹ ಅಧಿಕಾರಿಗಳು ನಮಗೆ ಬೇಕಿಲ್ಲ" ಅಂತ ಆವೇಶಭರಿತರಾಗಿ ಏಕವಚನದಲ್ಲೇ ರೇಗಾಡಿದ್ದರು.

ಕೂಡಲೇ ಮಧ್ಯಪ್ರವೇಶಿಸಿದ ಸಚಿವ ಶ್ರೀನಿವಾಸ್ ಪ್ರಸಾದ್ "ಇದರಲ್ಲಿ ಜಿಲ್ಲಾಧಿಕಾರಿ ಅವರದು ಏನೂ ತಪ್ಪಿಲ್ಲ. ಸರ್ಕಾರದ ಮಟ್ಟದಲ್ಲಿ ತೀರ್ಮಾನ ಆಗಬೇಕು. ಸರ್ಕಾರದೊಂದಿಗೆ ಚರ್ಚಿಸಿ ಜಾಗ ಕೊಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ" ಅಂತ ಮಾದೇಗೌಡರನ್ನು ಸಮಾಧಾನಪಡಿಸಲು ಯತ್ನಿಸಿದರೂ ನಯಾಪೈಸೆ ಪ್ರಯೋಜನವಾಗಿಲ್ಲ. ಮಾದೇಗೌಡರ ರೇಗಾಟ ಮುಂದುವರೆದೇ ಇತ್ತು. ಸಭೆ ಮುಗಿದ ನಂತರ ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಲ್ಲದೆ ಕೊಲೆ ಬೆದರಿಕೆ ಹಾಕಿದ್ದಾರೆಂದು ಡಿಸಿ ಅಜಯ್ ನಾಗಭೂಷಣ್ ಮಾದೇಗೌಡರ ಮೇಲೆ ದೂರು ದಾಖಲಿಸುವ ಮೂಲಕ ಪ್ರಕರಣ ಹೊಸ ತಿರುವು ಪಡೆದುಕೊಂಡಿತು.



ಹೆಡೆಬಿಚ್ಚಿದ 'ಜಾತಿ

ಮಾದೇಗೌಡರ ಮೇಲೆ ಜಿಲ್ಲಾಧಿಕಾರಿ ದೂರು ನೀಡುತ್ತಿದ್ದಂತೆಯೇ ಜಾತಿ, ಪ್ರತಿಷ್ಠೆಯ ಘಮಲು ತಣ್ಣಗೆ ಅಡರುತ್ತಿದೆ. ಇತ್ತ ಮಾದೇಗೌಡರ ಪರವಾಗಿ ಒಕ್ಕಲಿಗ ಸಮುದಾಯದ ನಾಯಕರು ಮತ್ತು ಅವರದೇ ಭಾರತೀ ಶಿಕ್ಷಣ ಟ್ರಸ್ಟ್‌ಗಳು ಪ್ರತಿಭಟನೆಗೆ ಮುಂದಾಗಿದ್ದರೆ, ಅತ್ತ ಸಚಿವ ಶ್ರೀನಿವಾಸ್ ಪರವಾಗಿ ಅಹಿಂದ ಸಂಘಟನೆಗಳು ಮುಂದಾಗಿವೆ.

ಮಾದೇಗೌಡರ ವಿರುದ್ಧ ನೀಡಿರುವ ದೂರನ್ನು ಜಿಲ್ಲಾಧಿಕಾರಿಗಳು ವಾಪಾಸ್ ಪಡೆಯಬೇಕೆಂದು ಮೊನ್ನೆ ಭಾರತೀನಗರದಲ್ಲಿ ಭಾರತಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಪ್ರತಿಭಟನೆ ನಡೆಸಲಾಗಿದೆ. ಇಲ್ಲದೇ ಹೋದರೆ ತಮ್ಮ ಹೋರಾಟ ಮತ್ತಷ್ಟೂ ಉಗ್ರ ರೂಪ ಪಡೆದುಕೊಳ್ಳಲಿದೆ ಅಂತ ಇದೇ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆ ಟ್ರಸ್ಟ್‌ನ ಪದಾಧಿಕಾರಿಗಳು ಕಿಡಿಕಾರಿದ್ದಾರೆ. ಮಾದೇಗೌಡರ ಪರವಾಗಿ ಇಂತಹುದೇ ಮತ್ತೊಂದು ಪ್ರತಿಭಟನೆಯನ್ನು ಮಂಡ್ಯದ ವಿಶ್ವೇಶ್ವರಯ್ಯ ಪ್ರತಿಮೆಯ ಮುಂದೆ ಒಕ್ಕಲಿಗ ಸಂಘಟನೆಗಳು ಹಮ್ಮಿಕೊಂಡಿದ್ದವು. ತಕ್ಷಣವೇ ದೂರು ವಾಪಾಸ್ ಪಡೆಯದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ಮಾಡುವುದಾಗಿ ಕೂತಿದ್ದ ಪ್ರತಿಭಟನಾಕಾರರ ಬಳಿ ತೆರಳಿದ ಮಾದೇಗೌಡರೆ "ನನ್ನನ್ನು ಜೈಲಿಗೆ ಹಾಕಿದರೂ ಸರಿಯೇ ಈ ಪ್ರಕರಣದಲ್ಲಿ ಜಾಮೀನುಪಡೆಯುವುದಿಲ್ಲ, ನೀವು ಧರಣಿ ಕೈಬಿಡಿ" ಎಂದು ಮನವೊಲಿಸಿ ಧರಣಿಗೆ ಅಂತ್ಯ ಆಡಿದ್ದಾರೆ.


ಅದೇರೀತಿ ಸಚಿವ ಮಹದೇವ ಪ್ರಸಾದ್ ಮತ್ತು ಜಿಲ್ಲಾಧಿಕಾರಿಯ ಬೆನ್ನಿಗೆ ನಿಂತಿರುವ ದಲಿತ ಮತ್ತು ಅಹಿಂದ ಸಂಘಟನೆಗಳು "ಗಾಂಧಿವಾದಿ, ರೈತಪರ ಹೋರಾಟಗಾರ ಎಂದೆಲ್ಲಾ ಹೇಳಿಕೊಳ್ಳುವ ಮಾದೇಗೌಡರು ಬಹಳ ಹಿಂದಿನಿಂದಲೂ ಅಧಿಕಾರಿಗಳ ಜೊತೆ ದರ್ಪದಿಂದ ನಡೆದುಕೊಳ್ಳುವುದನ್ನು ಬೆಳೆಸಿಕೊಂಡಿದ್ದಾರೆ. ಗಾಂಧಿ ಸ್ಮಾರಕ ಟ್ರಸ್ಟ್‌ಅನ್ನು ತಮ್ಮ ಕುಟುಂಬದ ಟ್ರಸ್ಟ್ ಆಗಿ ಪರಿವರ್ತನೆ ಮಾಡಿಕೊಂಡಿರುವ ಅವರು ಭಾರತೀನಗರದಲ್ಲಿ ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ಜಾಗ ಪಡೆದು ಅಂಗಡಿ-ಮಳಿಗೆ ನಿರ್ಮಿಸಿ ಬಾಡಿಗೆಬಿಟ್ಟಿದ್ದಾರೆ. ಗಾಂಧಿ ಹೆಸರಿನಲ್ಲಿ ಮಾದೇಗೌಡರು ಮಾಡಿರುವ ಅಕ್ರಮ, ಅವ್ಯವಹಾರ ಬಹಿರಂಗಗೊಂಡಿವೆ. ಅವರು ಈ ಕೂಡಲೇ ಸಚಿವ ಶ್ರೀನಿವಾಸ್ ಪ್ರಸಾದ್, ಜಿಲ್ಲಾಧಿಕಾರಿ ಅಜಯ್ ನಾಗಭೂಷಣ್‌ರ ಬಹಿರಂಗ ಕ್ಷಮೆ ಕೇಳಬೇಕು" ಎಂದು ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೇ ಭಾರತೀ ಕಾಲೇಜಿನ ವಿದ್ಯಾರ್ಥಿಗಳು ಮಾದೇಗೌಡರ ಪರವಾಗಿ ಮಾಡಿದ ಪ್ರತಿಭಟನೆ ಸ್ವಯಂಪ್ರೇರಿತವಾದುದಲ್ಲ, ಎಜುಕೇಷನ್ ಟ್ರಸ್ಟಿನ ಪದಾಧಿಕಾರಿಗಳೇ ವಿದ್ಯಾರ್ಥಿಗಳನ್ನು ಬಲವಂತವಾಗಿ ಪ್ರತಿಭಟನೆ ಮಾಡುವಂತೆ ಒತ್ತಾಯಿಸಿದ್ದಾರೆಂಬ ಆರೋಪವನ್ನೂ ಅಹಿಂದ ಸಂಘಟನೆಗಳು ಮಾಡಿವೆ.

ಡಿ.ಸಿ.ತಮ್ಮಣ್ಣನನ್ನು ಸುತ್ತಿಕೊಂಡ ವಿವಾದ

ಈ ನಡುವೆ ಗಾಂಧಿಗ್ರಾಮಕ್ಕೆ ಜಿಲ್ಲಾಧಿಕಾರಿ ಮಂಜೂರು ಮಾಡಲು ಒಪ್ಪದಿರುವುದಕ್ಕೆ ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣ ಕಾರಣವಂತೆ! ಹೀಗೊಂದು ಹಾಸ್ಯಾಸ್ಪದ ಹೇಳಿಕೆಯನ್ನು ನೀಡಿದ್ದು ಭಾರತೀ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ನಂಜೇಗೌಡ. ಸಿ.ಎಂ ಸಿದ್ದರಾಮಯ್ಯ ಹಾಗೂ ಕಂದಾಯ ಸಚಿವ ಶ್ರೀನಿವಾಸ್ ಪ್ರಸಾದ್ ಮಾತು ತೆಗೆದುಹಾಕಿ ಒಬ್ಬ ಎಂಎಲ್‌ಎ ಮಾತನ್ನು ಡಿಸಿ ಕೇಳುತ್ತಾರೆನ್ನುವುದು ಬಾಲಿಷ ಕುಚೋದ್ಯವಷ್ಟೆ. ಆದರೆ ತಮ್ಮಣ್ಣ ಮತ್ತು ಮಾದೇಗೌಡರ ನಡುವೆ ಇರುವ ರಾಜಕೀಯ ಜಿದ್ದಾಜಿದ್ದಿ ಈ ಪ್ರಕರಣದ ಮೂಲಕ ಹೀಗೆ ಹೊಸ ತಿರುವಿನಲ್ಲಿ ನುಸುಳಾಡುತ್ತಿದೆ.

ಸ್ವತ್ತಿ ಕಿಂಗಳ ವಿವರ	ಜಮಾ	ಖರ್ಚು
ಗಾಂಧಿಭವನ ವಾಣಿಜ್ಯ ಮಳಿಗೆ ಮಾಹೆಯಾನ ಬಾಡಿಗೆ(7+7) ಕೊಠಡಿ ಮಳಿಗೆಗಳು	56.275–00	
ಗಾಂಧಿಭವನ ಸಭಾಂಗಣದಿಂದ ಬರುವ ಅಂದಾಜು ಹಣ	10.000–00	
ಗಾಂಧಿಭವನದ ಉತ್ಪಾದಕ ವಸ್ತು ಮಾರಾಟದಿಂದ ಅಂದಾಜು ಹಣ	3.725–00	
ಸಂಬಳ		58.050–00
ವ್ಯಾನ್ ಸಂಚಾರಕ್ಕೆ ಇಂಧನ		5.000–00
ವಿದ್ಯುತ್ ಬಿಲ್		4.500–00
ಸ್ಟೇಷನರಿ		2.000–00
ಕ್ಲೀನಿಂಗ್		1.000.00
ಪತ್ರಿಕಾ ಮುದ್ರಣ		4.000–00
ಕಂಪ್ಯೂಟರ್ ಮತ್ತು ಹೊಲಿಗೆ ಮಿಷನ್ ರಿಪೇರಿ (ಅಂದಾಜು)		8.000–00
ಫೋನ್ ಬಿಲ್ ಮತ್ತು ಇಂಟರ್‌ನೆಟ್ ಬಿಲ್		750–00
ಸಾದಿಲ್ವಾರ ಖರ್ಚು		2000–00
ಒಟ್ಟು	70.000–00	85.300–00

ಗಾಂಧಿಭವನ ವಾಣಿಜ್ಯ ಮಳಿಗೆಯಿಂದ ಬರುವ ಆದಾಯದ ವಿವರ



ಈ ಘಟನೆ ನಡೆಯುವುದಕ್ಕೂ ಮೊದಲೇ ಡಿ.ಸಿ.ತಮ
ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಮ
ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ
ಬರೆದು "ಮಾದೇಗೌಡರು ಶಿಕ್ಷಣದ ಹೆಸರಿನಲ್ಲಿ ವ್ಯಾ
ನಡೆಸುತ್ತಿದ್ದಾರೆ. ಪ್ರತಿ ವಿದ್ಯಾರ್ಥಿಯಿಂದ ದುಬಾರಿ ಶ
ವಸೂಲಿ ಮಾಡಿ ದುಡ್ಡು ಮಾಡಿದ್ದಾರೆ. ಶಿಕ್ಷಣ ಸೇವೆ
ಹೆಸರಿನಲ್ಲಿ ಸರ್ಕಾರದಿಂದ ಎಕರೆಗಟ್ಟಲೆ ಜಾಗ ಪಡ
ಪರಭಾರೆ ಮಾಡಿರೋದಲ್ಲದೆ ಮೂಲ ಉದ್ದೇಶಕ್ಕೆ ಬ
ಬಳಸದೆ ಅಂಗಡಿ- ಮಳಿಗೆ ನಿರ್ಮಿಸಿ ಹ
ಸಂಪಾದಿಸುತ್ತಿದ್ದಾರೆ. ಇದರ ಅಕ್ರಮಗಳ ಬಗ್ಗೆ ಪ್ರಾದೇ
ಆಯುಕ್ತರಾಗಿದ್ದ ಜಯಂತಿಯವರು ತನಿಖೆ ನಡೆಸಿ ಅಕ್ರಮ
ಬಗ್ಗೆ ಸರ್ಕಾರಕ್ಕೆ ವರದಿಯನ್ನೂ ಸಲ್ಲಿಸಿದ್ದಾರೆ. ಇವ
ಕಾರಣಗಳಿಂದ ಗಾಂಧೀಜಿಯವರ ಹೆಸರು ಹೇಳ
ಮಾದೇಗೌಡ ಅರ್ಹರಲ್ಲ, ಅವರಲ್ಲಿ ಗಾಂಧೀಜಿಯ
ಯಾವ ಆದರ್ಶ ಗುಣಗಳೇ ಇಲ್ಲ" ಎಂದ
ಆರೋಪಿಸಿದ್ದರು.

ತಮ್ಮಣ್ಣ ಮಾದೇಗೌಡ ಮತ್ತು ಅವರ ಪ
ಮಧುಗೌಡನ ವಿರುದ್ಧ ಈ ಪರಿ ಉರಿದು ಬೀಳ
ಒಂದು ಕಾರಣವಿದೆ. ಮದ್ದೂರು ಕ್ಷೇತ್ರದ ಎಂಎಲ
ಆಗಿದ್ದ ಬಿ.ಸಿದ್ದರಾಜು ನಿಧನರಾದ ನಂತರ ಆ ಸ್ಥಾ
ನಡೆದ ಉಪಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್‌ನ
ಡಿ.ಸಿ.ತಮ್ಮಣ್ಣನನ್ನು ಬಿಜೆಪಿಯತ್ತ ಸೆಳೆದ ಆಗಿನ ಸಿ
ಯಡಿಯೂರಪ್ಪ ಕಮಲದ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ
ಮಧುಗೌಡನನ್ನು ವಿಧಾನಪರಿಷತ್ ಸದಸ್ಯನನ್ನಾಗಿ ಮಾ
ಯಡಿಯೂರಪ್ಪ ಡಿ.ಸಿ.ತಮ್ಮಣ್ಣ ಪರ ಪ್ರಚಾರ ಮಾಡು
ರಾಜಿ ಮಾಡಿಸಿದ್ದರು. ಆದರೆ ಮಧು ಮತ್ತು ಅವ
ಮಾದೇಗೌಡ, ಡಿ.ಸಿ.ತಮ್ಮಣ್ಣರ ಪರ ಪ್ರಚಾರ ಮಾ
ಇಲ್ಲ. ಪರಿಣಾಮವಾಗಿ ಜೆಡಿಎಸ್‌ನ ಕಲ್ಪನಾ ಸಿದ್ದರಾ
ಗೆಲ್ಲುವಂತಾಯಿತು. ಇದೇ ಸಿಟ್ಟಿನಲ್ಲಿ ಡಿ.ಸಿ.ತಮ್ಮ
ಬೆಂಬಲಿಗರು ಮಂಡ್ಯದ ಗಾಂಧಿಭವನಕ್ಕೆ ನುಗ್ಗಿ ಮಧು
ಹಾಗೂ ಜಿ. ಮಾದೇಗೌಡರನ್ನು ಬಾಯಿಗೆ ಬಂದ
ಬೈಯ್ದು ಗಾಂಧಿಭವನದ ಗ್ಲಾಸ್‌ಗಳನ್ನು ಪುಡಿಗಟ್ಟಿದ
ಇದೇ ಕಾರಣಕ್ಕೆ ಅಪ್ಪ-ಮಗನ ಹೆಸರು ಕೇಳಿ
ವಿಶ್ವಾಸದ್ರೋಹಿಗಳು ಅಂತ ತಮ್ಮಣ್ಣ ಉರಿದುಬೀಳು
ಅವತ್ತಿನಿಂದಲೇ ಮಾದೇಗೌಡರು ಗಾಂಧಿ ಹೆಸ
ಮಾಡಿರುವ ಅಷ್ಟು ಅಕ್ರಮಗಳನ್ನು ಬಯಲಿಗೆ ತ
ತನಿಖೆಯಾಗುವಂತೆ ಮಾಡಿದ್ದಾರೆ.


ಇದಕ್ಕೆ ಪ್ರತಿಯಾಗಿ ಡಿ.ಸಿ.ತಮ್ಮಣ್ಣ ಕೆಐಎ
ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಅಕ್ರಮವಾಗಿ ಸಾಕ
ಸೈಟುಗಳನ್ನು ಪಡೆದು ಬೇನಾಮಿ ಹೆಸರಿನಲ್ಲೂ ನಿವೇ
ಹೊಂದಿದ್ದಾರೆ ಅಂತ ಆರೋಪಿಸಿದ್ದ ಮಾದೇಗೌ
ತನಿಖೆಯಾಗಬೇಕೆಂದು ಪಟ್ಟು ಹಿಡಿದಿದ್ದರು. ಇವರಿ
ನಡುವಿನ ಎಣ್ಣೆ-ಸೀಗೆಕಾಯಿ ಸಂಬಂಧದಿಂದಾಗಿ
ಗಾಂಧಿಗ್ರಾಮ ನಿರಾಕರಣೆ ವಿವಾದಕ್ಕೂ ತಮ್ಮಣ
ಮೂಲಪುರುಷ ಎಂಬ ಪುಕಾರನ್ನು ಮಾದೇಗೌ
ಅಭಿಮಾನಿಗಳು ಹುಟ್ಟುಹಾಕುತ್ತಿದ್ದಾರೆ.

ನುಂಗಣ್ಣ ಕಾರ್ಯದರ್ಶಿ ಎನ್.ರಾಜ

ಗಾಂಧಿಭವನಕ್ಕೆ ಸೇರಿದ ಅಂಗಡಿ ಮಳಿಗೆಗಳ
ಲಕ್ಷಾಂತರ ರೂ. ಆದಾಯ ಬರುತ್ತದೆ. ಅದನ್ನೆಲ್ಲಾ
ಮಾಡುತ್ತಾರೆ ಎಂಬುದು ಸಾರ್ವಜನಿಕರ ಪ್ರಶ್ನೆಯಾ
ಆದರೆ ಮಾದೇಗೌಡರ ಎದುರು ನಿಂತು ಪ್ರಶ್ನಿಸುವ ಧೈ
ಯಾರಿಗೂ ಸಾಲುತ್ತಿರಲಿಲ್ಲ. ಆದರೆ ಇಂದು ಗಾಂಧಿಗ
ಪ್ರಕರಣ ತಾರಕಕ್ಕೇರಿದ ನಂತರ ಮಳಿಗೆಗಳ ಬಾಡಿಗೆ ಹ
ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಇದನ್ನು ಕೇ
ಹೀಗೇ ಬಿಟ್ಟರೆ ಜನ ಬಂದು ಲೆಕ್ಕ ಕೇಳಿಯೇ ಕೇಳುತ
ಆಗ ಮರ್ಯಾದೆ ಇರುವುದಿಲ್ಲ ಎನ್ನುವ ಕಾರಣಕ್ಕೆ ವ
ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎನ್.ರಾಜು ಬಾಡಿ

▶▶ 1


ಬೋನಿಗೆ ಬಿದ್ದಿರುವ ಬನ್ನಂಜೆ ರಾಜ 'ಧನ ನಾಯಕ್' ಹತ್ಯೆ ರಹಸ್ಯ ಹೇಳುವನಾ?



ಮಹಾ ಪಾತಕಿ ಬನ್ನಂಜೆ ರಾಜನನ್ನು ಸಿಬಿಐ ...ಲೀಸರು ಉತ್ತರ ಆಫ್ರಿಕಾದ ಮೊರಕ್ಕೊದಿಂದ ...ತ್ತಿಕೊಂಡು ಬರುತ್ತಿರುವಂತೆಯೇ ಉತ್ತರ ...ಡದಲ್ಲೊಂದು ಕ್ರೈಮ್ ಕಾತರ-ಕುತೂಹಲ ...ಎದ್ದುಕೊಂಡಿದೆ! ಕಳ್ಳ ಅದಿರು ವ್ಯವಹಾರಸ್ಥ ಅಕ್ರಮ ...ಜ್ಞನ ಫೈನಾನ್ಸ್ ದೊರೆ, ರಿಯಲ್ ಎಸ್ಟೇಟ್ ಕುಳ ...ದೇ ಖ್ಯಾತಿವೆತ್ತ ಅಂಕೋಲೆಯ ಧನನಾಯಕ್ ಯಾನೆ ...ಎಸ್. ನಾಯಕ್‌ನ ಕಗ್ಗೊಲೆ ಕತೆ ಬನ್ನಂಜೆ ಬಾಯಿಂದ ...ರಬರುವುದಾ? ಧನ ನಾಯಕ್‌ನ ಹತ್ಯೆ ಮಾಡಲು ...ಯಾರು ಸುಪಾರಿ ಕೊಟ್ಟಿದ್ದರೆಂದು ಬನ್ನಂಜೆ ಹೇಳುವನಾ? ...ಇತ್ಯಾದಿ ರೋಚಕ ಚರ್ಚೆಗಳೀಗ ಉತ್ತರ ಕನ್ನಡದ ...ಗಲಕ್ಕೆ ನಡೆಯುತ್ತಿದೆ.

...ಧನ ನಾಯಕ್‌ನ ಕೊಲ್ಲಿಸಿದ್ದು ಭೂಗತ ಪಾತಕಿ ಬನ್ನಂಜೆ ...ನೇ ಎಂಬುದು ನೂರಕ್ಕೆ ಇನ್ನೂರರಷ್ಟು ಈಗ ...ತ್ಯಾಗಿ ಹೋಗಿದೆ. ಆದರೆ ಹಫ್ತಾಕ್ಕಾಗಿ ಬನ್ನಂಜೆ ...ಡಿದ ಮರ್ಡರ್ ಇದಲ್ಲವೇ ಅಲ್ಲ. ಧನ ನಾಯಕ್‌ನ ...ಹೇವಾರಿ ಅಕ್ರಮ ದಂಧೆಯ ದುಷ್ಮನಿಗಳ್ಯಾರೊ ಸಂಚು ...ಡಿ ಬನ್ನಂಜೆಯಿಂದ ಮಾಡಿಸಿದ ಸುಪಾರಿ ಮರ್ಡರ್ ...ಮುದಕ್ಕೆ ಯಾವ ಸಂಶಯವೂ ಯಾರಿಗೂ ಇಲ್ಲ. ...ಯುರ ಸಹಕಾರ ಇಲ್ಲದೆ ದೂರದ ಮೊರಕ್ಕೋದಲ್ಲಿ ...ತು ಬನ್ನಂಜೆ ಕಿಷ್ಕಿಂಧೆಯಂಥ ಅಂಕೋಲೆಯ ...ಯಲ್ಲಿ ತನ್ನ ಹಂತಕ ಪಡೆಯಿಂದ ಹತ್ಯೆ ಮಾಡಿಸಲು ...ವೇ ಇಲ್ಲ. ಇದು ಪಾಪಿ ಮತ್ತು ಪೊಲೀಸ್ ...ಕಗಳೆರಡಕ್ಕೂ ಗೊತ್ತಿರುವ ಸತ್ಯ!!

...ಒಂದು ಕಾಲದಲ್ಲಿ ಟಿಂಬರ್ ಲಾಗಿಂಗ್ ಹೆಸರಲ್ಲಿ ... ಕಳ್ಳ ಸಾಗಾಣಿಕೆ ಮಾಡುತ್ತಿದ್ದ ಆರ್‌ಎನ್‌ಎನ್, ...ನಾನ್ಸ್ ದಂಧೆ ಆರಂಭಿಸಿದ್ದೇ ತಡ ಅಂಕೋಲೆಯ ...ಪ್ಷಿತ' ಪುಢಾರಿಯಾಗಿ ಅವತರಿಸಿಬಿಟ್ಟಿದ್ದ. ಸ್ವ-ಜಾತಿ ...ವ ಅಧಿಕಾರಿಗಳ ಕಪ್ಪು ಹಣದ ಬ್ಯಾಂಕ್ ಆಗಿದ್ದ ...ಎನ್‌ಎನ್‌ನ ದ್ವಾರಕಾ ಫೈನಾನ್ಸ್ ...ಡು-ನೋಡುತ್ತಿದ್ದಂತೆಯೇ ...ಟ್ಯಾಂತರ ರೂ. ವಹಿವಾಟಿನ ...ರು ಬ್ಯಾಂಚ್‌ನ ಭರ್ಜರಿ ...ಗಿಹೋಯಿತು. ಈ ಬ್ಯಾಂಕಿನ ... ದುಡ್ಡಲ್ಲೇ ಆರ್‌ಎನ್‌ಎನ್ ...ಗೈ ದಾನಿಯೂ ಆಗಿಹೋದ. ...ನಾಗಿದ್ದ ಉಮ್ಮಾಣಿ ಮಾಣಿ, ...ಣಿಯಾಗಿದ್ದ ಮ್ಯಾಗಿಯಮ್ಮನ ...ವರ್ತಿ ಎಂಬ ಪ್ರಭಾವಳಿ ...ಎನ್‌ಎನ್‌ಗೆ ಬಂದಾಗ ಆತನ ...ೀ ಬದಲಾಯ್ತು.



ನರೇಂದ್ರ ಹಿತ್ತಲಮಕ್ಕಿ




ವೇದಾಂತ ಹಿತ್ತಲಮಕ್ಕಿ

...ಅಂಕೋಲೆಯ ಬೇಲೇಕೇರಿ ...ರಿಗೆ ಬಳ್ಳಾರಿಯಿಂದ ಬರುತ್ತಿದ್ದ ... ನಂಬರ್ ಕಬ್ಬಿಣದ ಅದಿರು ...ಿ ವ್ಯವಹಾರಕ್ಕೆ ಆರ್‌ಎನ್‌ಎನ್ ...ಹಾಕುತ್ತಾನೆ. ಹೆಸರಿಗಷ್ಟೇ ...ಎನ್‌ಎನ್ ಅದಿರು ರಫ್ತು ...ಯ ಅದಾಸಿಗಳ ಹ್ಯಾಂಡಲಿಂಗ್ ...ಟಾಗಿದ್ದ ಈತ ಬೇಲೇಕೇರಿ ...ದರಿನ ಅಷ್ಟೂ ಕಳ್ಳಾಟದ ...ಿಂಗ್ ಆಗುತ್ತಾನೆ. ಸ್ವ-ಜಾತಿಯ ... ಅಧಿಕಾರಿ ನರೇಂದ್ರ ...ಮಕ್ಕಿಯ ಸಹಾಯ-ಸಹಕಾರದಿಂದ ಆರ್‌ಎನ್‌ಎನ್ ...ೇಕೇರಿ ಬಂದರಿನ 'ಡಾನ್' ನಂತಾಗಿ ಹಾರಾಡುತ್ತಾನೆ. ...ಕೋಲೆಯ ಸಾಮಾಜಿಕ-ರಾಜಕೀಯ ರಂಗದ ಕಣ್ಣು ... 'ನಾಯಕ'ನಾಗುವ ಆರ್‌ಎನ್‌ಎನ್ ಮೇಲೆ ಭೂಗತ ...ದ ಕೆಂಗಣ್ಣು ಬೀಳುವುದಕ್ಕೆ ತಡವಾಗುವುದಿಲ್ಲ.

...ಂಡ-ಕಂಡ ಸಭೆ-ಸಮಾರಂಭ, ಯಾರ್‍ಯಾರದೋ ...ಸೆ, ಮುಂಜಿ, ಪುಷ್ಪ ಎಲ್ಲೆಲ್ಲಿಯದೋ ಕ್ರೀಡೆ, ಸಾಂಸ್ಕೃತಿಕ ...ಗಳಿಗೆ ಆರ್‌ಎನ್‌ಎನ್ ಪ್ರಾಯೋಜಕನಾಗಿ ...ಯಲ್ಲಿ ಕೂಡುಕುವ ಚಟಕ್ಕೆ ಬೀಳುತ್ತಾನೆ. ಅದಿರಿನ ಕಪ್ಪು ವ್ಯವಹಾರದ ಕೊಪ್ಪರಿಗೆ ಹಣ ಮದದಲ್ಲಿ ಆತ ರಿಯಲ್ ಎಸ್ಟೇಟ್, ಬಿಲ್ಡರ್ ದಂಧೆಗೆ ಕೈಹಾಕುತ್ತಾನೆ. ಗೋಕರ್ಣದಲ್ಲಿ ಹತ್ತಾರು ಎಕರೆ ಭೂಮಿ ಖರೀದಿಸಿ ಅಲ್ಲಿ ಕೋಟ್ಯಂತರ ರೂ. ಫ್ಲಾಟ್ ಬಿಲ್ಡಿಂಗ್ ಎಬ್ಬಿಸಲು ಆರಂಭಿಸುತ್ತಾನೆ. ಅಲ್ಪನಿಗೆ ಐಶ್ವರ್ಯ ಬಂದರೆ ಮಧ್ಯರಾತ್ರಿ ಕೊಡೆ ಹಿಡಿಯುತ್ತಾನೆ ಅಂತರಲ್ಲಾ ಹಂಗಾಯ್ತು ಆರ್‌ಎನ್‌ಎನ್ ಕತೆ. ಆಗಲೇ ಆತನಿಗೆ ಭೂಗತ ಲೋಕದ ಬೆದರಿಕೆಯ ಕರೆಗಳು ಬರುವುದಕ್ಕೆ ಆರಂಭವಾಗುತ್ತದೆ.

'ಧನ ನಾಯಕ್' ಆಗಿ ರೂಪಾಂತರಗೊಂಡ ಆರ್.ಎನ್.ನಾಯಕ್‌ಗೆ ವಿದೇಶದಲ್ಲಿ ಅಡಗಿಕುಳಿತಿದ್ದ ಅಂಡರ್‌ವರ್ಲ್ಡ್ ಪಾತಕಿ ಬನ್ನಂಜೆ ರಾಜನ ಮೊದಲ ಹಫ್ತಾ ಕರೆ ಬಂದಿದ್ದು 2012ರಲ್ಲಿ! ಅದೇ ಹೊತ್ತಿಗೆ ಈಗ ಎಮ್ಮೆಲ್ಲೆಗಳಾಗಿರುವ ಕಾರವಾರದ ಸತೀಶ್ ಸೈಲ್, ಯಲ್ಲಾಪುರದ ಶಿವರಾಮ ಹೆಬ್ಬಾರ್ ಬೆನ್ನಿಗೂ ಬನ್ನಂಜೆ ಬಿದ್ದಿದ್ದ. ಸೈಲ್ ಮತ್ತು ಹೆಬ್ಬಾರ್‌ರನ್ನು ಅಡಿಗಡಿಗೆ ಕಾಡಿದ್ದ ಬನ್ನಂಜೆ ಧನ ನಾಯಕ್‌ನನ್ನು ಆ ಪರಿಯೇನೂ ಕಂಗಾಲಾಗಿಸಿರಲಿಲ್ಲ. ಸೈಲ್-ಹೆಬ್ಬಾರ್ ತೂಕದೆದುರು ಧನ ನಾಯಕ್ ಯಾವ ಲೆಕ್ಕವೂ ಅಲ್ಲವೆಂಬ ಭಾವನೆ ಬನ್ನಂಜೆಯದಾಗಿದ್ದಿರಬೇಕು. ಹೀಗಾಗಿ ಧನ ನಾಯಕ್‌ಗೆ ಅಂಥ ಗಂಡಾಂತರವೇನೂ ಇರಲಿಲ್ಲ. ಆದರೂ ಗನ್‌ಮ್ಯಾನ್ ನಡುವೆ ನಿಂತು ಜನನಾಯಕನ ಪೋಸು ಕೊಡುವುದು ರೂಢಿಸಿಕೊಂಡಿದ್ದ!



ದೇಶಪಾಂಡೆ


ಆದರೆ ಯಾವಾಗ ಬೇಲೇಕೇರಿ ಬಂದರಿನ 250 ಕೋಟಿ ರೂ. ಅದಿರುಕಳ್ಳ ಸಾಗಾಣಿಕೆ ಪ್ರಕರಣ ಸಿಬಿಐ ತನಿಖೆಗೆ ಕೊಡಲಾಗುತ್ತದೋ, ಆಗ ಧನ ನಾಯಕ್ ದೊಡ್ಡ ರಿಸ್ಕ್‌ನಲ್ಲಿ ಸಿಕ್ಕಿಬೀಳುತ್ತಾನೆ. ಲೋಕಾಯುಕ್ತದವರು ಮುಟ್ಟುಗೋಲು ಹಾಕಿಕೊಂಡಿದ್ದ ಅಕ್ರಮ ಅದಿರನ್ನು ಕದ್ದು ರಫ್ತು ಮಾಡುವ ಪಾತಕದ ಸ್ಕೆಚ್‌ನ ರೂವಾರಿಯೇ ಈ ಧನ ನಾಯಕ! ಎಸಿಎಫ್ ನರೇಂದ್ರ ಹಿತ್ತಲಮಕ್ಕಿಯ ಜತೆಗೇ ಧನ ನಾಯಕ್ ಜೈಲು ಪಾಲಾಗಬೇಕಿತ್ತು. ಆದರೆ ತನ್ನ ಕರ್ಮಕಾಂಡಕ್ಕೆಲ್ಲ ನೆರವಾದ ಎಸಿಎಫ್ ಹಿತ್ತಲಮಕ್ಕಿಯನ್ನೇ ಬಲಿ ಹಾಕಿ ಸಿಬಿಐಗೆ ಮಾಫಿ ಸಾಕ್ಷಿಯಾಗುತ್ತಾನೆ ಧನ ನಾಯಕ್! ತಾನೇ ಹೆಣೆದ ಬಲೆಯಲ್ಲಿ ಆತ ತಂತಾನೆ ಸಿಕ್ಕಿಬೀಳುತ್ತಾನೆ.

ಧನ ನಾಯಕ್ ಮತ್ತು ಎಸಿಎಫ್ ನರೇಂದ್ರ ಹಿತ್ತಲಮಕ್ಕಿಯ ಅನೈತಿಕ ಮೈತ್ರಿಗೊಂದು ದೊಡ್ಡ ಕರಾಳ ಇತಿಹಾಸವೇ ಇದೆ. ನಾಡವ ಜಾತಿಗೆ ಸೇರಿದ ಅತ್ಯಾಪ್ತ ದೋಸ್ತಿಗಳಿವರು. ಆರ್‌ಎಫ್‌ಒ ಆಗಿ ಅರಣ್ಯ ಇಲಾಖೆ ಸೇರಿದ್ದ ನರೇಂದ್ರ ಹಿತ್ತಲಮಕ್ಕಿ ಲಾಗಾಯ್ತಿನಿಂದಲೂ ಗೆಳೆಯನನ್ನು ಕಳ್ಳ ಕುಬೇರನ ಮಾಡಲು ಕಾನೂನು-ನೀತಿ-ನಿಯಮ ಧಿಕ್ಕರಿಸಿ ಇಲಾಖೆಗೆ-ಸರ್ಕಾರಕ್ಕೆ ಅನ್ಯಾಯ-ಹಾನಿ ಮಾಡಿದ್ದೇ ಹೆಚ್ಚು. ಹಿತ್ತಲಮಕ್ಕಿ ಆರ್‌ಎಫ್‌ಒ ಆಗಿದ್ದಾಗಲೇ ಧನ ನಾಯಕ್‌ನ ಅರಣ್ಯಗಳ್ಳತನದ ದಂಧೆ ಬಿರುಸಾಗಿ ನಡೆದಿತ್ತು. ಆ ನಂತರ ಧನ ನಾಯಕ್ 'ದ್ವಾರಕಾ ಫೈನಾನ್ಸ್' ಎಂಬ ಲೇವಾದೇವಿ ಬ್ಯಾಂಕ್ ತೆರೆದಾಗ ಹಿತ್ತಲಮಕ್ಕಿ ಅದರಲ್ಲಿ ತನ್ನ ಕೋಟ್ಯಂತರ ರೂ. ಬೇನಾಮಿ ಠೇವಣಿ ಇಡುತ್ತ ಬಂದಿದ್ದ. ಮುಂದೆ ಎಸಿಎಫ್ ಆಗಿ ಅಂಕೋಲೆಗೆ ವಕ್ಕರಿಸುವ ಹಿತ್ತಲಮಕ್ಕಿ ಹಳೆ ಗೆಳೆಯನ ಜಲ್ಲಿ, ಅದಿರು ಅವ್ಯವಹಾರಕ್ಕೆ ಬೆಂಗಾವಲಾಗಿ-ಬೆಂಬಲವಾಗಿ ನಿಲ್ಲುತ್ತಾನೆ. ಅರಣ್ಯ ಜಮೀನು ಬಗೆದು ಧನ ನಾಯಕ್ ಕೋಟ್ಯಂತರ ರೂ. ಜಲ್ಲಿ ಬಗೆದರೂ ಎಸಿಎಫ್ ಹಿತ್ತಲಮಕ್ಕಿ ಕಣ್ಮುಚ್ಚಿ ಕುಂತಿರುತ್ತಿದ್ದ. ತನ್ನ ಪಾಲು ನಿಯತ್ತಾಗಿ ಪಡೆಯುತ್ತಿದ್ದ.

ಧನ ನಾಯಕ್ 'ಕುಬೇರ ಎಂಟರ್‌ಪ್ರೈಸಸ್' ಎಂಬ ಅದಿರು ಹ್ಯಾಂಡಲಿಂಗ್ ಕಂಪನಿ ತೆರೆದಾಗಲೂ ಇದೇ ಹಿತ್ತಲಮಕ್ಕಿ ಆತನ ಬೆನ್ನಿಗೆ ನಿಂತಿದ್ದ. ಎಸಿಎಫ್ ಹಿತ್ತಲಮಕ್ಕಿ ಜತೆಗಿನ ಅನ್ಯೋನ್ಯ ಸಂಬಂಧ ತೋರಿಸಿಕೊಂಡೇ ಧನ ನಾಯಕ್ ಅದಿರು ರಫ್ತು ಕಂಪನಿಗಳ ಜತೆ ಡೀಲು ಕುದುರಿಸುತ್ತಿದ್ದ. ಲೋಕಾಯುಕ್ತ ಸೀಜ್ ಮಾಡಿದ್ದ ಕಳ್ಳ ಅದಿರು ಕದ್ದು ರಫ್ತು ಮಾಡಲು ಎಸಿಎಫ್ ನರೇಂದ್ರ ಹಿತ್ತಲಮಕ್ಕಿಯ 'ಎಪ್ರೂವಲ್' ಕೊಡಿಸಿದ್ದೇ ಧನ ನಾಯಕ್! ಗೆಳೆಯನ ದಗಲುಬಾಜಿ ಮಾತಿಗೆ ಕಟ್ಟುಬಿದ್ದು ಮುಟ್ಟುಗೋಲಾಗಿದ್ದ ಅದಿರು ವಿದೇಶಕ್ಕೆ ಕಳಿಸಲು ಅನುಕೂಲ ಕಲ್ಪಿಸುವ ಕರಾಮತ್ತು ಎಸಿಎಫ್ ಹಿತ್ತಲಮಕ್ಕಿ ಮಾಡುತ್ತಾನೆ.

ಸಿಬಿಐ ತನಿಖೆ ಆರಂಭಿಸಿದಾಗ ಮೊದಲು ಬೋನಿಗೆ ಬಿದ್ದಿದ್ದೇ ಎಸಿಎಫ್ ಹಿತ್ತಲಮಕ್ಕಿ ಮತ್ತು ಬಂದರು ಅಧಿಕಾರಿ ಬಲಿಯೆ! ಸಿಬಿಐ ಬಂಧನದಲ್ಲಿದ್ದ ಹಿತ್ತಲಮಕ್ಕಿ ಜಾಮೀನು ಕೋರಿ ಹೈಕೋರ್ಟಿಗೆ ಹೋಗುತ್ತಾನೆ. ಅಲ್ಲಾತನ ಅರ್ಜಿ ತಿರಸ್ಕೃತವಾಗಿ ಜೈಲಲ್ಲಿ ದಿನ ಕಳೆಯಬೇಕಾಗುತ್ತದೆ. ಇದಕ್ಕೆ ಪ್ರಮುಖ ಕಾರಣ- ಆರ್.ಎನ್. ನಾಯಕ್ ಮತ್ತಾತನ ಸುಪುತ್ರ ಮಯೂರ ನಾಯಕ್ ಸಿಬಿಐ ಮುಂದೆ ಮಂಡಿಸಿದ್ದ ಸಾಕ್ಷ್ಯಗಳು!! ಅದಿರು ಕಳ್ಳ ಸಾಗಾಣಿಕೆಗೆ ಪೂರ್ರೈಕೆಯಾಗಿದ್ದು ಕುಬೇರ ಎಂಟರ್‌ಪ್ರೈಸಸ್‌ನ ಲಾರಿಗಳಲ್ಲಿ. ಅಂದರೆ ಕಳ್ಳ ವಹಿವಾಟು ಮಾಡಿದ್ದು ಆರ್.ಎನ್. ನಾಯಕ್ ಮತ್ತು ಮಯೂರ ನಾಯಕ್. ಆದರೆ ಇವರು ಬಚಾವಾಗಲು ಮಾಫಿ ಸಾಕ್ಷಿಯಾಗಿ ಸಿಬಿಐಗೆ ಎಸಿಎಫ್ ಹಿತ್ತಲಮಕ್ಕಿಯ ಹಕೀಕತ್ತು ಎಳೆಎಳೆಯಾಗಿ ವಿವರಿಸಿದ್ದರು. ಇದೇ ಹಿತ್ತಲಮಕ್ಕಿಗೆ ಮುಳುವಾಯ್ತು!!


ಅಕ್ರಮ ಅದಿರು ಬಿಡುಗಡೆಗೆ ಎಸಿಎಫ್ ಹಿತ್ತಲಮಕ್ಕಿ ಮೇಸರ್ಸ್ ಗ್ರೀನ್‌ಟೆಕ್ಸ್ ಮೈನಿಂಗ್ ಕಂಪನಿಯ ಅಜಯಂಕರ ಬಂದೆಯಿಂದ ಬರೋಬ್ಬರಿ 15 ಲಕ್ಷ ರೂ. ಲಂಚ ಪಡೆದಿದ್ದಾನೆಂದು ಅಪ್ಪ-ಮಗ ಸಿಬಿಐಗೆ ಹೇಳುತ್ತಾರೆ. ಇದು ಹೈಕೋರ್ಟಿನಲ್ಲಿ ಪ್ರಮುಖವಾಗಿ ಪರಿಗಣನೆಯಾಗಿ ಎಸಿಎಫ್ ಹಿತ್ತಲಮಕ್ಕಿ ಜೈಲಲ್ಲಿ ಕೊಚ್ಚಕ್ಕಿ ಗಂಜಿ-ಒಣ ಮೀನು ಉಣ್ಣುವಂತಾಗುತ್ತದೆ! ಧನ ನಾಯಕ್‌ನ ಈ ವಿಶ್ವಾಸ ಘಾತುಕತನದಿಂದ ಹಿತ್ತಲಮಕ್ಕಿಯ ಕುಟುಂಬ ಕನಲಿ ಕೆಂಡವಾಗುತ್ತದೆ. ಕೆರಳಿದ ಹಿತ್ತಲಮಕ್ಕಿ ಹೆಂಡತಿ ಸಿಬಿಐ ಕಚೇರಿಯಲ್ಲೇ ಮಯೂರ ನಾಯಕ್‌ಗೆ ಬಾಯಿಗೆ ಬಂದಂತೆ ಬಯ್ಯುತ್ತಾರೆ. ಅಂಕೋಲೆಯಲ್ಲಿ ಹಬ್ಬಿರುವ ಸುದ್ದಿಯಂತೆ ಆಕೆ ಮಯೂರನಿಗೆ ಚಪ್‌ಚಪ್ಪಿಯಲ್ಲಿ ಬಾರಿಸಿದ್ದರಂತೆ. ಇದಾದ ಕೆಲವೇ ದಿನದಲ್ಲಿ ಅಂಕೋಲೆ ಪೇಟೆಯಲ್ಲಿ ಮಯೂರ ಮತ್ತು ಎಸಿಎಫ್ ಹಿತ್ತಲಮಕ್ಕಿ ಮಗ ವೇದಾಂತ್ ಅಂಗಿ ಹಿಡಿದು ಕಿತ್ತಾಡಿದ್ದಾರೆ. ಇದರಿಂದ ಕಂಗಾಲಾದ ಮಯೂರ ಸಿಬಿಐಗೆ ಹಿತ್ತಲಮಕ್ಕಿ ಫ್ಯಾಮಿಲಿ ಮೇಲೆ ಕಂಪ್ಲೇಟೂ ಕೊಡುತ್ತಾನೆ.



ಪ್ರತಾಪ್ ರೆಡ್ಡಿ

ಬಿ.ವಿ. ಆಚಾರ್ಯರಂಥ ದೊಡ್ಡ-ದುಬಾರಿ ವಕೀಲ ಇಟ್ಟಿದ್ದ ಹಿತ್ತಲಮಕ್ಕಿ ಜೈಲಿಂದ ಹೊರಬರಲು ವಿಲವಿಲ ಒದ್ದಾಡುವಂತಾಯ್ತು. ಆತ ಕೂಡಿಸಿಟ್ಟಿದ್ದ ಪಾಪದ ಹಣ ಕರಗಿಹೋಗಿತ್ತು. ಆಗಾತ ಧನ ನಾಯಕ್‌ಗೆ ತಾನು ಆತನ ದ್ವಾರಕಾ ಫೈನಾನ್ಸ್‌ನಲ್ಲಿ ಇಟ್ಟಿದ್ದ ಬೇನಾಮಿ ಫಂಡು ಕೊಡುವಂತೆ ಕೇಳಿದ್ದಾನೆ. ಆದರೆ ಕೃತಘ್ನ ಧನ ನಾಯಕ್ ಕಾಸು ಕೊಡಲಾರೆನೆಂದು ಹೇಳಿದ್ದಾನೆ. ಹಿತ್ತಲ ಮಕ್ಕಿಯ ಕೋಟ್ಯಂತರ ರೂ. ನುಂಗಿ ನೊಣೆದಿದ್ದಾನೆ. ಇದರಿಂದ ಹಿತ್ತಲಮಕ್ಕಿ ಕುಟುಂಬದ ಕ್ರೋಧಾಗ್ನಿಗೆ ಪೆಟ್ರೋಲು ಸುರಿದಂತಾಗಿದೆ. ಒಂದಲ್ಲ, ಎರಡೆರಡು ಬಗೆಯ ವಿಶ್ವಾಸದ್ರೋಹ ಮಾಡಿದ ಧನ ನಾಯಕ್ ಮೇಲೆ ಸೇಡು ತೀರಿಸಿಕೊಳ್ಳುವ ಹಠಕ್ಕೆ ಹಿತ್ತಲಮಕ್ಕಿ ಮಡದಿ-ಮಗ-ಮಗಳು ಬೀಳುತ್ತಾರೆ.

ತಮ್ಮ ಕುಟುಂಬವನ್ನು ಕಣ್ಣೀರಲ್ಲಿ ಕೈ ತೊಳೆಯುವಂತೆ ಮಾಡಿದ ಧನ ನಾಯಕ್ ಫ್ಯಾಮಿಲಿಗೂ ಅದೇ ಗತಿ ಕಾಣಿಸುವ ಕಠೋರ ನಿರ್ಧಾರಕ್ಕೆ ಹಿತ್ತಲಮಕ್ಕಿ ಪರಿವಾರ ಬರುತ್ತದೆ. ಬನ್ನಂಜೆ ರಾಜಾ ಹಿಂದೊಮ್ಮೆ ಹಫ್ತಾಕ್ಕಾಗಿ ಆರ್‌ಎನ್‌ಎನ್‌ಗೆ ಬೆದರಿಸಿದ್ದು ಗೊತ್ತಿತ್ತು ಹಿತ್ತಲಮಕ್ಕಿ ಬಳಗಕ್ಕೆ. ಬನ್ನಂಜೆಗೆ ಸುಪಾರಿ ಕೊಡುವ ತೀರ್ಮಾನ ಕೈಗೊಂಡಿದ್ದಾರೆ. ವೇದಾಂತನಿಗೆ ಹೆಣ್ಣು ಕೊಟ್ಟ ಮಾವ ಉಡುಪಿಯಲ್ಲಿ ಬಹಳ ಕಾಲ ವಾಣಿಜ್ಯ ತೆರಿಗೆ ಇಲಾಖೆಯ ಆಯಕಟ್ಟಿನ ಸ್ಥಾನದಲ್ಲಿದ್ದರು. ಈತನ ಬೇರುಗಳು ಉಡುಪಿ-ಮಂಗಳೂರಲ್ಲಿ ಆಳಕ್ಕೆ ಇಳಿದಿವೆ. ಕೆಪಿಎಸ್‌ಸಿ ಮೆಂಬರಿಕೆ ಖರೀದಿಗೆ 10 ಕೋಟಿ ರೂ. ಚೀಟಿ ಹಿಡಿದು ಓಡಾಡಿದ ಭೂಪನೀತ. ಅಂಕೋಲೆಯಲ್ಲಿ ಹಬ್ಬಿರುವ ಸುದ್ದಿಯಂತೆ ಕೋಟ್ಯಾಧೀಶನಾದ ಈತನಿಗೆ ಮಂಗಳೂರಿನ ಕಡೆಯ ಅಂಡರ್‌ವರ್ಲ್ಡ್‌ನ ಸಂಪರ್ಕವೂ ಇದೆಯಂತೆ. ಈತನೇ ಮುಂದಾಗಿ ಬನ್ನಂಜೆ ರಾಜನ ಪಡೆ ಸಂಧಿಸಿದ್ದಾನೆ. ನಂತರದ ಡೀಲ್ ಕುದುರಿಸಿದ್ದು ವೇದಾಂತನೆಂಬುದು ಜನಜನಿತ ಸಂಗತಿ!



ಆರ್.ಎನ್. ನಾಯಕ್

ಇದು ಪೊಲೀಸರಿಗೂ ಗೊತ್ತಿರುವ ಸತ್ಯ. ಪಾತಕ ಪ್ರಪಂಚದಲ್ಲೂ ಇದೇ ಅಭಿಪ್ರಾಯವಿದೆ. ಧನ ನಾಯಕ್ ಅಭಿಮಾನಿಗಳೂ ಸತತ 53 ದಿನ ಧರಣಿ-ಸತ್ಯಾಗ್ರಹ ನಡೆಸಿ 'ಸುಪಾರಿದಾರರ' ಬಂಧನಕ್ಕೆ ಒತ್ತಾಯಿಸಿದ್ದರು. ಧನ ನಾಯಕ ಪರಿವಾರಕ್ಕೂ ಬನ್ನಂಜೆ ನೆಪ ಮಾತ್ರ; ಆತನ ಹಿಂದೆ ಹಿತ್ತಲಮಕ್ಕಿ ಬಳಗವಿದೆ ಎಂಬುದು ಅದ್ಯಾವಾಗಲೋ ಖಾತ್ರಿಯಾಗಿ ಹೋಗಿದೆ. ಆದರೆ ಪ್ರಕರಣ ಹಳ್ಳ ಹಿಡಿಯುತ್ತಿದೆ. ಇದೊಂದು ಹಫ್ತಾಕ್ಕಾಗಿ ಭೂಗತ ಜೀವಿ ಬನ್ನಂಜೆ ಮಾಡಿದ ಪಾತಕ ಎಂಬಂತೆ ಬಿಂಬಿಸುವ ಕಿತಾಪತಿ ಆರಂಭದಿಂದಲೂ ನಡೆಯುತ್ತಿದೆ. ಮಂತ್ರಿ ದೇಶಪಾಂಡೆಯೇ ಹಿತ್ತಲಮಕ್ಕಿ ಸಂಸಾರ ಸಂರಕ್ಷಿಸಲು ಪಣ ತೊಟ್ಟಿದ್ದಾರೆಂಬ ಮಾತುಗಳೂ ಜಿಲ್ಲೆಯಲ್ಲಷ್ಟೇ ಅಲ್ಲ, ಪೊಲೀಸ್ ಇಲಾಖೆಯಲ್ಲೂ ಅನುರಣಿಸುತ್ತಿವೆ.

ಧನ ನಾಯಕ್‌ನ ನಂಬಿ ಗಂಡಾಂತರಕ್ಕೆ ಬಿದ್ದಿರುವ ಎಸಿಎಫ್ ಹಿತ್ತಲಮಕ್ಕಿಯ ಸಣ್ಣ ಸಹೋದರ ನಾಗರಾಜ್ ಗೋಕರ್ಣ ಗ್ರಾಮ ಪಂಚಾಯತ್‌ದ ಅಧ್ಯಕ್ಷನಾಗಿದ್ದಾತ. ಗೋಕರ್ಣದಲ್ಲಿ 'ಹೊಟೇಲ್ ಓಂ' ನಡೆಸುವ ನಾಗರಾಜ್ ಮಂತ್ರಿ ದೇಶಪಾಂಡೆಯ ಆತ್ಮೀಯ ಬಳಗದ ಸದಸ್ಯ. ಈತ ಧನ ನಾಯಕ್-ಮರ್ಡರ್ ಮುಗಿದಾಗ ಕೆಲದಿನ ಊರಲ್ಲೇ ಇರಲಿಲ್ಲ. ಒಂದು ಮೂಲದ ಪ್ರಕಾರ ಕೇಸ್ ಹಳ್ಳ ಹಿಡಿಸಲು ದೇಶಪಾಂಡೆ ಸನ್ನಿಧಿಯಲ್ಲೀತ ತಪಸ್ಸಿಗೆ ಕುಳಿತಿದ್ದನಂತೆ!


ಈಗ ಪಾತಕಿ ಬನ್ನಂಜೆ ರಾಜ್ಯದ ಪೊಲೀಸರ ವಶದಲ್ಲಿದ್ದಾನೆ. ಧನ ನಾಯಕ್ ಹತ್ಯೆ ಕೇಸಿನ 9ನೇ ಆರೋಪಿ ಬನ್ನಂಜೆ. ಹಂತಕರು ಈತನಿಗಿಂತ ಮೊದಲಿನ ಆರೋಪಿಗಳು. ಮಜಾ ಎಂದರೆ ಪೊಲೀಸರು ಗನ್‌ಗಳ ಮೇಲೆ ಕೇಸು ಹಾಕಿದ್ದಂತಾಗಿದೆ. ಅದನ್ನು ಬಳಸಿದವರ ಬಚಾಯಿಸಿದ್ದಾರೆ. ಸುಪಾರಿದಾರರ ಕಂಡುಹಿಡಿದು ಕೊಳ ತೊಡಿಸಿದಾಗಷ್ಟೇ ಧನ ನಾಯಕ್ ಹತ್ಯೆ ಪ್ರಕರಣ ಹಳಿಗೆ ಬರುವುದು. ಈ ಹತ್ಯೆ ಹಿಂದಿರುವುದು ದೋಖಾ ದೋಸ್ತಿಯೇ ಹೊರತು ಹಫ್ತಾ ಹಪಾಹಪಿಯಲ್ಲ. ಹಿತ್ತಲಮಕ್ಕಿ-ಧನ ನಾಯಕ್ ಕುಟುಂಬದ ನಡುವಿನ ವೈಷಮ್ಯಕ್ಕೆ ಭೂಗತ ಲೋಕ ಎಂಟ್ರಿ ಹೊಡೆದಿದೆ! ಒಂದಂತೂ ಖರೆ, ಬೇಲೇಕೇರಿ ಅಕ್ರಮ ಅದಿರು ದಂಧೆ ಇತಿಹಾಸದಲ್ಲಿ ಒಂದು ರಕ್ತಸಿಕ್ತ ಅಧ್ಯಾಯ ಸೇರಿಕೊಂಡಂತಾಗಿದೆ!!

ಧನ-ನಾಯಕ್ ಹತ್ಯೆ ಹೊತ್ತಲ್ಲಿ ಪಶ್ಚಿಮ ವಲಯದ ಡಿಜಿಪಿ ಆಗಿದ್ದ ಪ್ರತಾಪ್ ರೆಡ್ಡಿಯೇ ಈಗ ಮುತುವರ್ಜಿ ವಹಿಸಿ ಬನ್ನಂಜೆಯನ್ನು ಮೊರಕ್ಕೋದಿಂದ ಎಳೆದು ತಂದಿದ್ದಾರೆ. ಅಡಿಷನಲ್ ಕಮೀಷನರ್ ರೆಡ್ಡಿ ಈಗಾದರೂ ಈ ಕೇಸನ್ನು ಗಂಭೀರವಾಗಿ ಪರಿಗಣಿಸುವರಾ? ಪಾಪಿ ಬನ್ನಂಜೆ ಧನ ನಾಯಕ್ ಕೊಲೆ ಹಿಂದಿನ ಸತ್ಯ ಹೊರಹಾಕಬಹುದಾ? ಅದನ್ನು ಪೊಲೀಸರು ಪ್ರಾಮಾಣಿಕವಾಗಿ ಪರಿಗಣಿಸಿ ಧನನಾಯಕ್-ಹಿತ್ತಲಮಕ್ಕಿ ಕುಟುಂಬದ ನಡುವಿನ ಫೈನಾನ್ಸ್ ವ್ಯವಹಾರ-ಅದಿರು ದಂಧೆ ಹಕೀಕತ್ತು ಹೊರಹಾಕಬಹುದಾ? ಅಥವಾ ಸುಪಾರಿ ಹತ್ಯೆಗೆ ಹಫ್ತಾ ಬಣ್ಣ ಬಳಿದು ಹಳ್ಳ ಹಿಡಿಸುವರಾ?

■ ವರದಿಗಾರ


ಮರೆಯಾದ ಮೌನಿ

ರೈಲು ಅಪಘಾತದಲ್ಲಿ ದೇವದುರ್ಗ ಶಾಸಕ ಎ. ವೆಂಕಟೇಶ್ ನಾಯಕ್ ನಿಧನ



ಎ. ವೆಂಕಟೇಶ್ ನಾಯಕ್

ಮೊನ್ನೆ ಸೋಮವಾರ ಬೆಳಗ್ಗೆ 2.20ರ ಸುಮಾರಿಗೆ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಧರ್ಮಾವರಂ ತಾಲೂಕಿನ ರಂಗೇಪಲ್ಲಿ ಮತ್ತು ಪೆನುಗೊಂಡ ನಡುವಿನ ಮಡಕಶಿರ ಎಂಬಲ್ಲಿ ನಡೆದ ರೈಲು ಅಪಘಾತದಲ್ಲಿ ರಾಯಚೂರು ಜಿಲ್ಲೆಯ ಹಿರಿಯ ಕಾಂಗ್ರೆಸ್ ಧುರೀಣ ಮತ್ತು ದೇವದುರ್ಗ ಕ್ಷೇತ್ರದ ಶಾಸಕ ಎ. ವೆಂಕಟೇಶ್ ನಾಯಕ ನಿಧನರಾದರು. ಹಿಂದಿನ ದಿನ ಪಕ್ಷದ ಸಭೆ ಮತ್ತು ಸ್ನೇಹಿತರ ಖಾಸಗಿ ಸಮಾರಂಭದಲ್ಲಿ ಪಾಲ್ಗೊಂಡು ಬೆಂಗಳೂರು-ನಾಂದೇಡ್ ಎಕ್ಸ್‌ಪ್ರೆಸ್ (ರೈಲುಗಾಡಿ ಸಂಖ್ಯೆ: 16594) ಮೂಲಕ ರಾಯಚೂರಿಗೆ ಮರಳುವಾಗ ಈ ಅವಘಡ ಸಂಭವಿಸಿತು. ವೇಗವಾಗಿ ಚಲಿಸುತ್ತಿದ್ದ ರೈಲಿಗೆ ಮಡಕಶಿರ ಲೆವಲ್ ಕ್ರಾಸಿಂಗ್ ಬಳಿ ಭಾರಿ ಗಾತ್ರದ ಗ್ರಾನೈಟ್ ಬಂಡೆಯನ್ನು ಹೊತ್ತಿದ್ದ ಲಾರಿ ಜೋರಾಗಿ ಢಿಕ್ಕಿ ಹೊಡೆದ ಪರಿಣಾಮವಾಗಿ ಈ ಅಪಘಾತ ಸಂಭವಿಸಿತು.



ಬಿ.ವಿ. ನಾಯಕ್

ಲಾರಿ ನೇರವಾಗಿ ವೆಂಕಟೇಶ್ ನಾಯಕ್ ಪಯಣಿಸುತ್ತಿದ್ದ ಪ್ರಥಮ ದರ್ಜೆಯ ಹವಾನಿಯಂತ್ರಿತ ಎಚ್-1 ಬೋಗಿಗೆ ಢಿಕ್ಕಿ ಹೊಡೆದ ಪರಿಣಾಮವಾಗಿ ವೆಂಕಟೇಶ್ ನಾಯಕ್ ಒಳಗೊಂಡಂತೆ ಇತರ ಇಬ್ಬರು ಪ್ರಯಾಣಿಕರು, ಒಬ್ಬ ರೇಲ್ವೆ ಸಿಬ್ಬಂದಿ ಹಾಗೂ ಲಾರಿಯಲ್ಲಿದ್ದ ಕ್ಲೀನರ್ - ಒಟ್ಟು ಐದು ಜನ ಸ್ಥಳದಲ್ಲೇ ಅಸು ನೀಗಿದರು. ಲಾರಿ ರೈಲಿಗೆ ಅದೆಷ್ಟು ರಭಸವಾಗಿ ಗುದ್ದಿತ್ತೆಂದರೆ ಲಾರಿಯಲ್ಲಿದ್ದ ದೈತ್ಯಗಾತ್ರ ಗ್ರಾನೈಟ್ ಬಂಡೆ ರೈಲಿಗೆ ಅಪ್ಪಳಿಸಿ ರೈಲುಗೋಡೆಯನ್ನು ಮುರಿದು ಒಳಗಿದ್ದ ಪ್ರಯಾಣಿಕರ ಮೇಲೆ ಬಿದ್ದು ಅವರ ದೇಹಗಳನ್ನು ನಜ್ಜುಗುಜ್ಜಾಗಿಸಿಬಿಟ್ಟಿತ್ತು. ಬಂಡೆ ರೈಲಿನ ಮೇಲೆ ಅಪ್ಪಳಿಸಿದ್ದರಿಂದ ರೈಲಿನ ನಾಲ್ಕು ಬೋಗಿಗಳು ಹಳಿ ತಪ್ಪಿದವು. ರೈಲುಗಾಡಿಯ ಚಾಲಕ ಕೂಡಲೇ ರೈಲನ್ನು ನಿಧಾನಗೊಳಿಸಿ ನಿಲ್ಲಿಸಿದ ಪರಿಣಾಮವಾಗಿ ಇನ್ನೂ ಹಲವು ಬೋಗಿಗಳು ಹಳಿತಪ್ಪಿ ಆಗಬಹುದಾದ ಭಾರಿ ಅನಾಹುತ ತಪ್ಪಿತು.

ವೆಂಕಟೇಶ್ ನಾಯಕರ ನಿಧನ ಇಡೀ ರಾಯಚೂರು ಜಿಲ್ಲೆಯಾದ್ಯಂತ ನೀರವ ಮೌನವನ್ನು ಸೃಷ್ಟಿಸಿತ್ತು. ಸಾವಿನ ಸುದ್ದಿ ಕಾಡ್ಗಿಚ್ಚಿನಂತೆ ಜಿಲ್ಲೆಯಾದ್ಯಂತ ಹಬ್ಬಿ ಸೋಮವಾರ ಬೆಳಗ್ಗೆಯಿಂದಲೇ ನೂರಾರು ಜನ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬರಲಾರಂಭಿಸಿದರು. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ವೆಂಕಟೇಶ ನಾಯಕರ ಪಾರ್ಥಿವ ಶರೀರ ರಾಯಚೂರು ನಗರಕ್ಕೆ ಆಗಮಿಸುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು "ವೆಂಕಟೇಶ್ ನಾಯಕ್ ಅಮರ್ ರಹೆ" ಎಂಬ ಘೋಷಣೆಯನ್ನು ಕೂಗುತ್ತಾ ಅಗಲಿದ ನಾಯಕನಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮತ್ತು ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ. ವಸಂತಕುಮಾರ್, ತೆಲಂಗಾಣ ರಾಜ್ಯದ ನಾರಾಯಣಪೇಟ್ ಕ್ಷೇತ್ರದ ಶಾಸಕ ಹಾಗೂ ಸರ್ವೋದಯ ವಿದ್ಯಾಸಂಸ್ಥೆಯ ಅಧ್ಯಕ್ಷ ಎಸ್.ಆರ್.ರೆಡ್ಡಿ, ಮಾಜಿ ಶಾಸಕ ಎ. ಪಾಪರೆಡ್ಡಿ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚಾಮರಸ ಮಾಲಿಪಾಟೀಲ್, ಹಿರಿಯ ಕಾಂಗ್ರೆಸ್ ನಾಯಕರಾದ ಪಾರಸಮಲ್ ಸುಖಾಣಿ, ಜಯವಂತರಾವ್ ಪತಂಗೆ, ರವೀಂದ್ರ ಜಲ್ದಾರ್, ಸಾಮಾಜಿಕ ಕಾರ್ಯಕರ್ತರಾದ ಡಾ.ವಿ.ಎ. ಮಾಲಿಪಾಟೀಲ್ - ಹೀಗೆ ನೂರಾರು ಜನ ನಾಯಕರು, ಕಾರ್ಯಕರ್ತರು ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಸುಮಾರು ಎರಡು ಗಂಟೆಯ ಹೊತ್ತಿಗೆ ಪಾರ್ಥಿವ ಶರೀರವನ್ನು ವೆಂಕಟೇಶ ನಾಯಕರ ತವರೂರಾದ ದೇವದುರ್ಗದ ಅರಕೆರಾ ಗ್ರಾಮಕ್ಕೆ ತರಲಾಯಿತು. ಅಷ್ಟು ಹೊತ್ತಿಗಾಗಲೇ ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯಿಂದ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವೆಂಕಟೇಶ್ ನಾಯಕರ ಅಭಿಮಾನಿಗಳು ಅರಕೆರಾದಲ್ಲಿ ನೆರೆದಿದ್ದರು. ಇಡೀ ಅರಕೆರಾ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಯಂಪ್ರೇರಿತ ಬಂದ್ ಪರಿಸ್ಥಿತಿ ನಿರ್ಮಾಣವಾಗಿತ್ತು.

ಚಂಡೀಗಡದಲ್ಲಿದ್ದ ವೆಂಕಟೇಶ ನಾಯಕರ ಮಗ ಮತ್ತು ರಾಯಚೂರು ಕ್ಷೇತ್ರದ ಲೋಕಸಭಾ ಸದಸ್ಯ ಬಿ.ವಿ. ನಾಯಕ, ವೈದ್ಯಕೀಯ ಶಿಕ್ಷಣ ಸಚಿವ ಮತ್ತು ರಾಯಚೂರು ಉಸ್ತುವಾರಿ ಮಂತ್ರಿ ಡಾ. ಶರಣಪ್ರಕಾಶ ಪಾಟೀಲ, ಸಣ್ಣ ನೀರಾವರಿ ಸಚಿವ ಮತ್ತು ಕೊಪ್ಪಳದ ಉಸ್ತುವಾರಿ ಮಂತ್ರಿ ಶಿವರಾಜ್ ತಂಗಡಗಿ, ಪೌರಾಡಳಿತ, ವಕ್ಫ್ ಮತ್ತು ಹಜ್ ಸಚಿವ ಖಮರುಲ್ ಇಸ್ಲಾಮ್, ಕೊಪ್ಪಳ ಕ್ಷೇತ್ರದ ಲೋಕಸಭಾ ಸದಸ್ಯ ಸಂಗಣ್ಣ ಕರಡಿ, ರಾಯಚೂರು ಶಾಸಕ ಡಾ.ಶಿವರಾಜ್ ಪಾಟೀಲ್, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ಮಾನ್ವಿ ಶಾಸಕ ಹಂಪಯ್ಯ ಸಾಹುಕಾರ್, ಲಿಂಗಸೂಗೂರು ಶಾಸಕ ಮಾನಪ್ಪ ವಜ್ಜಲ್, ಯಾದಗಿರಿ ಶಾಸಕ ಡಾ. ಎ.ಬಿ. ಮಾಲಕರೆಡ್ಡಿ, ಚಿತ್ತಾಪುರ ಶಾಸಕ ಪ್ರಿಯಾಂಕ ಖರ್ಗೆ, ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್. ಬೋಸರಾಜು ಮತ್ತು ಹಾಲಪ್ಪ ಆಚಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಸಂತಕುಮಾರ್ ಸೇರಿದಂತೆ ನೂರಾರು ನಾಯಕರು, ಸಾವಿರಾರು ಬೆಂಬಲಿಗರು ಆಗಲೇ ಅರಕೆರಾ ತಲುಪಿದ್ದರು. ರಾಯಚೂರು ಜಿಲ್ಲಾಧಿಕಾರಿ ಎಸ್. ಸಸಿಕಾಂತ್ ಸೆಂಥಿಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ಸಿಂಗ್ ರಾಥೋಡ್ ಕೂಡ ಸ್ಥಳದಲ್ಲೇ ಮೊಕ್ಕಾಂ ಹೂಡಿ ಎಲ್ಲಾ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದರು.

ಅರಕೆರಾ ಗ್ರಾಮದಿಂದ ಹೊರಟ ವೆಂಕಟೇಶ ನಾಯಕರ ಅಂತಿಮ ಯಾತ್ರೆಯಲ್ಲಿ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚಿನ ಜನ ಸ್ವಯಂಪ್ರೇರಿತವಾಗಿ ಭಾಗವಹಿಸಿದ್ದರು. ಪಕ್ಕದ ಜುಟ್ಮಲಮರಡಿ ಗ್ರಾಮದ ವೆಂಕಟೇಶ ನಾಯಕರ ಜಮೀನಿನಲ್ಲೇ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಸಲಾಯಿತು. ವೆಂಕಟೇಶ ನಾಯಕರ ಹಿರಿಯ ಮಗ ಮತ್ತು ರಾಯಚೂರು ಲೋಕಸಭಾ ಅಭ್ಯರ್ಥಿ ಬಿ.ವಿ. ನಾಯಕ್ ತನ್ನ ತಮ್ಮ ಹಾಗೂ ರಾಯಚೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ರಾಜಶೇಖರ ನಾಯಕರ ಜೊತೆಗೂಡಿ ಅಂತಿಮ ವಿಧಿವಿಧಾನಗಳನ್ನು ಪೂರೈಸಿದರು. ವೆಂಕಟೇಶ ನಾಯಕರ ರಾಜಕೀಯ ವೈರಿ ಹಾಗೂ ಖುದ್ದು ಮೊಮ್ಮಗ ಕೆ. ಶಿವನಗೌಡ ನಾಯಕ ಒಳಗೊಂಡಂತೆ ಕುಟುಂಬ ಸದಸ್ಯರು, ಬಂಧುಗಳು, ಸ್ನೇಹಿತರು ಹಾಜರಿದ್ದರು.



ಅಪಘಾತಕ್ಕೀಡಾದ ರೈಲು

> "ವೆಂಕಟೇಶ ನಾಯಕ ಎಂದೂ ... ಮಾತನಾಡದ ಮೌನ ರಾಜಕಾರಣಿಯಾಗಿ... ಮಾತಾಡುವುದು ಕಡಿಮೆ, ಕೆಲಸ ಮಾಡು... ಜಾಸ್ತಿ, ಕೆಲಸ ಮಾಡುವ ಮೂಲಕವೇ ತೋ... ಸ್ವಭಾವ. ಹದಿನಾರನೇ ಶತಮಾನದ ಕನ್ನ... ಲಕ್ಷ್ಮೀಶ ಬರೆದ ಜೈಮಿನಿ ಭಾರತ ಮಹ... ವನ್ನು ಬಹಳ ಆಳವಾಗಿ ಓದಿದವರು. ಗಿ... ಗಳನ್ನು ನೆಟ್ಟು, ಅವುಗಳಿಗೆ ಆರೈಕೆ ... ಬೆಳೆಸುವುದರಲ್ಲಿ ತುಂಬಾ ಖುಷಿ ಪ... ಪರಿಸರ ಪ್ರೇಮಿ. ಎಪ್ಪತ್ತೊಂಬತ್ತರ ವ... ವಯಸ್ಸಿನಲ್ಲೂ ಕೆಡಿಬಿ ಸಭೆಗಳಿಗೆ, ಅ... ಕೆಲಸಗಳಲ್ಲಿ ಲವಲವಿಕೆಯಿಂದ ಕ್ರಿಯಾಶೀ... ಭಾಗವಹಿಸುತ್ತಿದ್ದ ವೆಂಕಟೇಶ ನಾಯಕ ... ರಾಜಕಾರಣಿಗಳಿಗೆ ಮಾದರಿ."
>
> - ಭೀಮನಗೌಡ ...
>
> ವೆಂಕಟೇಶ ನಾಯಕರ ದೀರ್ಘ ಕಾಲದ ಒ...

ಸವೆದ ಹಾದಿ


ದೇವದುರ್ಗ ತಾಲೂಕು ಅರಕೆರಾ ಗ್ರಾಮದ ದಿವಂಗತ ಭಗವಂತರಾಯ ಮತ್ತು ರಮಾದೇವಿ ದಂಪತಿಯ... ಪುತ್ರವೆಂಕಟೇಶ ನಾಯಕ. 1936ರ ಜನವರಿ 2... ಜನನ. ಒಂದರಿಂದ ನಾಲ್ಕನೇ ಇಯತ್ತೆಯ ತನಕ ವಿ... ಹುಟ್ಟೂರು ಅರಕೆರೆಯಲ್ಲಿ. ಐದರಿಂದ ಹ... ವಿದ್ಯಾಭ್ಯಾಸ ದೇವದುರ್ಗದಲ್ಲಿ. ಇಂಟರ್‌ಮೀಡಿಯ... ಎರಡು ವರ್ಷದ ಜೀವಶಾಸ್ತ್ರ ಅಭ್ಯಾಸಕ್ಕಾಗಿ ಹೈದ... ಸೈಫಾಬಾದ್‌ಗೆ ಪಯಣ. ಆದರೆ ಅಲ್ಲಿ ಫೇಲಾದ... ವಿದ್ಯಾಭ್ಯಾಸಕ್ಕೆ ಗುಡ್‌ಬೈ.

ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ವೆ... ನಾಯಕರ ಮೇಲೆ ತಂದೆಗೆ ಎಲ್ಲಿಲ್ಲದ ಮ... ಓದೋದು ಸಾಕು, ಹೊಲ-ಮನೆ ನೋಡಿ... ಊರಲ್ಲಿಯೇ ಇರು ಎಂಬ ಅಪ್ಪನ ಪ್ರೀತಿಯ ... ವೆಂಕಟೇಶ ನಾಯಕ ಓಗೊಟ್ಟು ಅರಕೆರಾದಲ್ಲಿ ಕ... ನೆಲೆಯೂರಿದರು. ಧಾರವಾಡ ಜಿಲ್ಲೆ ಅತ್ತಿಗೇರಿ ... ಸಾವಿತ್ರಿದೇವಿ ಅವರನ್ನು 1962ರಲ್ಲಿ ಮದುವೆ... ಅವರಿಗೆ ಒಟ್ಟು ಐದು ಜನ ಮಕ್ಕಳು. ಮೂವರು ... ಪೈಕಿ ಒಬ್ಬರು ಅಸುನೀಗಿದ್ದು, ಇಬ್ಬರು ಮದು... ಗಂಡನ ಮನೆ ಸೇರಿದ್ದಾರೆ. ಇಬ್ಬರ ಪುತ್ರರ ಪೈಕಿ ... ಪುತ್ರ ಬಿ.ವಿ.ನಾಯಕ ರಾಯಚೂರು ಲೋಕಸಭೆ... ಸದಸ್ಯರಾಗಿದ್ದರೆ, ಮತ್ತೊಬ್ಬ ಪುತ್ರ ರಾಜಶೇಖರ ... ರಾಯಚೂರು ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾ...

ರಾಜಕೀಯ ಬದುಕು

ವೆಂಕಟೇಶ ನಾಯಕರು ಅರಕೆರಾದ ... ಬೆಳೆಗಾರರ ಸಹಕಾರ ಸಂಘಕ್ಕೆ 1966ರಲ್ಲಿ ಸ... ಆಯ್ಕೆಯಾಗಿ ನಂತರ ಅದರ ಅಧ್ಯಕ್ಷರೂ ಆದರು. ... ಸಕ್ರಿಯ ರಾಜಕಾರಣಕ್ಕೆ ಪ್ರವೇಶಿಸಿ ಗ್ರಾಮ ಪಂ...

▶▶



ವೆಂಕಟೇಶ್ ನಾಯಕ್ ದಂಪತಿ




ದೇವದುರ್ಗಕ್ಕೆ ಮತ್ತೊಂದು ಉಪ ಚುನಾವಣೆ

ರೈಲು ಅಪಘಾತದಲ್ಲಿ ಕಾಂಗ್ರೆಸ್ ಶಾಸಕ ಎ.ವೆಂಕಟೇಶ ನಾಯಕರ ದುರ್ಮರಣದಿಂದಾಗಿ ದೇವದುರ್ಗ ವಿಧಾನಸಭೆ ಕ್ಷೇತ್ರಕ್ಕೆ ಯಾರೂ ನಿರೀಕ್ಷಿಸದ ಮತ್ತೊಂದು ಉಪಚುನಾವಣೆಯನ್ನು ದಿಢೀರನೆ ತಂದಿಟ್ಟಿದೆ.

ಕೇವಲ ಆರು ವರ್ಷಗಳ ಅವಧಿಯಲ್ಲಿ ಎರಡನೇ ಉಪ ಚುನಾವಣೆ ದೇವದುರ್ಗ ಕ್ಷೇತ್ರ ಕಾಣಲಿದೆ. 2008ರಲ್ಲಿ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ದೇವದುರ್ಗ ಕ್ಷೇತ್ರದಲ್ಲಿ ವೆಂಕಟೇಶ ನಾಯಕರು ತಮ್ಮ ಮೊಮ್ಮಗ ಹಾಗೂ ಜನತಾದಳ ಅಭ್ಯರ್ಥಿ ಕೆ. ಶಿವನಗೌಡ ನಾಯಕನ ವಿರುದ್ಧ ಸೋತರು. ಗೆದ್ದ ಮೂರೇ ತಿಂಗಳಿಗೆ ಶಿವನಗೌಡ ನಾಯಕ ಆಪರೇಷನ್ ಕಮಲ ಕಾರ್ಯಾಚರಣೆಯಲ್ಲಿ ಬಿಜೆಪಿಗೆ ಬಿಕರಿಯಾದ. ಅದೇ ವರ್ಷ ಉಪಚುನಾವಣೆ ಎದುರಾದಾಗ ಬಿಜೆಪಿಯಿಂದ ನಿಂತಿದ್ದ ಮೊಮ್ಮಗ ಶಿವನಗೌಡ ನಾಯಕ ವಿರುದ್ಧ ವೆಂಕಟೇಶ ನಾಯಕ ಕಣಕ್ಕಿಳಿಯಲಿಲ್ಲ. ಬದಲಿಗೆ ತಮ್ಮ ಮಗ ಬಿ.ವಿ. ನಾಯಕನನ್ನು ನಿಲ್ಲಿಸಿದರು. ಆಗ ರಾಜ್ಯದಲ್ಲಿ ಬಿಜೆಪಿಯ ಆರ್ಭಟ ಮತ್ತು ಗಣಿಧಣಿಗಳ ಅಟ್ಟಹಾಸ ಎಲ್ಲೆ ಮೀರಿತ್ತು. ಬಿಜೆಪಿಯ ಈ ಉಬ್ಬರದಲೆಯಲ್ಲಿ ದೇವದುರ್ಗ ಕ್ಷೇತ್ರದಲ್ಲಿ ಬಿ.ವಿ. ನಾಯಕ ಕೂಡ ಕೆ. ಶಿವನಗೌಡ ನಾಯಕನ ವಿರುದ್ಧ ಸೋತರು.

ಹೀಗೆ 2008ರಲ್ಲಿ ಎರಡು ಚುನಾವಣೆ, 2013ರ ವಿಧಾನಸಭಾ ಚುನಾವಣೆ ಮತ್ತು 2014ರ ಲೋಕಸಭಾ ಚುನಾವಣೆಯಲ್ಲಿ ಪರಸ್ಪರ ಎದುರಾಳಿಗಳಾಗಿ ಹೋರಾಡಿದ ಅರಕೆರಾ ನಾಯಕರ ಕುಟುಂಬ ವೆಂಕಟೇಶ ನಾಯಕರ ಸಾವಿನಿಂದ ತೆರವಾದ ದೇವದುರ್ಗ ಶಾಸಕ ಸ್ಥಾನಕ್ಕಾಗಿ ನಡೆಯುವ ಮತ್ತೊಂದು ಉಪಚುನಾವಣೆಯಲ್ಲಿ ಪರಸ್ಪರ ಎದುರಾಗುವ ಸಾಧ್ಯತೆಯಿದೆ.

ಈ ಬಾರಿ ವೆಂಕಟೇಶ ನಾಯಕರ ಇನ್ನೊಬ್ಬ ಪುತ್ರ ಹಾಗೂ ಹಾಲಿ ರಾಯಚೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿರುವ ರಾಜಶೇಖರ ನಾಯಕ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಗೂ ವೆಂಕಟೇಶ ನಾಯಕರ ಮೊಮ್ಮಗ ಕೆ. ಶಿವನಗೌಡ ನಾಯಕ ಬಿಜೆಪಿ ಅಭ್ಯರ್ಥಿಯಾಗುವ ಸಾಧ್ಯತೆ ನಿಚ್ಚಳವಾಗಿ ಕಾಣಿಸುತ್ತಿದೆ.



ಒಕ್ಕೂಟ ವ್ಯವಸ್ಥೆಯಲ್ಲೊಬ್ಬ ಸರ್ವಾಧಿಕಾರಿ ಪ್ರಧಾನಿ

'ಕೈ' ಕೊಟ್ಟ ಪ್ರಧಾನಿ ಮೋದಿ; ಇನ್ನು ಹೋರಾಟವೊಂದೇ ಹಾದಿ!




ಮುಂಬೈ ಕರ್ನಾಟಕದ ಸಮಸ್ತ ಜನತೆಯ ಬದುಕಿನ ಪ್ರಶ್ನೆಗೆ ಪರಿಹಾರ ಒದಗಿಸುವ ಪ್ರಯತ್ನ ಬೇಕಿದ್ದ ದೇಶದ ಪ್ರಧಾನಿ ನರೇಂದ್ರ ಮೋದಿ ...ತೂ ಸಕಾರಾತ್ಮಕ ಸ್ಪಂದನೆ ನೀಡದೇ ಇಡೀ ರಾಜ್ಯದ ...ಮನ್ನು ನಿರಾಶೆಗೊಳಿಸಿದ್ದಾರೆ. ಹಾಗೆಯೇ ಒಕ್ಕೂಟ ...ತು ಆಶಯಗಳನ್ನೇ ಅವಮಾನಗೊಳಿಸಿದ್ದಾರೆ.

...ಾದಲೇ ನಿಗದಿಯಾದಂತೆ, ಮುಖ್ಯಮಂತ್ರಿಗಳ ...ದ ಸರ್ವಪಕ್ಷ ಸದಸ್ಯರ, ಮಠಾಧೀಶರ ಮತ್ತು ರೈತ ...ರ ನಿಯೋಗ ಸೋಮವಾರ ನವದೆಹಲಿಯಲ್ಲಿ ...ಮಂತ್ರಿಯವರನ್ನು ಭೇಟಿ ಮಾಡಿ, ಸಭೆ ನಡೆಸಿತು. ...ಗಳಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ಸಿಗದ ... ನಿಯೋಗ ಅಸಮಾಧಾನಗೊಂಡಿದೆ. ಸೋಮವಾರ ...ಂದಲೇ ನರಗುಂದ, ನವಲಗುಂದ ತಾಲೂಕುಗಳು ...ವಾಗಿವೆ. ಹುಬ್ಬಳ್ಳಿ-ಧಾರವಾಡ, ಗದಗದಲ್ಲೂ ನಿತ್ಯ ...ಯ ಪಾಲಿಟಿಕ್ಸ್ ವಿರುದ್ಧ ಪ್ರತಿಭಟನೆ, ಬಂದ್ ...ಮಲ್ಲಿವೆ.

ಪ್ರಧಾನಿ ನಿಲುವಿನಿಂದ ತುಂಬ ನಿರಾಶೆಯಾಗಿದೆ: ಜಯಮೃತ್ಯುಂಜಯ ಸ್ವಾಮಿ

"ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೀರಸವಾದ, ನೇತ್ಯಾತ್ಮಕವಾದ ನಿಲುವಿನಿಂದ ತುಂಬ ನಿರಾಶೆಯಾಗಿದೆ. ಸಭೆಯಲ್ಲಿ ನಾನು ಮಾತನಾಡಿ, ಮಠಾಧೀಶರಾದ ನಾವು ನಿಮಗೆ ಜಲಭಿಕ್ಷೆಯನ್ನು ಬೇಡುತ್ತಿದ್ದೇವೆ ಎಂದು ಹೇಳಿದೆ. ಇದಕ್ಕೂ ಪ್ರಧಾನಿ ಮೌನವಾಗಿಯೇ ಇದ್ದರು. ಆಗಸ್ಟ್ 27ರಂದು ನರಗುಂದದಲ್ಲಿ ರೈತರು, ಮಠಾಧೀಶರ ಸಭೆ ಕರೆದಿದ್ದೇವೆ. ಅಂದು ಮುಂದಿನ ಹೋರಾಟದ ಬಗ್ಗೆ ನಿರ್ಧರಿಸಲಾಗುವುದು" ಎಂದು ಕೂಡಲಸಂಗಮ ಪಂಚಮಸಾಲಿಪೀಠದ ಜಯಮೃತ್ಯುಂಜಯ ಸ್ವಾಮೀಜಿ ದೆಹಲಿ ಸಭೆಯ ಬಳಿಕ ಪ್ರಧಾನಿ ನಿಲುವನ್ನು ಖಂಡಿಸಿದ್ದರು.

52 ಸದಸ್ಯರಿದ್ದ ರಾಜ್ಯ ನಿಯೋಗ ಮಹದಾಯಿ ಮತ್ತು ಮಲಪ್ರಭ ಜೋಡಣೆಯ ಅಗತ್ಯವನ್ನು ಪ್ರಧಾನಿಗೆ ಮನವರಿಕೆ ಮಾಡಿದರೂ, ಪ್ರಧಾನಿಗಳಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹದಾಯಿ ಯೋಜನೆಯ ಕುರಿತಾಗಿ ರಾಜ್ಯದ ನಾಲ್ಕು ಜಿಲ್ಲೆಗಳ ಜನರು ಇದಕ್ಕಾಗಿ ತಿಂಗಳಿನಿಂದ ನಡೆಸುತ್ತಿರುವ ಹೋರಾಟದ ಬಗ್ಗೆ ವಿವರಿಸಿದರು. ಅರಬ್ಬಿ ಸಮುದ್ರಕ್ಕೆ ಹರಿದುಹೋಗುವ ನೀರನ್ನು ಬಳಸಿಕೊಳ್ಳಲು ಮಹಾರಾಷ್ಟ್ರ ಮತ್ತು ಗೋವಾ ಸರ್ಕಾರಗಳು ಅನಗತ್ಯ ತಕರಾರು ತೆಗೆಯುತ್ತಿವೆ. ವಿಷಯ ಈಗ ನ್ಯಾಯಾಧೀಕರಣದ ಮುಂದಿದ್ದು ಇದರ ಇತ್ಯರ್ಥಕ್ಕೆ ಸಾಕಷ್ಟು ಸಮಯ ಹಿಡಿಯಲಿದೆ. ಹೀಗಾಗಿ ನೀವು ಮಧ್ಯ ಪ್ರವೇಶಿಸಿ, ನ್ಯಾಯಾಧೀಕರಣದ ಹೊರಗಡೆ ಮಾತುಕತೆಯ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಹಕರಿಸಬೇಕು. ಮೂರೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು, ಶೀಘ್ರ ಪರಿಹಾರ ಒದಗಿಸಿ ಎಂದು ಪ್ರಧಾನಿಯವರಲ್ಲಿ ವಿನಂತಿಸಿದರು. ಸಭೆಯಲ್ಲಿದ್ದ ರಾಜ್ಯದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ನಾಯಕರು, ಮಠಾಧೀಶರು ಮತ್ತು ರೈತ ನಾಯಕರು ಸೇರಿ ಒಟ್ಟು 22 ಜನ ಪ್ರಧಾನಿಯವರಿಗೆ ಈ ಯೋಜನೆಯ ಅಗತ್ಯತೆಯ ಕುರಿತು ವಿವರಿಸಿದರು.



...ಕೆಗೆ ಆಹುತಿಯಾದ ಬಸ್

ಆದರೆ ಇದಕ್ಕೆ ಕೇವಲ ಮೂರು-ನಾಲ್ಕು ನಿಮಿಷಗಳ ಉತ್ತರ ನೀಡಿದ ಪ್ರಧಾನಿ, 'ನೀವು ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿ ಸಮಸ್ಯೆ ಬಗೆಹರಿಸಿಕೊಳ್ಳಿ. ಗೋವಾ ಮತ್ತು ಮಹಾರಾಷ್ಟ್ರದ ಕಾಂಗ್ರೆಸ್ ನಾಯಕರನ್ನು ಮೊದಲು ಒಪ್ಪಿಸಿ. ನಂತರ ನಾನು ಗೋವಾ, ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸುವ ವ್ಯವಸ್ಥೆ ಮಾಡುವೆ' ಎಂದು ಹೇಳಿ ಇಡೀ ನಿಯೋಗಕ್ಕೆ ನಿರಾಶೆ ಮೂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಎಚ್.ಕೆ. ಪಾಟೀಲ ಮತ್ತು ಲೋಕಸಭೆಯ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿಗಳ ಈ ಧೋರಣೆಗೆ ಆಕ್ಷೇಪ ವ್ಯಕ್ತಪಡಿಸಿ ಮಾತನಾಡುತ್ತ 'ಹಿಂದೊಮ್ಮೆ ಮದ್ರಾಸ್‌ನಲ್ಲಿ (ಈಗಿನ ಚೆನ್ನೈ) ಕುಡಿಯುವ ನೀರಿಗೆ ತೀವ್ರ ಸಮಸ್ಯೆಯಾದಾಗ, ಕೃಷ್ಣಾ ವ್ಯಾಪ್ತಿಯ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳ ಮುಖ್ಯಮಂತ್ರಿಗಳಿಗೆ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟು, ಅವರ ಮನವೊಲಿಸಿ ಮದ್ರಾಸಿಗೆ 5 ಟಿಎಂಸಿ ನೀರನ್ನು ಬಿಡಿಸುವಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಯಶಸ್ವಿಯಾಗಿದ್ದರು. ನೀವೂ ಆ ಮಾದರಿಯಲ್ಲಿ ವಿಚಾರಿಸಿದರೆ ಮಾತ್ರ ಒಕ್ಕೂಟ ವ್ಯವಸ್ಥೆಯ ಘನತೆಯನ್ನು ಎತ್ತಿ ಹಿಡಿದಂತಾಗುತ್ತದೆ' ಎಂದು ಪ್ರಧಾನಿಯವರಿಗೆ ವಿವರಿಸಿದರು. ಇದಕ್ಕೆ ಪ್ರಧಾನಿಯವರಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

ಸಭೆ ಬಳಿಕ ಮಾತನಾಡಿದ ಸಿದ್ದರಾಮಯ್ಯನವರು 'ರಾಜ್ಯದ ಜೀವನ್ಮರಣದ ಬೇಡಿಕೆಗೆ ಪ್ರಧಾನಿಯವರು ನೀಡಿದ ನಕಾರಾತ್ಮಕ ಸ್ಪಂದನೆಯಿಂದ ನಿರಾಶೆಯಾಗಿದೆ. ಆದರೂ ನಮ್ಮ ಪ್ರಯತ್ನ ಬಿಡುವುದಿಲ್ಲ. ಕೇಂದ್ರ ಸಚಿವರಾದ ಅನಂತಕುಮಾರ್ ಮತ್ತು ಸದಾನಂದಗೌಡರಿಗೆ ಪ್ರಧಾನಿ ಮನವೊಲಿಸಲು ವಿನಂತಿಸಿದ್ದೇನೆ. ಅವರು ಸಫಲರಾಗುತ್ತಾರೆಂಬ ವಿಶ್ವಾಸವಿದೆ. ಹೀಗಾಗಿ ಇನ್ನೂ ಆಶಾಭಾವನೆಯಿದೆ' ಎಂದು ಪ್ರತಿಕ್ರಿಯಿಸಿದರಾದರೂ, ಅವರಲ್ಲಿ ತೀವ್ರ ಬೇಸರದ ಭಾವ ಇದ್ದುದು ಎದ್ದು ಕಾಣುತ್ತಿತ್ತು.



ಗದಗ ಬಂದ್

ಈ ಕುರಿತು ಮಾತನಾಡಿದ ಕೇಂದ್ರ ಸಚಿವರಾದ ಅನಂತಕುಮಾರ್ ಮತ್ತು ಸದಾನಂದಗೌಡರು 'ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ ಎಂದುಕೊಳ್ಳಬಾರದು. ಪ್ರಧಾನಿ ಈ ಕುರಿತು ಆಲೋಚನೆ ಮಾಡುತ್ತಿದ್ದಾರೆ' ಎಂದು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ವರ್ತಿಸಿದರು.

ಧಾರವಾಡದ ರೇವಣಸಿದ್ಧೇಶ್ವರ ಮಠದ ಬಸವರಾಜ ದೇವರು ಸ್ವಾಮೀಜಿ 'ಪ್ರಧಾನಿ ಕನಿಷ್ಠ ಮಾನವೀಯತೆಯಿಂದ ವರ್ತಿಸಬಹುದಿತ್ತು. ಅವರು ಪ್ರಧಾನಿಯ ಬದಲು ರಾಜಕಾರಣಿಯಂತೆ ವರ್ತಿಸಿದ್ದು ಬೇಸರ ತಂದಿತು' ಎಂದು ಸಭೆಯ ನಂತರ ಹೇಳುತ್ತಿದ್ದುದು ಕಂಡುಬಂದಿತು.

ಒಂದು ಹಂತದಲ್ಲಿ, ಪ್ರಧಾನಿಯವರು ಮೃದುವಾಗಿಯೇ, 'ನೀತಿ ಆಯೋಗದ ಸಭೆಗಳಿಗೆ ಬಹಿಷ್ಕಾರ ಹಾಕುತ್ತೀರಿ. ಭೂ ಮಸೂದೆಗೆ ವಿರೋಧ ವ್ಯಕ್ತಪಡಿಸುತ್ತೀರಿ' ಎಂದು ಆಕ್ಷೇಪಿಸುವ ಮೂಲಕ ಒಬ್ಬ ಪಕ್ಕಾ ಲೋಕಲ್ ರಾಜಕಾರಣಿಯ ವರಸೆಯನ್ನು ಪ್ರದರ್ಶಿಸಿದರು ಎಂದು ಹೇಳಲಾಗುತ್ತಿದೆ.

ನರೇಂದ್ರ ಮೋದಿಯವರ ಒಳಗಡೆ ಇರುವ ಸರ್ವಾಧಿಕಾರಿ ಮನೋಭಾವಕ್ಕೊಂದು ನಿದರ್ಶನವಿದು. ಅಂತಾರಾಷ್ಟ್ರೀಯ ಬಂಡವಾಳಶಾಹಿಗಳೊಂದಿಗೆ ಆಪ್ತವಾಗಿ ಸಲ್ಲಾಪ ನಡೆಸಿ, ಅವರು ಕೇಳಿದ ಬೇಡಿಕೆಗಳನ್ನು ಈಡೇರಿಸಲು ತುದಿಗಾಲಲ್ಲಿ ನಿಲ್ಲುವ ಪ್ರಧಾನಿಗೆ, ತನ್ನದೇ ದೇಶದ ರಾಜ್ಯವೊಂದರ ಬೇಡಿಕೆಗೆ ಸ್ಪಂದಿಸುವ ಔದಾರ್ಯವೂ ಇಲ್ಲದಿರುವುದು ಖಂಡನೀಯ.

■ ಪಿ.ಕೆ. ಮಲ್ಲನಗೌಡರ್

...ಧಾನಿ ಪಕ್ಷವೊಂದರ ಮುಖಂಡನಂತೆ ವರ್ತಿಸಿದ್ದಾರೆ: ತೋಂಟದ ಶ್ರೀ ಆಕ್ರೋಶ



ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಪ್ರಧಾನಿಯ ಚಿಲ್ಲರೆ ... ರಾಜಕಾರಣದ ವಿರುದ್ಧ ಗದಗಿನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ...ಂಟದ ಸಿದ್ಧಲಿಂಗ ಸ್ವಾಮೀಜಿ ಬೆಂಬಲ ವ್ಯಕ್ತಪಡಿಸಿದ್ದಾರೆ. ನರೇಂದ್ರ ...ದಿಯವರ ವರ್ತನೆಯನ್ನು ಅವರು ಕಟುವಾಗಿ ಟೀಕಿಸಿದ್ದಾರೆ.


...ತೋಂಟದ ಶ್ರೀಗಳ ಆಕ್ರೋಶದ ಸಾರಾಂಶವನ್ನು ಅವರ ಮಾತಿನಲ್ಲೇ ...


"ಕಳಸಾ ಬಂಡೂರಿ ಹಾಗೂ ಮಹದಾಯಿ ನಾಲಾ ಯೋಜನೆ ಜಾರಿಗೆ ...ಬಂಧಿಸಿದಂತೆ 4 ಜಿಲ್ಲೆಯ ಜನಪ್ರತಿನಿಧಿಗಳಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ...ಸುವ ಮೂಲಕ ಪ್ರತಿಭಟಿಸಬೇಕು. ಮಹದಾಯಿ ವಿಷಯವಾಗಿ ಪ್ರಧಾನಿ ... ಮೋದಿ ಅವರು ಮುತ್ಸದ್ದಿತನ ತೋರಬೇಕಿತ್ತು, ಆದರೆ ಪ್ರಧಾನಿಯಂತೆ ...ದೇ ಒಬ್ಬ ಪಕ್ಷದ ಮುಖಂಡರಾಗಿ ವರ್ತಿಸಿದ್ದಾರೆ. ಇಡೀ ದೇಶದ ನಾಯಕತ್ವವನ್ನು ...ಕೊಂಡವರು ಮುತ್ಸದ್ದಿತನವನ್ನು ತೋರಬೇಕು. ಪ್ರಧಾನಿ ನರೇಂದ್ರ ಮೋದಿ ... ನತೆ ಆಡಳಿತ ವೈಖರಿಯನ್ನು ಅಣಕಿಸುವಂತಿದೆ.

...ಪ್ರಧಾನಿ, ಎಂದರೆ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ...ವಹಿಸುವವರು. ಆದರೆ ಅಂತಹ ಮಹತ್ವದ ಜವಾಬ್ದಾರಿಯನ್ನು ನಿಭಾಯಿಸುವ ...ದ ನಾಯಕರೇ ಜನಪರ ಯೋಜನೆಯಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ...ಜನೆಯ ಕುರಿತು ಪ್ರಧಾನ ಮಂತ್ರಿಗಳಿಗೆ ಮನವರಿಕೆ ಮಾಡಿಸಿ, ಸಮಸ್ಯೆಯನ್ನು ...ಯಿಸುವುದಾಗಿ ಮಾತನಾಡುತ್ತಿದ್ದ ರಾಜ್ಯದ ಇಬ್ಬರು ಮಾಜಿ ಮುಖ್ಯಮಂತ್ರಿಗಳ ... ಕೂಡ ಮೌನವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಸಂಸದರು ಪ್ರಧಾನಮಂತ್ರಿಗಳ ಮೇಲೆ ಒತ್ತಡ ಹೇರುವಲ್ಲಿ ವಿಫಲರಾಗಿದ್ದಾರೆ. ಕಳೆದ 40 ದಿನಗಳಿಂದ ನಡೆದ ಹೋರಾಟದ ಹಿಂದೆ ಜನಸಾಗರ ಹರಿದುಬರುತ್ತಿದೆ. ಆದರೆ ಯಾವೊಬ್ಬ ಜನಪ್ರತಿನಿಧಿ ಕೂಡ ಇಲ್ಲ. ಈ ಹಿಂದೆ ಅಧಿಕಾರ ನಡೆಸಿದ ಸರ್ಕಾರದಿಂದ ಹಿಡಿದು, ಈಗಿನ ಸರ್ಕಾರದವರೆಗೂ ಯಾವ ಸರ್ಕಾರ ಕೂಡ ಈ ವಿಷಯವಾಗಿ ಬದ್ಧತೆ ತೋರಿಲ್ಲ. ಈಗ ನಡೆದಿರುವ ಪ್ರತಿಭಟನೆ, ರಸ್ತೆ ತಡೆಯಂತಹ ಘಟನೆಗಳಿಂದಾಗಿ ಜನಸಾಮಾನ್ಯರಿಗೆ ತೊಂದರೆಯಾಗುತ್ತಿದೆ. ಆದರೆ ಯಾವೊಬ್ಬ ಜನಪ್ರತಿನಿಧಿಯೂ ಇದರಿಂದ ತೊಂದರೆ ಅನುಭವಿಸುತ್ತಿಲ್ಲ.

ಪ್ರತಿಭಟನೆಯ ನೆಪದಲ್ಲಿ ಸರ್ಕಾರಿ ವ್ಯವಸ್ಥೆಯನ್ನು ನಾಶಪಡಿಸುವುದು ಒಳ್ಳೆಯದಲ್ಲ. ಆದರೆ ಹಾಗೆ ಮಾಡದಿದ್ದರೆ, ಸರ್ಕಾರ ಎಚ್ಚರವಾಗುವುದಿಲ್ಲ. 7.56 ಟಿಎಂಸಿ ನೀರು ನಮ್ಮ ಹಕ್ಕು, ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ ಹೊರತು ಯಾರಪ್ಪನ ಮನೆಯ ಆಸ್ತಿಯನ್ನಲ್ಲ.

ನಾವು ನಮ್ಮ ಹಕ್ಕನ್ನು ಕೇಳುತ್ತಿದ್ದೇವೆ. ಹಾಗಾಗಿ ಸಂವಿಧಾನಿಕವಾಗಿ ಪ್ರತಿಭಟನೆಯನ್ನು ಹಮ್ಮಿಕೊಳ್ಳೋಣ. ಈ ಮೂಲಕ 4 ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ವಿಧಾನಸಭೆ, ವಿಧಾನಪರಿಷತ್, ಲೋಕಸಭಾ ಸದಸ್ಯರು ರಾಜೀನಾಮೆ ನೀಡುವಂತೆ ಮಾಡೋಣ. ಈ ಮೂಲಕ ನಮ್ಮ ಅಸಹಕಾರವನ್ನು ಹೊರಹಾಕೋಣ. ಈ ಸಂದರ್ಭದಲ್ಲಿ ನಮ್ಮನ್ನು ಹೆದರಿಸಲು ಕಿರೀಟವಿಲ್ಲದ ರಾಜರು (ಜನಪ್ರತಿನಿಧಿಗಳು) ಪೊಲೀಸರನ್ನು ಮುಂದೆಬಿಟ್ಟು ಹೆದರಿಸಬಹುದು. ಯಾವುದಕ್ಕೂ ಹೆದರುವುದು ಬೇಡ. ಇಡೀ ಜನಸಾಗರವನ್ನು ಜೈಲಿನಲ್ಲಿ ಹಾಕುವಷ್ಟು ದೊಡ್ಡದಾದ ಜೈಲುಗಳು ರಾಜ್ಯದಲ್ಲಿ ಇಲ್ಲ."





ಬಿಬಿಎಂಪಿ

ಕಳ್ಳರೇ ಬೇಕು ಎಂದ ಜನತೆ

ಬಹುತೇಕ ಮೀಡಿಯಾಗಳೆಲ್ಲ ಕಾಂಗ್ರೆಸ್ ಪರವಾಗೇ ಭವಿಷ್ಯ ನುಡಿದಿದ್ದವು. ವಾರ್ಡ್ ಮೀಸಲಾ[ತಿ] ಕೂಡ ಸರ್ಕಾರದ ಅನುಕೂಲಕ್ಕೆ ತಕ್ಕಂತಿತ್ತು. ಕಳೆದ ಇಪ್ಪತ್ತು ವರ್ಷಗಳಿಂದ ಸರ್ಕಾರದ ವಿರುದ್ಧ[ದ] ಪಕ್ಷವೊಂದನ್ನು ಪಾಲಿಕೆಗೆ ತಂದ ಜಾಯಮಾನವಲ್ಲ ಬೆಂಗಳೂರಿಗರದ್ದು. ಅಷ್ಟಕ್ಕೂ ಕಳೆ[ದ] ಎಂಟು ವರ್ಷಗಳಿಂದ ಪಾಲಿಕೆಯನ್ನಾಳಿದ ಬಿಜೆಪಿ ಮಾಡಿ[ದ] ಅನಾಹುತಗಳು ಒಂದಾ ಎರಡಾ?

ಇರುಳು ಕಂಡ ಬಾವಿಗೆ ಹಗಲು ಬಿದ್ದಂತಾಗಿದೆ ಬಿಬಿಎಂಪಿ ದುರವಸ್ಥೆ. ತಿಳಿದೂ ತಿಳಿದು ಊರ ಉಸ್ತುವಾರಿಯನ್ನು ಮತ್ತೆ ಬಿಜೆಪಿಯ ತೆಕ್ಕೆಗೇ ಒಪ್ಪಿಸಿದ ಬೆಂಗಳೂರಿನ ಭಾಗ್ಯವಂತರ ಆತ್ಮವಂಚನೆಗೆ ಭೂತಪ್ರೇತಗಳಷ್ಟೇ ಭೋಪರಾಕ್ ಹಾಕಿದವೇನೊ!

'...ಬೆಂಗಳೂರಿನ ಪ್ರಬುದ್ಧ ಮತದಾರರು ಲೂಟಿಕೋರರಿಗೇ ಹೆಚ್ಚಿನ ಶಕ್ತಿ ತುಂಬಿದ್ದಾರೆ. ಭ್ರಷ್ಟಾಚಾರ, ಕೆರೆಕಟ್ಟೆ ನುಂಗಿದ ಭೂಗಳ್ಳರ ವಿರುದ್ಧ ಮಾತಾಡಿದರೆ ಗೆಲ್ಲಿಸುವುದಿಲ್ಲ, ಕಳ್ಳಕಾಕರ ಜೊತೆ ನೀವೂ ಸೇರಿ ಎಂಬ ತೀರ್ಪು ನೀಡಿದ್ದಾರೆ. ಕೆರೆಕಟ್ಟೆ ನುಂಗುವವರನ್ನು ತಡೆಯಲು ನಡೆಸಿದ ಹೋರಾಟವೇ ವ್ಯರ್ಥ ಎಂಬ ಸಂದೇಶವನ್ನು ಜನತೆ ನಮಗೆ ರವಾನಿಸಿದ್ದಾರೆ...!' ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಕುಟುಕಿದ ರೀತಿಯೇ ಬೆಂಗಳೂರಿಗರ ಆತ್ಮಘಾತುಕಕ್ಕೆ ಕನ್ನಡಿಯಂತಿತ್ತು.

ಬಹುತೇಕ ಮೀಡಿಯಾಗಳೆಲ್ಲ ಕಾಂಗ್ರೆಸ್ ಪರವಾಗೇ ಭವಿಷ್ಯ ನುಡಿದಿದ್ದವು. ವಾರ್ಡ್ ಮೀಸಲಾತಿ ಕೂಡ ಸರ್ಕಾರದ ಅನುಕೂಲಕ್ಕೆ ತಕ್ಕಂತಿತ್ತು. ಕಳೆದ ಇಪ್ಪತ್ತು ವರ್ಷಗಳಿಂದ ಸರ್ಕಾರದ ವಿರುದ್ಧದ ಪಕ್ಷವೊಂದನ್ನು ಪಾಲಿಕೆಗೆ ತಂದ ಜಾಯಮಾನವಲ್ಲ ಬೆಂಗಳೂರಿಗರದ್ದು. ಅಷ್ಟಕ್ಕೂ ಕಳೆದ ಎಂಟು ವರ್ಷಗಳಿಂದ ಪಾಲಿಕೆಯನ್ನಾಳಿದ ಬಿಜೆಪಿ ಮಾಡಿದ ಅನಾಹುತಗಳು ಒಂದಾ ಎರಡಾ? ಬೆಂಗಳೂರನ್ನು ಅಂತಾರಾಷ್ಟ್ರೀಯವಾಗಿ ಕಸದ ಕೊಂಪೆಯನ್ನಾಗಿಸಿದ ಕುಖ್ಯಾತಿ, ಗಾರ್ಬೇಜ್ ಕಾರಣದಿಂದಾಗಿಯೇ ಡೆಂಗೆ, ಚಿಕೂನ್ ಗುನ್ಯಾದ ತವರೂರಾದ ದುರ್ಗತಿ, ಜನ ವಾಸಿಸುವುದಕ್ಕೂ ಮಾರಕವಾಗಿ ಬೆಂಗಳೂರು ಎಕ್ಕುಟ್ಟಿದ ರೀತಿ, ಸಾಲು ಸಾಲು ಹಗರಣಗಳು, ಆತ್ಮಹತ್ಯೆಯ ಹಾದಿ ಹಿಡಿದ ಗುತ್ತಿಗೆದಾರರು, ಮಾಡಿದ ಸಾಲದ ಬಡ್ಡಿ ಕಟ್ಟುವುದಕ್ಕೂ ಆಗದೆ ಊರಿನ ಐತಿಹಾಸಿಕ ಸ್ಮಾರಕಗಳನ್ನೇ ಬ್ಯಾಂಕುಗಳಿಗೆ ಅಡವಿಟ್ಟ ದಾರಿದ್ರ್ಯ, ಹೊಡೆದ ಕೊಳ್ಳೆ ಮುಚ್ಚಿಹಾಕಲು ಪಾಲಿಕೆ ಗೋದಾಮಿಗೇ ಬೆಂಕಿಯಿಟ್ಟ ಕಪಟ, ಇನ್ನು ಸುಮ್ಮನೆ ಬಿಟ್ಟರೆ ಎಲ್ಲಿ ಸರ್ವನಾಶವಾದೀತೋ ಎಂದು ಪಾಲಿಕೆಯನ್ನೇ ಬರಖಾಸ್ತುಗೊಳಿಸಿದ ಸರ್ಕಾರದ ಕ್ರಮ; ಇತ್ಯಾದಿಗಳ ಪೈಕಿ ಒಂದಾದರೂ ಮತದಾರನ ಮನಸ್ಸಿಗೆ ಮುಟ್ಟಿದ್ದರೆ ಬಿಜೆಪಿಗೆ ಶಾಸ್ತಿಯಾಗಲೇಬೇಕಿತ್ತು.

ರಿಯಲ್ ಎಸ್ಟೇಟ್ ಪಟಾಲಂ

ಮುಖ್ಯಮಂತ್ರಿ ಸಿದ್ದು ತಾನೇ ಬೆಂಗಳೂರನ್ನು ಉಳಿಸಲು ಏನೇನು ಮಾಡಿಲ್ಲ? ಬಿಜೆಪಿಗಳು ದೋಚಿದ್ದ ಸಾವಿರಾರು ಕೋಟಿಗಳ ಬಾಕಿ ಬಿಲ್ ಪಾವತಿಗೆಂದು ಬೊಕ್ಕಸದ ದುಡ್ಡಿತ್ತಿ ಕೊಟ್ಟರು. ಊರ ಉಳಿಸಲು ವಿಧಿಯಿಲ್ಲದೆ ಪಾಲಿಕೆಗೆ ಆಡಳಿತಾಧಿಕಾರಿಯನ್ನು ತಂದರು. ಲೂಟಿ ತಗ್ಗಿಸಲೆಂದೇ ಪಾಲಿಕೆಯನ್ನು ವಿಭಜಿಸಲೆತ್ನಿಸಿದರು. ಕಬಳಿಸಿದ ಕೆರೆ, ಪಾಲಿಕೆ ಸೊತ್ತುಗಳನ್ನು ನೆಲಗಳ್ಳರಿಂದ ವಶಪಡಿಸಿಕೊಳ್ಳಲೆತ್ನಿಸಿದರು. ಶತಗತಾಯ ಚುನಾವಣೆ ಮುಂದೂಡಲೆತ್ನಿಸಿ ಆದ ಹಾನಿಗೆ ಔಷಧಿ ಕೊಡುತ್ತಾ ಬಂದರು.

ಸರ್ಕಾರ, ಮುಖ್ಯಮಂತ್ರಿ, ಲೋಕಾಯುಕ್ತ ಭೂಕಬಳಿಕೆ ವಿರೋಧಿ ಹೋರಾಟಗಾರರು, ಬೆಂಗಳೂರಿನ ಪ್ರಜ್ಞಾವಂತರೆಲ್ಲರ ಆತಂಕವನ್ನೂ ಲೆಕ್ಕಿಸದೆ ಚುನಾವಣೆಯೊಂದಕ್ಕೇ ಹಠಹಿಡಿದು ಕೋರ್ಟ್ ಮೆಟ್ಟಿಲೇರಿದ್ದು ಬಿಜೆಪಿ. ಬೆಂಗಳೂರಿಗಾದ ಹಾನಿ ಮತ್ತದರ ಪರಿಹಾರಕ್ಕಿಂತಲೂ ಮತ್ತೆ ಪಾಲಿಕೆ ಹಿಡಿಯುವುದೊಂದೇ ಅದರ ಏಕಮಾತ್ರ ಉದ್ದೇಶವಾಗಿದ್ದಕ್ಕೂ ಕಾರಣವಿತ್ತು, ಅದು ಲೂಟಿ. ಈಗದು ಈಡೇರಿದೆ. ಶತಗತಾಯ ಚುನಾವಣೆಯನ್ನು ಮುಂದೂಡಿಯೇ ತೀರುತ್ತೇನೆಂದು ಹೆಣಗಾಡಿದ ಸರ್ಕಾರ ರಾಜ್ಯಪಾಲರ ತಂತ್ರದೆದುರು ಯಾಮಾರಿದೆ.

ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದಾಗಲೇ ಕಾಂಗ್ರೆಸ್ ನಾಯಕ ಹೆಚ್.ಎಂ. ರೇವಣ್ಣ ಹೇಳಿದ್ದು 'ಇಂಥವರ ಕೈಗೇನಾದರೂ ಪಾಲಿ[ಕೆ] ಸಿಕ್ಕಿತೆಂದರೆ ಅದರ ಅಳಿದುಳಿದ ಆಸ್ತಿಯೂ ಉಳಿಯೋದು ಕಷ್ಟ....' ಎಂದು. ಈಗ ಗೆದ್ದವರ ಪಟ್ಟಿಯಾದರೂ ಎಂಥಾದ್ದು?

ಬಿಜೆಪಿಯ ಸೇನಾನಿ ಆರ್. ಅಶೋಕ್ ಪ್ರತಿನಿಧಿಸುವ ಪದ್ಮನಾಭನಗರವನ್ನೇ ಲೆಕ್ಕ ಹಾಕುವುದಾದರೆ ಹೊಸಕೆರೆಹಳ್ಳಿ ವಾರ್ಡಿನಿಂದ ಗೆದ್ದ ರಾಜೇಶ್ವರಿ ಚೋಳರಾಜ್ ಬೇರೆ ಯಾರೂ ಅಲ್ಲ, ಈ[...] ಹಿಂದೆ ಇದೇ ಹೊಸಕೆರೆ ಹಳ್ಳಿಗೆ ಬಿಜೆಪಿ ಕೌನ್ಸಿಲರ್ [...] ಆಗಿದ್ದ ನಾರಾಯಣನ ಪಕ್ಕಾ ಚೇಲಾ. ಇದೀ ಪದ್ಮನಾಭನಗರದ ಜೀವಾಳದಂತಿದ್ದ ಹೊಸಕೆರೆಹಳ್ಳಿಯ [...] ಎಂಟೆಕರೆ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿದವನು ಮಾಜಿ ಬಿಜೆಪಿ ಕೌನ್ಸಿಲರ್ ನಾರಾಯಣ. ಆತನ ಕೆರೆ ಕಬಳಿಕೆಗೆ ಬಂಟನಂತಿದ್ದು ಕದ್ದ ಕೆರೆ ಭೂಮಿಗೆ ಗಿರಾಕಿಗಳನ್ನು ಹಿಡಿದು ತಂದು ಮುಂದಾಯಿಸುತ್ತಿದ್ದ ಚೋಳರಾಜನ ಪತ್ನಿಯನ್ನೇ ನಿಲ್[ಲಿಸಿ] ಗೆಲ್ಲಿಸಿಕೊಂಡಿದ್ದಾನೆ ಭೂಕಂಟಕ ನಾರಾಯಣ. ಕೆರೆಯ ಅಳಿದುಳಿದ ಭೂಮಿಯ ಮೇಲೆ ಕಣ್ಣಿಟ್ಟೇ ಪಾಲಿಕೆಯ ಅಧಿಕಾರ ಹಿಡಿಯುವ ನಾರಾಯಣನ ದುರ್ಬುದ್ಧಿಗೆ ಹೊಸಕೆರೆಹಳ್ಳಿ ವಾರ್ಡಿನ ಮತದಾರರು ಖರೀದಿಗೊಂಡಿದ್ದಾರೆ. ಅದೂ ಕೆರೆ ಕದ್ದ ದುಡ್ಡಿನಲ್ಲೇ.

ಕೆರೆ ಕಳ್ಳ ಆಂಜನಪ್ಪ

ಇದೇ ಪದ್ಮನಾಭನಗರದ ಕುಮಾರಸ್ವಾಮಿ ಲೇಔಟ್ ವಾರ್ಡಿನಿಂದ ಗೆದ್ದ ಎಲ್.ಶ್ರೀನಿವಾಸ್ ಈ ಹಿಂದೆ ಉಪಮೇಯರ್ ಆಗಿದ್ದಾತ. ಇವತ್ತು ಚಿಕ್ಕಲ್ಲಸಂದ್ರ ಕೆರೆಯ ಅವಶೇಷವೂ ಉಳಿಯದಂತೆ ದಾಖಲೆ ಸೃಷ್ಟಿಸಿ ಸೈಟು ಮಾಡಿ ಮಾರಿದ ಮೊದಲ ಆರೋಪಿಯಾದ ಶ್ರೀನಿವಾಸ್ ಕೆರೆ ಕದ್ದ ದುಡ್ಡಲ್ಲೇ ಭರ್ಜರಿ ಬಂಗಲೆಯೆಬ್ಬಿಸಿದ್ದಾನೆ. ಅದೇ ದುಡ್ಡು ಸುರಿ[ದು] ಉಪಮೇಯರ್ ಗಾದಿಗೇರಿದ್ದಾನೆ. ಈಗ ಪಾಲಿಕೆ ದೋಚಿದ ದುಡ್ಡು ಸುರಿದು ಮತ್ತೆ ಗೆದ್ದು ಬರುತ್ತಾ[ನೆ]. ನಿನ್ನೆ ಮೊನ್ನೆಯ ತನಕ ಈತ ಪ್ರತಿನಿಧಿಸುತ್ತಿದ್ದ ಪದ್ಮನಾಭನಗರಕ್ಕೆ ಈಗ ಗೆದ್ದು ಬಂದವಳು ಈತನ ಜೊತೆ ಚಿಕ್ಕಲ್ಲಸಂದ್ರ ಕೆರೆಗೆ ಗತಿ ಕಾಣಿಸಿದ ಆಂಜನ[ಪ್ಪನ] ಮಡದಿ ಶೋಭಾ!

ಮಹಿಳಾ ಮೀಸಲಾದ್ದರಿಂದ ಶ್ರೀನಿವಾಸ್ ಕುಮಾರಸ್ವಾಮಿ ಲೇಔಟಿಗೆ ವಲಸೆ ಹೋಗಿ ತಾನು ಪ್ರತಿನಿಧಿಸುತ್ತಿದ್ದ ಪದ್ಮನಾಭನಗರವನ್ನು ತನ್ನ ಭೂಕಂ[ಟಕ] ಸಹಚರ ಆಂಜನಪ್ಪನಿಗೆ ಬಿಟ್ಟುಕೊಟ್ಟಿದ್ದಾನೆ. ಶ್ರೀನಿವಾಸನೂ ಕೆರೆಕಳ್ಳ, ಆಂಜನಪ್ಪನೂ ಕೆರೆ ಕಂಟಕ[...] ಮೊನ್ನೆಯಷ್ಟೇ ಜಿಲ್ಲಾಧಿಕಾರಿ ಶಂಕರ್ ಪಡೆ ಚಿಕ್ಕಲ್ಲಸ[ಂದ್ರ...]












ಮುಸ್ಲಿಂ ಮೂಲಭೂತದ ಮೂರ್ಖಬುದ್ಧಿಗೆ ಕಾಂಗ್ರೆಸ್ ಬಲಿ

ಹಿಂದೂ ಕೋಮುವಾದದಷ್ಟೇ ಮುಸ್ಲಿಂ ಕೋಮುವಾದವೂ ಅಪಾಯಕಾರಿ ಆಗಿದ್ದು ಈ ಪಟ್ಟಿಗೆ ಸೇರಬಹುದಾದ ಎರಡು ಮುಖ್ಯ ಪಕ್ಷಗಳ ಪೈಕಿ ಒಂದು ಎಸ್‌ಡಿಪಿಐ ಮತ್ತೊಂದು ಎಐಎಂಐಎಂ.



ಎಸ್‌ಡಿಪಿಐ ಅರ್ಥಾತ್ ಸೋಷಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾದ ಅಭ್ಯರ್ಥಿ ಮುಜಾಹಿದ್ ಪಾಷಾ ಸದ್ಯ ಸಿದ್ದಾಪುರ ವಾರ್ಡಿನಿಂದ ಕಾಂಗ್ರೆಸ್ಸಿನ ಉದಯ್‌ಶಂಕರ್‌ನನ್ನು ಸೋಲಿಸಿ ಕೌನ್ಸಿಲರ್ ಪಟ್ಟ ಗಿಟ್ಟಿಸಿದರೆ ಆರು ವಾರ್ಡುಗಳಲ್ಲಿ ಎಸ್‌ಡಿಪಿಐ ಎರಡನೇ ಸ್ಥಾನ ಗಳಿಸಿದೆ. ಎಐಎಂಐಎಂ ಅಂದರೆ ಆಲ್ ಇಂಡಿಯಾ ಮಜ್ಲೀಸ್ ಎ ಇತ್ತೇಹಾದುಲ್ ಮುಸ್ಲಿಮೀನ್‌ನ ನಾಯಕ ಹೈದರಾಬಾದಿನ ಫೈರ್ ಬ್ರಾಂಡ್ ಅಸಾದುದ್ದೀನ್ ಓವೈಸಿ. ಒಂದು ವಾರ್ಡಿನಲ್ಲಿ ಈತನ ಪಾರ್ಟಿ ಎರಡನೇ ಸ್ಥಾನಕ್ಕೂ ಮೂರು ವಾರ್ಡುಗಳಲ್ಲಿ ಮೂರನೇ ಸ್ಥಾನಕ್ಕೂ ಪೈಪೋಟಿ ಕೊಟ್ಟ ಫಲವಾಗಿ ಕಾಂಗ್ರೆಸ್ ಪಾಲಾಗಬೇಕಿದ್ದ ಮುಸ್ಲಿಂ ಮತಗಳು ಕೈತಪ್ಪಿ ಹೋದವು.



ಓವೈಸಿಯ ಪಕ್ಷ ಮತ್ತು ಎಸ್‌ಡಿಪಿಐ ಸೇರಿ ಮುಸ್ಲಿಂ ಪ್ರಾಬಲ್ಯವಿದ್ದ ಒಟ್ಟು 27 ವಾರ್ಡುಗಳಲ್ಲಿ ಮುಸ್ಲಿಂ ಮತಬುಟ್ಟಿಗೆ ಕೈಹಾಕಿದ್ದು ಪರೋಕ್ಷವಾಗಿ ಬಿಜೆಪಿಗೆ ಲಾಭವಾಯಿತು. ಕಾಂಗ್ರೆಸ್ಸಿಗೆ ಬರಬೇಕಿದ್ದ ಮುಸ್ಲಿಂ ಮತಗಳು ಈ ಮುಸ್ಲಿಂ ಮೂಲಭೂತವಾದಿ ಪಾರ್ಟಿಗಳ ಪಾಲಾಗಿದ್ದೇ ಕಾಂಗ್ರೆಸ್ಸಿಗೆ ಮುಳುವಾಯಿತು. ಇಲ್ಲದೇ ಹೋಗಿದ್ದರೆ ಕಾಂಗ್ರೆಸ್ ಸಲೀಸಾಗಿ ನೂರರ ಗಡಿ ದಾಟಿ ಬಿಜೆಪಿ ಎಂಬತ್ತರ ಆಸುಪಾಸಿರುತ್ತಿತ್ತು. ಮುಸ್ಲಿಂ ಒಗ್ಗಟ್ಟಿನ ಮಂತ್ರ ಪಠಿಸುತ್ತಲೇ ಕಾಂಗ್ರೆಸ್ ಮತ ಕಿತ್ತ ಈ ಮೂಲಭೂತವಾದಿಗಳ ಮೂರ್ಖ ಸಾಹಸಕ್ಕೆ ಬಲಿಯಾಗಿದ್ದು ಮುಸ್ಲಿಂ ಹಿತಾಸಕ್ತಿಯೇ ಹೊರತು ಲಾಭವೇನಿದ್ದರೂ ಅವುಗಳದ್ದೇ ತಾತ್ವಿಕ ಶತ್ರು ಬಿಜೆಪಿಗಾಗಿತ್ತು!

ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ಮುಸ್ಲಿಂ ಹಿತಾಸಕ್ತಿಗೆ ಗುಂಡಿ ತೋಡಿದ ಈ ಪಾರ್ಟಿಗಳು ಪರೋಕ್ಷವಾಗಿ ಪಾಲಿಕೆಯನ್ನು ಬಿಜೆಪಿ ಬಾಯಿಗಿಡುವಲ್ಲಿ ನೆರವಾದವು.

...ಭೂಮಿಯ ಕಬಳಿಕೆದಾರರ ವಿರುದ್ಧ ಕಾರ್ಯಾಚರಣೆ ...ಚೂರುಪಾರು ಕೆರೆ ಭೂಮಿಯನ್ನಾದರೂ ...ಿದೆ. ಈಗ ಕೆರೆಕಳ್ಳನ ಪತ್ನಿಯೇ ಕೌನ್ಸಿಲರ್ ಆದ ...ಕ್ಕೆ ಅಳಿದುಳಿದ ಕೆರೆಭೂಮಿಗೂ ...ಲವಿಲ್ಲ.

...ದ್ಮನಾಭನಗರದ ಪಕ್ಕದ್ದೇ ಚಿಕ್ಕಲ್ಲಸಂದ್ರ. ಈ ...ಗ ಬಿಜೆಪಿಯಿಂದ ಗೆದ್ದವಳು ಸುಪ್ರಿಯಾ ...ೆ. ಈಕೆ ಇದೇ ವಾರ್ಡಿಗೆ ಈ ಹಿಂದೆ ಬಿಜೆಪಿ ...ರ್ ಆಗಿದ್ದ ವೆಂಕಟಸ್ವಾಮಿ ನಾಯ್ಡು ಎಂಬಾತನ ...ು. ಬಿಜೆಪಿ ನಾಯಕ ಆರ್. ಅಶೋಕ್ ...ಗಿರಿಯನ್ನೇ ರಾಜಕಾರಣವೆಂದೂ, ಕೆರೆಕಳ್ಳರ ...ಮನ್ನೇ ಜನಸೇವೆಯೆಂದೂ ಪರಿಭಾವಿಸುವ ...ಸ್ವಾಮಿ ನಾಯ್ಡು ಮೂಲತಃ ಆಂಧ್ರದ ಚಿತ್ತೂರು ... ಇಟ್ಟಮಡು ಕೆರೆ ಕಬಳಿಕೆದಾರರ ಜೊತೆ ಸೇರಿ ...ಅಳಿದುಳಿದ ಭೂಮಿಯನ್ನೂ ಮೋರಿ ಸಮೇತ ...ಣಿಸಿದ ಕೀರ್ತಿ ಈತನಿಗೇ ಸಲ್ಲಬೇಕು.

ಇಟ್ಟಮಡು ಕೆರೆ ಸ್ವಾಹಾ

...ಂದಹಾಗೆ ಇಟ್ಟಮಡು ಕೆರೆಗೊಂದು ...ಿಸಿದವನು ಈಗ ಕುಮಾರಸ್ವಾಮಿ ...ಿನಿಂದ ಗೆದ್ದ ಮಾಜಿ ಉಪಮೇಯರ್ ಎಲ್. ...ಸನ ಮಾವ ಪಾಪಣ್ಣ. ಹೆಸರೇ ಪಾಪಣ್ಣ. ಇನ್ನು ... ಹೇಸುವುದುಂಟೆ? ಮಾವ ಪಾಪಣ್ಣ ಕದ್ದ ...ಮಡು ಕೆರೆಯನ್ನು ಅಶೋಕ್ ಜೊತೆ ...ಂಡೇ ಸೈಟು ಮಾಡಿ ಮಾರಿದ ಎಲ್. ...ಸ್‌ನ ಹಾವಳಿಗೆ ಹೆದರಿಯೇ ಜನ ಕೋರ್ಟ್ ...ಏರಿದರು. 2012ರಲ್ಲಿ ಇಟ್ಟಮಡು ಕೆರೆಯ ...ದ ಬಹುಭಾಗವನ್ನು ಕೋರ್ಟು ಅರಣ್ಯ ...ರೆಗೆ ವಹಿಸಿತು. ಹೀಗೆ ಅರಣ್ಯ ಇಲಾಖೆಗೆ ... ಮೂರ್ನಾಲ್ಕು ಎಕರೆ ಕೆರೆಭೂಮಿಗೆ ...ಿಕೊಂಡಂತೆ ಮೋರಿಯೊಂದಿತ್ತು. ಮೋರಿ ... ಕೆರೆ ಭೂಮಿಯ ನಡುವೆ ರಾತ್ರೋರಾತ್ರಿ ...ಮ್ಮನ ಗುಡಿಯೊಂದನ್ನು ಪಾಪಣ್ಣನ ಗ್ಯಾಂಗ್ ...ತ್ತಿದ್ದರೆ ಅದಕ್ಕೆ ಕಾವಲಾಗಿ ನಿಂತವನು ಖದೀಮ ...ಸ್ವಾಮಿ.

...ಂಗಮ್ಮನ ದೇವಸ್ಥಾನದ ಹೆಸರಲ್ಲಿ ಇಟ್ಟಮಡು ...ಅರಣ್ಯ ಭೂಮಿಯ ನಾಲ್ಕೆಕರೆಯನ್ನು ಕಬಳಿಸಿದ ... ಗ್ಯಾಂಗ್ ಜೊತೆ ವೆಂಕಟಸ್ವಾಮಿ ನಾಯ್ಡುವೂ ...ೋಡಿಸಿ ಹೊಡೆದ ಕೊಳ್ಳೆ ಹಂಚಿಕೊಂಡ. ...ದ ದುಡ್ಡು ಚೆಲ್ಲಿ ಪಾಲಿಕೆಗೆ ಗೆದ್ದ. ಈಗ ವಾರ್ಡು ...ಳಾ ಮೀಸಲಾಯ್ತು ಎಂದು ತನ್ನ ಮಗಳನ್ನೇ ...ಿಸಿದ್ದಾನೆ. ಇನ್ನು ಇಟ್ಟಮಡು ಕೆರೆಯನ್ನು ಆ ...ರಷ್ಟೇ ಕಾಯಬೇಕು.

...ಾದೇ ಪದ್ಮನಾಭನಗರದ ಗಣೇಶ್ ಮಂದಿರ ...ಗೆ ಬಿಜೆಪಿಯಿಂದ ಗೆದ್ದ ಲಕ್ಷ್ಮೀ ಉಮೇಶ್ ...ಿ ಉಮೇಶನೆಂಬ ಎಲ್. ಶ್ರೀನಿವಾಸ್ ಬಂಟನ ಪತ್ನಿ. ಶ್ರೀನಿವಾಸ್ ಕೆರೆ ಕದ್ದು ಸೈಟು ಏಂಗಡಿಸಿದರೆ ಕಬ್ಬಾಳು ಉಮೇಶ ಅದಕ್ಕೆ ಗಿರಾಕಿಗಳನ್ನು ಹೊಂಚಿಕೊಡುವ ಬ್ರೋಕರಿಕೆ ಮಾಡಿಕೊಂಡಿದ್ದ. ಪದ್ಮನಾಭನಗರದ ಎಂಟು ವಾರ್ಡುಗಳ ಪೈಕಿ ಅನ್ವರ್ ಪಾಷಾ ಗೆದ್ದ ಬನಶಂಕರಿ ದೇವಸ್ಥಾನ ಬಿಟ್ಟರೆ ಮಿಕ್ಕ ಏಳೂ ವಾರ್ಡುಗಳಿಗೆ ಗೆದ್ದ ಅಶೋಕ್ ಅನುಯಾಯಿಗಳೆಲ್ಲ ಇಂಥದ್ದೇ ಸಂತತಿಗೆ ಸೇರಿದವರು. ಇಂಥವರ ಕೈಗೆ ಪಾಲಿಕೆ ಬಂತೆಂದರೆ ಬೆಂಗಳೂರಿನ ಗತಿ ಏನಾಗುತ್ತದೆಂಬುದಕ್ಕೆ ಇವತ್ತು ಪದ್ಮನಾಭ ನಗರದಲ್ಲಿ ಮೂತ್ರ ವಿಸರ್ಜನೆಗೂ ಜಾಗ ಉಳಿದಿಲ್ಲ, ಹೆಣ ಹೂಳುವುದಕ್ಕೂ ಸ್ಮಶಾನ ಉಳಿದಿಲ್ಲ!

ಜರಗನಹಳ್ಳಿ ಕೆರೆ ಮಾಯ

ಇದು ಕೇವಲ ಪದ್ಮನಾಭನಗರದ ಕೇಸರಿ ಪಿಡುಗಷ್ಟೇ ಅಲ್ಲ. ಬೆಂಗಳೂರು ದಕ್ಷಿಣ, ಕೃಷ್ಣರಾಜಪುರ, ದಾಸರಹಳ್ಳಿ, ಯಲಹಂಕ, ಬೊಮ್ಮನಹಳ್ಳಿ, ಹೆಬ್ಬಾಳ, ರಾಜರಾಜೇಶ್ವರಿ ನಗರ ಮುಂತಾದ ಕ್ಷೇತ್ರಗಳಿಂದ ಗೆದ್ದ ಬಿಜೆಪಿ ಕೌನ್ಸಿಲರ್‌ಗಳನೇಕರು ಇದೇ ಸಂಸ್ಕೃತಿಯ ವಾರಸುದಾರರೆ. ಈ ಪೈಕಿ ಉತ್ತರಹಳ್ಳಿ ವಾರ್ಡಿನಿಂದ ಗೆದ್ದ ಹನುಮಂತಯ್ಯ ಸರ್ಕಾರಿ ಭೂಮಿಗೆ ಬೇಲಿ ಸುತ್ತಿಯೇ ಕೋಟ್ಯಾಧೀಶನಾದ ಖದೀಮ. ಪಕ್ಕದ ಯಲಚೇನಹಳ್ಳಿಗೆ ಗೆದ್ದ ವಿ. ಬಾಲಕೃಷ್ಣ ಈ ಹಿಂದೆ ಜರಗನಹಳ್ಳಿಗೆ ಕೌನ್ಸಿಲರ್ ಆಗಿದ್ದ ಸುಗುಣಾ ಬಾಲಕೃಷ್ಣರ ಗಂಡ.

ಉತ್ತರಹಳ್ಳಿ ಪರಬಾಸ್ತು ಜಮೀನು ಲೂಟಿಯಲ್ಲಿ ಪತ್ನಿ, ಮಗನ ಹೆಸರಲ್ಲಿ ಸರ್ಕಾರಿ ಭೂಮಿ ನುಂಗಿ ಕುಬೇರನಾದ ಬಾಲಕೃಷ್ಣ ತನ್ನ ಪತ್ನಿಯನ್ನು ಜರಗನಹಳ್ಳಿಯಿಂದ ಗೆಲ್ಲಿಸಿದ ಮೇಲೆ ಜರಗನಹಳ್ಳಿ ಕೆರೆಗೇ ಗತಿ ಕಾಣಿಸಿಬಿಟ್ಟ. ಕಾಲಿಟ್ಟಲೆಲ್ಲಾ ಕೆರೆ ಭೂಮಿ, ಅರಣ್ಯ ಭೂಮಿ, ಸರ್ಕಾರಿ ಭೂಮಿಗೆ ನಾಲಿಗೆ ಚಾಚುವ ಈತ ಈಗ ಯಲಚೇನಹಳ್ಳಿಗೊಂದು ಗತಿ ಕಾಣಿಸದೇ ಬಿಡುತ್ತಾನಾ?

ಬೊಮ್ಮನಹಳ್ಳಿಯ ಬಿಳೇಕಹಳ್ಳಿ ವಾರ್ಡಿಗೆ ಗೆದ್ದ ಕೆ. ನಾರಾಯಣರಾಜು ಕೇಳಿಕೇಳಿ ಸಾರಕ್ಕಿ ಕೆರೆ ಕಳ್ಳ. ಸಾರಕ್ಕಿ ಕೆರೆಯಂಗಳಕ್ಕೆ ನಕಲಿ ದಾಖಲೆ ಸೃಷ್ಟಿಸಿ ಈತ ಡಾಲರ್ಸ್ ಕಾಲೋನಿಯನ್ನೆಬ್ಬಿಸಿದ. ಕೆರೆ ದಂಡೆಯ ಐಷಾರಾಮಿ ಬಡಾವಣೆಯೆಂದು ನಂಬಿ ಮಾಜಿ ಮಂತ್ರಿ, ಸಿಂಧ್ಯನಿಂದ ಹಿಡಿದು ದೇವೇಗೌಡರ ಸಂಬಂಧಿಗಳ ತನಕ ಕೋಟಿ ಕೋಟಿ ಸುರಿದು ಸೈಟು ಕೊಂಡಿದ್ದೇ ಕೊಂಡಿದ್ದು. ಈಗ ನೋಡಿದರೆ ಇಡೀ ಡಾಲರ್ಸ್ ಕಾಲೋನಿಯೇ ಗೋಲ್‌ಮಾಲ್. ಕದ್ದ ಕೆರೆ ದುಡ್ಡಲ್ಲೇ ನಾರಾಯಣ ರಾಜು 3.5 ಕೋಟಿಯ ಬಂಗಲೆಯೆಬ್ಬಿಸಿದ್ದಾನೆ. ಕಲ್ಯಾಣಿ ಮೋಟಾರ್ಸ್ ಎಂಬ ಮತ್ತೊಂದು ಕಂಪೆನಿ ಹುಟ್ಟು ಹಾಕಿ ಸಾವಿರ ಕೋಟಿಯ ಸರದಾರನಾಗಿ ತಲೆ ಎತ್ತಿದ್ದಾನೆ. ಸಾರಕ್ಕಿ ಕೆರೆ ಕಬಳಿಕೆ ಕೇಸಲ್ಲಿ ತಾನು ಇವತ್ತಲ್ಲ ನಾಳೆ ಜೈಲು ಪಾಲಾಗುವುದು ಗ್ಯಾರಂಟಿಯೆನ್ನಿಸಿ ಈಗ ಬಿಜೆಪಿ ಕೌನ್ಸಿಲರ್ ಗೆಟಪ್ಪಿಗೆ ಬಂದಿದ್ದಾನೆ. ಯಾವತ್ತು ಜೈಲುಪಾಲಾಗುತ್ತಾನೋ ಗೊತ್ತಿಲ್ಲ.

ಲ್ಯಾಂಡ್ ಗ್ರ್ಯಾಬರ್ಸ್ ಡರ್ಟೀ...!

ಜರಗನಹಳ್ಳಿ ವಾರ್ಡಿನಿಂದ ಗೆದ್ದ ಬಿ.ಎಂ. ಶೋಭಾಳ ಗಂಡನ ಹೆಸರೇ ಬಾರ್ ಮುನಿರಾಮ. ನಾಲ್ಕೈದು ಬಾರ್‌ಗಳನ್ನಿಟ್ಟಿದ್ದಾನೆ. ಥರ್ಡ್ ಲಿಕ್ಕರ್ ದಂಧೆಯ ಜೊತೆಜೊತೆಗೇ ಕಂಡೋರ ಸ್ವೊತ್ತಿಗೆ ಕಾಂಪೌಂಡು ಹಾಕುವ ಖಯಾಲಿಯಿದೆ. ಹನುಮಂತನಗರದಿಂದ ಗೆದ್ದ ಕೆಂಪೇಗೌಡನದ್ದೂ ಇದೇ ದಂಧೆ. ಒಂದೇ ಸೈಟನ್ನು ಎಷ್ಟು ಜನಕ್ಕೆ ಬೇಕಾದರೂ ಮಾರಬಲ್ಲ ಪ್ರಳಯಾಂತಕ. ಬ್ಯಾಟರಾಯನಪುರದ ದೊಡ್ಡಬೊಮ್ಮಸಂದ್ರ ವಾರ್ಡಿಗೆ ಗೆದ್ದ ಜಯಲಕ್ಷ್ಮಿಯ ಪತಿ ಪಿಳ್ಳಪ್ಪನ ಮನೆ ಮುಂದೆ ದಿನದ ಯಾವ ಗಳಿಗೆಯಲ್ಲಾದರೂ ಡಜನ್ನುಗಟ್ಟಲೇ 'ನಾಮ' ಧಾರಿಗಳಿರುತ್ತಾರೆ. ಒಂದೇ ಸೈಟನ್ನು ಬೇಕಾಬಿಟ್ಟಿ ಗಿರಾಕಿಗಳಿಗೆ ತಗುಲಿ ಹಾಕುವ ಪಿಳ್ಳಪ್ಪನಿಂದ ವಂಚನೆಗೀಡಾದವರ ಪಟ್ಟಿ ದೊಡ್ಡ ಬೊಮ್ಮಸಂದ್ರದ ಮತದಾರರ ಪಟ್ಟಿಯಷ್ಟೇ ಅಗಾಧ. ಬೊಮ್ಮನಹಳ್ಳಿಯ ಅರಕೆರೆ ವಾರ್ಡಿನಿಂದ ಗೆದ್ದ ಆರ್. ಭಾಗ್ಯಲಕ್ಷ್ಮಿ ಹೆಸರಿಗಷ್ಟೆ. ಈಕೆಯ ಗಂಡ ಮುರಳಿ ಕಳೆದ ಬಾರಿ ಇದೇ ವಾರ್ಡಿಗೆ ಬಿಜೆಪಿಯಿಂದ ಗೆದ್ದಿದ್ದ ಪುರುಷೋತ್ತಮ್ ರವಿಯ ಖಾಸಾ ತಮ್ಮ!

ಎಲ್ಲೆಲ್ಲಿ ಸರ್ಕಾರಿ ಭೂಮಿಯಿದೆಯೋ ಅದಕ್ಕೆ ಕಳ್ಳ ದಾಖಲೆ ಸೃಷ್ಟಿಸುವುದನ್ನೇ ಕುಲಕಸುಬಾಗಿಸಿಕೊಂಡ ಪುರುಷೋತ್ತಮ್ ಮತ್ತು ಮುರಳಿ ಬೆಳ್ಳಂಬೆಳಗ್ಗೆ ಐದು ಗಂಟೆಗೂ ಜನರ ಕೈಗೆ ಸಿಗುವುದು ಕಷ್ಟ. ಅದೇನು ಮಾಡುತ್ತಾರೆಂದು ಕೆದಕ ಹೊರಟರೆ ಅಣ್ಣ ತಮ್ಮ ಸೇರಿಕೊಂಡು ಅಪಾರ್ಟ್‌ಮೆಂಟ್‌ಗಳಿಂದ ಎತ್ತುವಳಿ ಮಾಡುವ ದೃಶ್ಯವೇ ಕಣ್ಣಿಗೆ ರಾಚುತ್ತದೆ. ವಿಜಿನಾಪುರದ ಬಂಡೆರಾಜು, ಹೆಚ್‌ಎಸ್‌ಆರ್ ಲೇಔಟಿನ ಗುರುಮೂರ್ತಿ ರೆಡ್ಡಿ, ಪುಟ್ಟೇನಹಳ್ಳಿಯಿಂದ ಗೆದ್ದ ಪ್ರಭಾವತಿಯ ಪತಿ ಜಲ್ಲಿ ರಮೇಶ್, ಬೊಮ್ಮನಹಳ್ಳಿಯ ರಾಮಮೋಹನ್ ರಾಜು, ಗೊಟ್ಟಿಗೆರೆಯ ಲಲಿತಾರ ಪತಿ ನಾರಾಯಣ, ಕೋಣನಕುಂಟೆಯ ಶಶಿರೇಖಾಳ ಪತಿ ಜಯರಾಮ್, ಅಂಜನಾಪುರದ ಸೋಮಶೇಖರ್- ಹೀಗೆ ಗೆದ್ದ ಬಿಜೆಪಿಯ ಬಹುತೇಕ ಕೌನ್ಸಿಲರ್‌ಗಳು ಅವರ ಗಂಡಂದಿರ ಹಿನ್ನೆಲೆ, ಜಾತಕ ಕೆದಕಹೊರಟರೆ ಬೆಂಗಳೂರು ಸುತ್ತಮುತ್ತಲ ಒಂದಲ್ಲ ಒಂದು ಕೆರೆಕುಂಟೆ, ಸಾರ್ವಜನಿಕ ಸೊತ್ತಿನ ದುರಂತಗಳೇ ತೆರೆದುಕೊಳ್ಳುತ್ತವೆ. ಒಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರು ಸೆರಗಿನ ಒಂದೊಂದೇ ಕೆರೆಯನ್ನಾಯ್ದು ನೆಲಗಳ್ಳರಿಂದ ಮುಕ್ತಿ ಕಾಣಿಸುತ್ತಿದ್ದರೆ ಮತ್ತೊಂದೆಡೆ ಬಿಜೆಪಿ ಇದೇ ಕೆರೆಕಳ್ಳರ ಮೂಲಕ ಪಾಲಿಕೆಯನ್ನಾಕ್ರಮಿಸುತ್ತಿದೆ.

ವಿಕಟವೋ, ದುರಂತವೋ ಬೆಂಗಳೂರಿನ ಸೋಕಾಲ್ಡ್ 'ಪ್ರಬುದ್ಧ' ಮತದಾರರು ಬಿಜೆಪಿಗೆ ಪಾಲಿಕೆಯನ್ನೊಪ್ಪಿಸುವ ಮೂಲಕ ಕೇವಲ ಕೆರೆಗಳ ಮರಣ ಶಾಸನವನ್ನಷ್ಟೇ ಅಲ್ಲ, ತಮ್ಮದೇ ಊರಿನ ಅವನತಿಗೂ ಆಶೀರ್ವಾದ ಮಾಡಿದ್ದಾರೆ.

■ ರಾ. ಸೋಮನಾಥ್

ದುರಂತ ನಾಯಕ ನರೇಂದ್ರಬಾಬು

ಈ ಸಲದ ಪಾಲಿಕೆ ಫಲಿತಾಂಶ ತಂದ ದುರಂತಗಳ ಪೈಕಿ ಅನೇಕರನ್ನು ಕಾಡಿದ್ದು ಮಹಾಲಕ್ಷ್ಮೀ ಲೇಔಟ್ ಮಾಜಿ ಶಾಸಕ ನೆ.ಲ. ನರೇಂದ್ರ ಬಾಬುವಿಗಾದ ಮುಖಭಂಗ.


ನೆ.ಲ. ನರೇಂದ್ರಬಾಬು


ಇದ್ದ ಎಮ್ಮೆಲ್ಲೇಗಿರಿಯನ್ನೂ ಜೆಡಿಎಸ್‌ನ ಗೋಪಾಲಯ್ಯ ಕಿತ್ತುಕೊಂಡ. ತಾನು ಪ್ರತಿನಿಧಿಸುತ್ತಿದ್ದ ನಾಗಪುರ ವಾರ್ಡಿಗೆ ತಮ್ಮ ರವಿಶಂಕರ್‌ನನ್ನು ನಿಲ್ಲಿಸಿ ಗೆಲ್ಲಿಸಹೊರಟರೆ ಅದಕ್ಕೆ ಮಾಜಿ ಉಪಮೇಯರ್ ಹರೀಶ್ ಅಡ್ಡಗಾಲಿಟ್ಟ. ಅದೇ ಕೊರಗಿಗೆ ಬಿದ್ದು ರವಿ ಹಾರ್ಟ್ ಅಟ್ಯಾಕ್ಕಾಗಿ ಸತ್ತ. ಬಾಬು ತಾಕತ್ತಿನ ಮೂಲವಾಗಿದ್ದ ರವಿಯೇ ದುರಂತ ಸಾವಿಗೀಡಾದ ಮೇಲೆ ಬಾಬು ಪಾಲಿನ ಅದೃಷ್ಟದ ಅಕೌಂಟೇ ಬರಿದಾಗಿ ಹೋಗಿತ್ತು.

ಹಾಗಂತ ಬಾಬು ಧೃತಿಗೆಡಲಿಲ್ಲ. ಹುಟ್ಟು ಹೋರಾಟಗಾರನ ಧೈರ್ಯವಿತ್ತಲ್ಲ. ನಾಗಪುರ ವಾರ್ಡಿನ ಜನ ತನ್ನ ಕೈಬಿಡಲಾರರು ಎಂದೇ ಕೊನೇ ತಮ್ಮ ನೆ.ಲ. ಮಹೇಶನನ್ನು ಕಣಕ್ಕಿಳಿಸಿದರು. ಹೇಗೂ ರವಿ ದುರಂತದ ಸಿಂಪಥಿಗಾದರೂ ಜನ ಓಟು ಕೊಡುತ್ತಾರೆಂಬ ನಂಬಿಕೆಯಿತ್ತಲ್ಲ. ಇನ್ನಿಲ್ಲದಂತೆ ನಾಗಪುರ ವಾರ್ಡಿನಲ್ಲಿ ಹೆಣಗಾಡಿದ್ದಾಯ್ತು. ದುರಂತ ಈ ಬಾರಿ ಭದ್ರೇಗೌಡನ ರೂಪ ತಾಳಿತ್ತು. ಮಾಜಿ ಉಪಮೇಯರ್ ಬಿಜೆಪಿಯ ಹರೀಶ್ ಮತ್ತು ನೆ.ಲ. ಮಹೇಶ್‌ರನ್ನು ಹಿಂದಿಕ್ಕಿದ ಜೆಡಿಎಸ್‌ನ ಭದ್ರೇಗೌಡರ ಒಕ್ಕಲಿಗ ಮಂತ್ರ ಸದ್ದಿಲ್ಲದೇ ಕಾರ್ಯ ಸಾಧಿಸಿತ್ತು.


ಎಸ್. ಹರೀಶ್

ಪಾಪ ನೆ.ಲ. ಮಹೇಶ್‌ಗೆ ಮೂರನೇ ಸ್ಥಾನ!

ಸೋತ ಕೊರಗಲ್ಲೇ ದುರಂತ ಸಾವು ಕಂಡ ರವಿಯ ಆತ್ಮ ಅದ್ಯಾವ ಪರಿ ನರಳುವುದೋ, ಹೆಗಲಿಗೇರಿದ ಅಷ್ಟಮ ಶನಿಯಿಂದ ಮುಕ್ತಿಯೆಂತೋ ಯಾರು ಬಲ್ಲವರು?













ಗುರುಮೂರ್ತಿ ರೆಡ್ಡಿ






ಸಾರಕ್ಕಿ ಕೆರೆ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಸಾಮಾಜಿಕ ಜಾಲತಾಣಗಳು ವ್ಯಾಪಕಗೊಂಡಂತೆ ಕೋಮುಪ್ರಚೋದಕ ಕಿತಾಪತಿಯ ಅವತಾರಗಳೂ ವಿಸ್ತಾರಗೊಳ್ಳುತ್ತಿವೆ. ಇತ್ತೀಚೆಗ ಮೊಬೈಲ್‌ಗಳ ರೂಪದಲ್ಲಿ ಅಂತರ್ಜಾಲವೇ ಅಂಗೈಗೆ ಬಂದಮೇಲಂತು ಕೋಮುವಾದಿಗಳ ಹಾವಳಿ ಹೇಳತೀರದು. ಮುಗ್ಧ ಮನಸ್ಸುಗಳ ಬಹುಬೇಗ ನಂಬಿಬಿಡಬಹುದಾದಂತ ಸುಳ್ಳುಗಳನ್ನು ರಸವತ್ತಾಗಿ ವೈಯ್ಯಾರಿಕರಿಸಿ, ಜನರ ತಲೆಗಳಿಗೆ ತುಂಬುತ್ತಾ ಶಾಂತಿ ಕದಡುವಂತ ಪ್ರಯತ್ನಗಳು ಆತಂಕಕಾರಿಯಾಗಿ ದಟ್ಟಗೊಳ್ಳುತ್ತಿವೆ. ಅರೆಘಳಿಗೆ ಸಂಯಮದಿಂದ ಆಲೋಚಿಸಿದರೆ ಅಂತಹ ಸಂದೇಶದೊಳಗಿರುವ ವಾಸ್ತವತೆ ಮತ್ತು ವಂಚಕ ಉತ್ಪ್ರೇಕ್ಷೆ ಅರ್ಥವಾಗುತ್ತದೆ. ಆದರೆ ಜನರ ಮನಸ್ಸುಗಳಲ್ಲಿ ವೈಚಾರಿಕ ಆಲೋಚನೆಗಳು ರೂಪುಗೊಳ್ಳುವುದಕ್ಕೂ ಅವಕಾಶಕೊಡದೆ ಅವರ ಮೇಲೆ ದಾಳಿ ಮಾಡಲಾಗುತ್ತಿದೆ. ಈ ಥರದ ಸಂದೇಶಗಳನ್ನು 'ಪ್ರಜ್ಞಾವಂತ ನಾಗರಿಕ' ಸಮೂಹ ತುಂಬಾ ಸುಲಭವಾಗಿ ನಿರ್ಲಕ್ಷಿಸಿಬಿಡಬಹುದು; ಆದರೆ, ಅವು ಮತ್ತಷ್ಟೂ ಜನರಿಗೆ ತಮ್ಮ ಸೋಂಕು ತಗುಲಿಸಲು ಅಂತವರು ಪರೋಕ್ಷ ಪಾಲುದಾರ ಆದಂತಾಗುತ್ತದೆ. ಹಾಗಾಗಿ ವ್ಯಾಟ್ಸಪ್, ಫೇಸ್‌ಬುಕ್‌ನಂತಹ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಕೋಮುದ್ವೇಷದ ಸಂದೇಶಗಳ ದುರುದ್ದೇಶವನ್ನು ಮತ್ತು ಅದರ ಹಿಂದಿನ ಸತ್ಯಾಸತ್ಯತೆಯನ್ನು ಬಿಚ್ಚಿಡುವ ಪ್ರಯತ್ನಗಳ ಸರಣಿ ಇಲ್ಲಿದೆ.

■ ಗಿರೀಶ್ ತಾಳಿಕಟ್ಟೆ

ಭಗವದ್ಗೀತೆ ಶ್ರೇಷ್ಠತೆ ಮತ್ತು ಇಂಡೋನೇಷಿಯಾದ ವೈಚಿತ್ರ

1. ಅಮೆರಿಕಾದ ನ್ಯೂಜೆರ್ಸಿಯಲ್ಲಿರುವ ಸೇಟನ್ ವಿವಿಯಲ್ಲಿ ಭಗವದ್ಗೀತೆಯನ್ನು ವಿದ್ಯಾರ್ಥಿಗಳು ಓದಲೇಬೇಕಿದೆ.

(ಆದರೆ ಭಾರತೀಯರಾದ ನಮ್ಮಲ್ಲಿ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಮಾಡಹೊರಟರೆ ಬುದ್ಧಿಜೀವಿಗಳು ಊಳಿಡುತ್ತಾರೆ. ಭಗವದ್ಗೀತೆಯನ್ನು ಸುಡಲು ಮುಂದಾಗುತ್ತಾರೆ)

ಸತ್ಯಾಂಶ: ಕೇವಲ ಭಗವದ್ಗೀತೆಯನ್ನು ಮಾತ್ರವಲ್ಲ ಬೈಬಲ್, ಖುರಾನ್, ಬುದ್ಧಸೂತ್ರಗಳನ್ನೂ ತನ್ನ ವಿದ್ಯಾರ್ಥಿಗಳು ಓದಬೇಕೆಂಬ ಕಟ್ಟುಪಾಡನ್ನು ನ್ಯೂಜೆರ್ಸಿಯ ಸೇಟನ್‌ಹಾಲ್ ಯೂನಿವರ್ಸಿಟಿ ಮಾಡಿಟ್ಟುಕೊಂಡಿದೆ. ಹೀಗೆ ಧಾರ್ಮಿಕ ಗ್ರಂಥಗಳ ಅಧ್ಯಯನವನ್ನು ಕಡ್ಡಾಯ ಮಾಡಲಾಗಿರುವುದು ಆಧ್ಯಾತ್ಮಿಕ ವಿದ್ಯಾರ್ಥಿಗಳಿಗಲ್ಲ; ಬಿಸಿನೆಸ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಸ್ಟೂಡೆಂಟ್‌ಗಳಿಗೆ! ರೋಮನ್ ಕೆಥೋಲಿಕ್ ಹಿನ್ನೆಲೆಯ ಈ ಶಿಕ್ಷಣ ಸಂಸ್ಥೆ ಬೇರೆ ಧರ್ಮಗ್ರಂಥಗಳ ಅಧ್ಯಯನವನ್ನು, ಅದೂ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಂತಹ ವ್ಯಾವಹಾರಿಕ ವಿದ್ಯಾರ್ಥಿಗಳಿಗೇಕೆ ಕಡ್ಡಾಯಗೊಳಿಸಿದೆ ಅಂತ ಆಲೋಚಿಸಿದಾಗ ನಮಗೆ ಸತ್ಯದ ಮತ್ತೊಂದು ಮಗ್ಗುಲು ಅರ್ಥವಾಗುತ್ತದೆ. ಜಾಗತೀಕರಣದ ಈ ಹೊತ್ತಿನಲ್ಲಿ ವೈವಿಧ್ಯಮಯ ಭೌಗೋಳಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳಿಗೆ ಇಂದಿನ ಪೀಳಿಗೆ ತೆರೆದುಕೊಳ್ಳಬೇಕಿದೆ. ಅದರಲ್ಲೂ ಕಾರ್ಪೋರೇಟ್ ವಲಯಗಳಲ್ಲಿ ತೂರಿಕೊಳ್ಳುವ ಮ್ಯಾನೇಜ್‌ಮೆಂಟ್ ಕ್ಷೇತ್ರದವರಿಗೆ ಈ ಸವಾಲು ಸಹಜವಾಗಿಯೇ ಬಾಧಿಸುತ್ತದೆ. ಜಗತ್ತಿನ ಸರಿಸುಮಾರು ಸಮಗ್ರ ಆರ್ಥಿಕತೆಯ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತನ್ನ ಹಿಡಿತ ಸಾಧಿಸಿಕೊಳ್ಳುವತ್ತ ಹಾದಿ ಸವೆಸುತ್ತಿರುವ ಅಮೆರಿಕಾಗೆ ಈ ಸವಾಲುಗಳನ್ನು ಮೀರಿ ನಿಲ್ಲುವ ಪೀಳಿಗೆಯ ಅನಿವಾರ್ಯತೆ ಇರುವುದನ್ನು ಸೇಟನ್ ವಿವಿ ಮನಗಂಡಿತ್ತು, ಧಾರ್ಮಿಕ ಸೂಕ್ಷ್ಮತೆಗಳು ವಿದ್ಯಾರ್ಥಿಗಳಲ್ಲಿ ಅಂತಹ ಮನೋಬಲ ತುಂಬಬಲ್ಲವು ಎಂಬ ನಿರ್ಧಾರಕ್ಕೆ ಬಂದ ರೋಮನ್ ಕೆಥೋಲಿಕ್ ಆಡಳಿತ ಮಂಡಳಿ ಬೈಬಲ್ ಅಧ್ಯಯನವನ್ನು ಕಡ್ಡಾಯಗೊಳಿಸುವ ಹಾದಿಯಲ್ಲಿತ್ತು. ಅದೇವೇಳೆಗೆ ಪಠ್ಯಸಾಮಗ್ರಿ ಅಭಿವೃದ್ಧಿ ಕೋರ್ ಕಮಿಟಿಯ ಸದಸ್ಯನಾಗಿದ್ದ ಭಾರತೀಯ ಮೂಲದ ಎ.ಡಿ. ಅಮರ್ ಎಂಬ ರಾಜ್ಯನೀತಿ ಪ್ರೊಫೆಸರ್ ಆಡಳಿತ ಮಂಡಳಿಗೆ ಸಲಹೆಯೊಂದನ್ನು ಕೊಟ್ಟಿದ್ದ.



ವಿದ್ಯಾರ್ಥಿಗಳಲ್ಲಿ ಚಿರಂತನತೆಯ ಪ್ರಶ್ನೆಗಳಿಗೆ ಉತ್ತರಗಳನ್ನು ದೃಢಗೊಳಿಸಬೇಕೆಂದರೆ ಬೈಬಲ್‌ಗಿಂತ ಭಗವದ್ಗೀತೆ ಉತ್ತಮ ಎಂಬುದು ಅವನ ವಾದವಾಗಿತ್ತು, ಆತನ ಸ್ವಧರ್ಮ ಸಲಹೆ ಆಡಳಿತ ಮಂಡಳಿಗೆ ಇಷ್ಟವಾಗದೇ ಹೋದರೂ, ಹೊಸ ಆಲೋಚನೆಯೊಂದನ್ನು ಅವರಲ್ಲಿ ಹುಟ್ಟುಹಾಕಿತ್ತು, ಕಾರ್ಪೋರೇಟ್ ವಲಯ ವಿಶ್ವವ್ಯಾಪಿ ಪಸರಿಸಿಕೊಳ್ಳುತ್ತಿರುವುದರಿಂದ ವೈವಿಧ್ಯಮಯದ ನಾಗರಿಕತೆಗಳ, ಸಂಸ್ಕೃತಿಗಳ ಅರಿವು ವಿದ್ಯಾರ್ಥಿಗಳಿಗೆ ಮೂಡಬೇಕೆಂದರೆ, ಎಲ್ಲಾ ಧಾರ್ಮಿಕ ಗ್ರಂಥಗಳ ಸಂಕ್ಷಿಪ್ತ ಅಧ್ಯಯನ ನೆರವಾಗಲಿದೆ ಎಂಬ ತೀರ್ಮಾನ ಆಡಳಿತ ಮಂಡಳಿಯಲ್ಲಿ ಗಟ್ಟಿಗೊಂಡಿತ್ತು, ಪರಿಣಾಮವಾಗಿ ಬೈಬಲ್, ಖುರಾನ್, ಬುದ್ಧಸೂತ್ರ, ಗ್ರೀಕ್‌ತತ್ವಶಾಸ್ತ್ರ ಗ್ರಂಥಗಳಂತೆಯೇ ಭಗವದ್ಗೀತೆಯ ಮೇಲ್ಪ್ರ ಪರಿಚಯದ ಅಧ್ಯಯನದ ಆಯ್ಕೆಯನ್ನು ವಿವಿ ರೂಪಿಸಿಕೊಂಡಿದೆ. ಧಾರ್ಮಿಕ ಗ್ರಂಥಗಳ ಈ ಅನೌಪಚಾರಿಕ ಅಧ್ಯಯನವನ್ನು ಅದು 'ದಿ ಜರ್ನಿ ಆಫ್ ಟ್ರಾನ್ಸ್‌ಫರ್ಮೇಷನ್' ಎಂದು ಕರೆದಿದೆ. ಇಲ್ಲಿ ತನ್ನ ಅಗತ್ಯ ಮತ್ತು ಅನಿವಾರ್ಯತೆಗೆ ತಕ್ಕಂತೆ ಮಿಕ್ಕೆಲ್ಲ ಧರ್ಮಗ್ರಂಥಗಳ ಅಧ್ಯಯನದಂತೆ ಭಗವದ್ಗೀತೆಯ ಅಧ್ಯಯನಕ್ಕೂ ಅವಕಾಶ ನೀಡಲಾಗಿದೆಯೇ ಹೊರತು ಭಗವದ್ಗೀತೆಯ ಉತ್ಕೃಷ್ಟತೆಯನ್ನು ಅಧಿಕೃತಗೊಳಿಸುವುದಕ್ಕಲ್ಲ, ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾರ 'ಬಹುತ್ವ ಅಮೆರಿಕಾ' (ಅಮೆರಿಕಾದಲ್ಲಿ ಕ್ರಿಶ್ಚಿಯನ್ನರಲ್ಲದೆ ಮುಸ್ಲಿಮರು, ಹಿಂದೂಗಳು, ಸಿಖ್ಖರು, ಜ್ಯೂಗಳು ಗಣನೀಯ ಸಂಖ್ಯೆಯಲ್ಲಿ ಹೆಚ್ಚಾಗುತ್ತಿರುವ ಕಾರಣಕ್ಕೆ) ಎಂಬ ವ್ಯಾವಹಾರಿಕ ಪರಿಕಲ್ಪನೆಗೆ ಪೂರಕವಾಗಿ ಸೇಟನ್ ವಿವಿ ವರ್ತಿಸುತ್ತಿದೆ ಅಷ್ಟೆ.

ಇನ್ನು ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥವಾಗಿಸಬೇಕೆನ್ನುವ ವಿಚಾರವೇ ಭಾರತದಂತಹ ಜಾತ್ಯತೀತ ದೇಶಕ್ಕೆ ಅಸಂಬದ್ಧವಾದುದು. ಏಕೆಂದರೆ, ಭಗವದ್ಗೀತೆಯ ಶ್ರೇಷ್ಠತೆಯ ಬಗ್ಗೆ ಹಿಂದುತ್ವವಾದಿಗಳು ಏನೇ ಫರಾಕು ಹಾಕಿಕೊಂಡರು ಅದು ಒಂದು ಧರ್ಮಕ್ಕೆ (ಹಿಂದು, ಒಂದು ಧರ್ಮವೇ ಎನ್ನುವುದರ ಬಗ್ಗೆಯೇ ಚರ್ಚೆ ನಡೆಯುತ್ತಿವೆ) ಮಾತ್ರವೇ ಸೀಮಿತವಾದ ಧರ್ಮಗ್ರಂಥ ಎನ್ನುವುದಂತೂ ವಾಸ್ತವ. ತನ್ನ ಸಂವಿಧಾನದಲ್ಲೇ ಉಲ್ಲೇಖಿಸಿಕೊಂಡಿರುವಂತೆ ಭಾರತ ಜಾತ್ಯತೀತ ನೆಲೆಗಟ್ಟಿನ ಮೇಲೆ ಸೌಹಾರ್ದತೆಯ ಒಕ್ಕೂಟವಾಗಿ ರೂಪುಗೊಂಡಿದೆ. ಇಲ್ಲಿ ಯಾವುದೇ ಒಂದು ನಿರ್ದಿಷ್ಟ ಧರ್ಮದ ಉನ್ನತೀಕರಣ ಖಂಡಿತವಾಗಿಯೂ ಸಲ್ಲಕೂಡದು. ಈ ಜವಾಬ್ದಾರಿಯುತ ದೃಷ್ಟಿಕೋನದಿಂದ ನೋಡಿದಾಗ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್‌ರ ಇಂತಹ ಅಭಿಪ್ರಾಯವನ್ನು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಕೂಡಾ ಆಕ್ಷೇಪಿಸಲೇಬೇಕಾಗುತ್ತದೆ. ಶ್ರೇಣೀಕೃತ ವರ್ಗ ಸಮಾಜದ ದಟ್ಟ ಛಾಯೆ ಇದ್ದಂತ ಕಾಲಘಟ್ಟದ ಭಗವದ್ಗೀತೆಯ ಕುರಿತು ಇಂದಿನ ಪ್ರಜ್ಞಾವಂತ ಜನಸಮೂಹಕ್ಕೆ ಕೆಲವು ಆಕ್ಷೇಪಣೆಗಳು, ಗೊಂದಲಗಳು, ಭಿನ್ನಾಭಿಪ್ರಾಯಗಳು ಇರುವುದು ತುಂಬಾ ಸಹಜ. ಪ್ರಶ್ನಿಸದೆ ಯಾವುದನ್ನೂ ಒಪ್ಪಿಕೊಳ್ಳಬೇಡ ಎಂಬ ವೈಜ್ಞಾನಿಕ ಮನಸ್ಥಿತಿಯ ಈ ಸಂದರ್ಭದಲ್ಲಿ ಕೇವಲ ಅದರ ಪುರಾತತ್ವದ ಕಾರಣಕ್ಕೆ ದಾಸನಾಗುವುದು ಸಲ್ಲದು ಎಂಬುದಷ್ಟೇ ಪ್ರಗತಿಪರರ ಕಾಳಜಿ. ಈ ವಿಚಾರದಲ್ಲಿ ಸನಾತನವಾದಿಗಳು ಭಗವದ್ಗೀತೆಯ ಅಖಂಡತೆ ಮತ್ತು ಸರ್ವಾನ್ವಯತೆಯ ಬಗ್ಗೆ ದೃಢವಾಗಿದ್ದರೆ, ಅದನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವ ಕೆಲಸ ಮಾಡಬೇಕೆ ವಿನಾಃ 'ಪ್ರಶ್ನೆ'ಗಳನ್ನು ಉದ್ಧಟತನವೆಂದೊ, ಪ್ರಶ್ನಕರನ್ನು ಧರ್ಮನಿಂಧಕರೆಂದೊ ಭಾವನಾತ್ಮಕ ದಾಳಿಗಿಳಿಯುವುದು ಸಾಂಸ್ಕೃತಿಕ ಭಯೋತ್ಪಾದನೆಯಲ್ಲದೆ ಮತ್ತೇನೂ ಅಲ್ಲ.

2) ಮುಸ್ಲಿಂ ಪ್ರಾಬಲ್ಯವಿರುವ ಇಂಡೋನೇಷಿಯಾ ದೇಶ ತನ್ನ ವಾಯುಸಂಸ್ಥೆಗೆ 'ಗರುಡಾ ಇಂಡೋನೇಷ್ಯಾ ಏರ್‌ಲೈನ್ಸ್' ಎಂಬ ಹೆಸರಿಟ್ಟಿದೆ.

(ನಾವಿಲ್ಲಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟ ಸಂಘಸಂಸ್ಥೆಗಳಿಗೆ ಹಿಂದೂ ಹೆಸರನ್ನಿಡಲು ಪ್ರತಿಭಟನೆ ಮಾಡಬೇಕಿದೆ)


3). ಇಂಡೋನೇಷ್ಯಾ ತನ್ನ ಅತಿಮೌಲ್ಯದ (ರೂ.20,000) ನೋಟಿನಲ್ಲಿ ಹಿಂದೂ ದೇವತೆ ಗಣೇಶನ ಚಿತ್ರವನ್ನು ಮುದ್ರಿಸಿಕೊಂಡಿದೆ.

(ನಮ್ಮ ದೇಶದ ಯಾವ ನೋಟಿನ ಮೇಲೆ ಹಿಂದೂದೇವರ ಚಿತ್ರವಿದೆ..?)

ಸತ್ಯಾಂಶ: ಇಂಡೋನೇಷ್ಯಾದ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ ಇವುಗಳ (2 ಮತ್ತು 3) ಟೊಳ್ಳುತನ ಅರ್ಥವಾಗುತ್ತದೆ. ಸುಮಾರು 17 ಸಾವಿರಕ್ಕೂ ಹೆಚ್ಚು ದ್ವೀಪಗಳ ಸಮೂಹ ಮತ್ತು 300 ಜ್ವಾಲಾಮುಖಿಗಳನ್ನು ಹೊಂದಿರುವ ಈ ದೇಶ ಮುಸ್ಲಿಂ ಪ್ರಾಬಲ್ಯದ ರಾಷ್ಟ್ರ ಎನ್ನುವುದು ಎಷ್ಟು ಸತ್ಯವೋ, ಭಾರತವನ್ನು ಹೊರತುಪಡಿಸಿ ಅತಿಹೆಚ್ಚು ಹಿಂದೂಗಳನ್ನು ಹೊಂದಿರುವ ಜಗತ್ತಿನ ನಾಲ್ಕನೇ ರಾಷ್ಟ್ರ ಎನ್ನುವುದೂ ಅಷ್ಟೇ ಸತ್ಯ (ನೇಪಾಳ ಮತ್ತು ಬಾಂಗ್ಲಾದೇಶ ಹೊರತುಪಡಿಸಿ). ಗುರುಡಾ ಏರ್‌ಲೈನ್ಸ್, ನೋಟಿನಲ್ಲಿ ಗಣೇಶನ ಚಿತ್ರಗಳ ಹೊರತಾಗಿಯೂ ಅಲ್ಲಿನ ರಾಜಧಾನಿ ಜಕಾರ್ತದಲ್ಲಿ ಕೃಷ್ಣ ಅರ್ಜುನನಿಗೆ ಗೀತೋಪದೇಶ ಮಾಡಿದ ಸನ್ನಿವೇಶದ ಬೃಹತ್ ವಿಗ್ರಹವಿದೆ, ಭೀಮನ ವಿಗ್ರಹಗಳಿವೆ, ಬಲಿ ದ್ವೀಪದಲ್ಲಿ ಸುಮಾರು 4600 ಸಣ್ಣ ಹಿಂದೂ ದೇವಾಲಯಗಳಿವೆ, ಅಲ್ಲಿನ ರಾಷ್ಟ್ರೀಯ ಬ್ಯಾಂಕ್‌ಗೆ ಕುಬೇರ ಎಂಬ ಹೆಸರನ್ನಿಡಲಾಗಿದೆ. ಮುಸ್ಲಿಂ ಪ್ರಾಬಲ್ಯದ ನೆಲದಲ್ಲಿ ಇಂತಹ ಅಚ್ಚರಿಗಳು ಇರಲು ಕಾರಣವೇನೆಂದು ನಾವು ಮೊದಲು ಅರ್ಥ







ಮಾಡಿಕೊಳ್ಳಬೇಕು.

ಇವತ್ತು ಮುಸ್ಲಿಂ ಬಾಹುಳ್ಯದ ರಾಷ್ಟ್ರವೆನಿಸಿರುವ ಇಂಡೋನೇಷ್ಯಾದಲ್ಲಿ ಇಸ್ಲಾಂ ಧರ್ಮ ಪ್ರವರ್ಧಮಾನಕ್ಕೆ ಬಂದಿದ್ದೇ 16ನೇ ಶತಮಾನದ ಅಂತ್ಯದಿಂದೀಚೆಗೆ. ಅದಕ್ಕೂ ಮೊದಲು ಭಾರತ ಮೂಲದ ಹಿಂದೂ ರಾಜಮನೆತನಗಳೇ ಇಲ್ಲಿ ಆಳ್ವಿಕೆ ನಡೆಸಿದ್ದವು. ಹಾಗಾಗಿಯೇ ಇಂಡೋನೇಷ್ಯಾದಲ್ಲಿ 'ಹಿಂದೂ' ಪ್ರಭಾವ ಉಳಿದಿದೆ. ಕ್ರಿ.ಶ. 7ನೇ ಶತಮಾನದಲ್ಲಿ ಶ್ರೀವಿಜಯನ ನೌಕಾ ಸಾಮ್ರಾಜ್ಯದ ವಿಸ್ತರಣೆಯಿಂದಾಗಿ ಭಾರತದ ಆಗ್ನೇಯ ಭಾಗದ ಇಂಡೋನೇಷ್ಯಾಗೆ ಹಿಂದೂ ಮತ್ತು ಬೌದ್ಧಧರ್ಮಗಳು ದಟ್ಟವಾಗಿ ಕಾಲಿಟ್ಟವು. ಕೃಷಿ ಬೌದ್ಧೀಯನಾದ ಶೈಲೇಂದ್ರ ಮತ್ತು ಹಿಂದೂ ರಾಜಮನೆತನಗಳಾದ ಮತಾರಾಮ್, ಮಜಪಹಿತ್, ಸಿಂಘಸರಿ ವಂಶಗಳು ಇಲ್ಲಿ ಆಳಿವೆ. ಶ್ರೀ ವಿಜಯನಿಗೂ ಮುನ್ನವೇ ಇಲ್ಲಿ ಭಾರತೀಯ ರಾಜರುಗಳ ಒಡನಾಟ ಇತ್ತು ಎನ್ನಲಾಗುತ್ತದೆ. ಅದನ್ನು ಪುಷ್ಠೀಕರಿಸುವಂತೆ ಮಹಾಕಂ ನದಿ ಬಳಿಯ ಕುಟೈ ಎಂಬಲ್ಲಿ ಸುಮಾರು 4ನೇ ಶತಮಾನಕ್ಕೆ ಸೇರಿದ್ದೆನ್ನಲಾದ ಮೂರು ಪೀಠಗಳು ಪತ್ತೆಯಾಗಿವೆ. ಒಂದು ಪೀಠದ ಮೇಲೆ ಭಾರತೀಯ ರಾಜವಂಶ ಪಲ್ಲವರ ಲಿಪಿಯಲ್ಲಿ 'ಬ್ರಾಹ್ಮಣ ಪೂಜಾರಿಗಳಿಗೆ ನೀಡಿದ ಉಡುಗೊರೆ' ಎಂದು ಕೆತ್ತಲಾಗಿದೆ.

16ನೇ ಶತಮಾನದಿಂದ ಈಚೆಗೆ ಅಲ್ಲಿ ಪ್ರವರ್ಧಮಾನಕ್ಕೆ ಬಂದ ಇಸ್ಲಾಂ ಧರ್ಮ, ಈ ಮೊದಲಿದ್ದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಭಾವಗಳನ್ನು ದಮನಿಸದೆ, ಅವುಗಳೊಟ್ಟಿಗೆ ಕಲೆತು ತನ್ನ ಅಸ್ತಿತ್ವ ವಿಸ್ತಾರಗೊಳಿಸುತ್ತಾ ಬಂದಿದ್ದರಿಂದ ಇಂಡೋನೇಷ್ಯಾದಲ್ಲಿ ಇಂತಹ ಛಾಯೆಗಳು ಘಟಿಸಲು ಸಾಧ್ಯವಾಗಿರೋದು. ಇನ್ನು ಮೇಲ್ಕಂಡ ನಿರ್ದಿಷ್ಟ ಸಂಗತಿಗಳಿಗೆ ಬರುವುದಾದರೆ ಏರ್‌ಲೈನ್ಸ್ ಸಂಸ್ಥೆಗೆ 'ಗರುಡಾ' ಎಂಬ ಹೆಸರನ್ನು ಆಯ್ಕೆ ಮಾಡಿಕೊಂಡಿರುವುದು ರಾಡೆನ್ ಮಸ್ ನೊಟೊ ಸೊಎರೆಟೊ ಎಂಬ ಕವಿ ತನ್ನ ಡಚ್ ಕವನವೊಂದರಲ್ಲಿ ಉಲ್ಲೇಖಿಸಿದ **Ik ben Garuda, Vishnoe's vogel, die zijn vleugels uitslaat ?oog boven uw eilanden"** (ನಾನು ಗರುಡಾ, ನನ್ನ ರೆಕ್ಕೆಗಳನ್ನು ದ್ವೀಪನಾಡಿನ ಅಗಲಕ್ಕೂ ಚಾಚಿದ್ದೇನೆ) ಎಂಬ ಸಾಲುಗಳಿಂ (ಇಂಡೋನೇಷ್ಯಾ 1945ರವರೆಗೂ ಡಚ್ಚರ ವಸಾಹ ರಾಷ್ಟ್ರವಾಗಿತ್ತು).

ನೋಟಿನ ಮೇಲೆ ಗಣೇಶನ ಚಿತ್ರವನ್ನು ಮುದ್ರಿಸಿ ವುದು ಇಂಡೋನೇಷ್ಯಾದ ಶಿಕ್ಷಣ ಕಾಳಜಿಯನ ಪ್ರಚುರಪಡಿಸುವುದಕ್ಕಾಗಿ (ಗಣೇಶನನ್ನು ವಿದ್ಯಾಧಿಪತಿ ಎಂ ಕರೆಯುವ ವಾಡಿಕೆ ಇದೆ). ಅದೇ ನೋಟಿನ ಹಿಂಬದಿಯ ಶಾಲಾ ತರಗತಿಯ ಮಕ್ಕಳ ಚಿತ್ರ ಇರುವುದು ಮ ಗಣೇಶನ ಚಿತ್ರದ ಪಕ್ಕದಲ್ಲೇ ಕಿ ಹಜರ್ ದೇವಂತ್‌ರ (ಇವರ ಜನ್ಮದಿನವನ್ನು ಇಂಡೋನೇಷ್ಯಾದಲ್ಲಿ ರಾಷ್ಟ್ರೀ ಶಿಕ್ಷಣ ದಿನವನ್ನಾಗಿ ಆಚರಿಸಲಾಗುವುದು) ಭಾವಚಿ ಇರುವುದು ಆ ಉದ್ದೇಶವನ್ನು ಸಾದರಪಡಿಸುತ್ತವೆ.

ಸ್ಥಳ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯ ಅರ್ಥಮಾಡಿಕೊಂಡಾಗ ಇಂತಹ ಹೇಳಿಕೆಗಳು ತ ಉತ್ಪ್ರೇಕ್ಷೆಯನ್ನು ಕಳೆದುಕೊಂಡು ಸಹಜವೆನಿಸುತ್ತ ಅದೊಮ್ಮೆ ಮೋದಿ ಇನ್ನೂ ಗುಜರಾತ್ ಮುಖ್ಯಮಂ ಯಾಗಿದ್ದಾಗ ಮೊಹಿನ್ ಅಹ್ಮದ್ ಎಂಬ ಪತ್ರಿಕೋದ್ಯ ವಿದ್ಯಾರ್ಥಿ ಆತನ ಸಂದರ್ಶನ ಮಾಡಲೆಂದು ತೆರಳಿ ಅವನ ಮುಂದೇ ಇದೇ ಅರ್ಧಸತ್ಯವನ್ನು ಮುಂದಿಟ್ಟ ಮೋದಿ 'ಇಂಡೋನೇಷ್ಯಾದಂತಹ ಮುಸ್ಲಿಂ ರಾಷ್ಟ್ರದ ಹಿಂದೂ ದೇವತೆ ಗಣೇಶನ ಚಿತ್ರವನ್ನು ನೋಟಿನ ಮೇ ಛಾಪಿಸಿಕೊಂಡಿದ್ದಾರೆ. ಭಾರತೀಯ ಮುಸ್ಲಿಮರು ಕೂ ಹೀಗೆ ಯಾಕಿರಬಾರದು?' ಎಂಬುದಾಗಿ ಪ್ರಶ್ನಿಸಿದ್ದ. ಕ್ಷಣಕ್ಕೆ ಉತ್ತರಿಸಲು ಅಹ್ಮದ್‌ಗೆ ಏನೂ ತೋಚಲಿ ಮನೆಗೆ ವಾಪಾಸಾಗಿ ಕೂಲಂಕಷವಾಗಿ ಆಲೋಚಿಸಿದಾ ಪ್ರಶ್ನೆಯ ಮತ್ತೊಂದು ಸ್ವರೂಪ ಅಹ್ಮದ್‌ಗೆ ಹೊಳೆದಿ ಕೂಡಲೇ ಅದನ್ನಾತ ಮೋದಿಗೆ ಇಮೇಲ್ ಮಾಡಿ 'ಮೋದೀಜಿ, ಇಂಡೋನೇಷ್ಯಾ ಮುಸ್ಲಿಂ ರಾಷ್ಟ್ರ ಹೌದ ಅಲ್ಲಿ ಹಿಂದೂಗಳು ಅಲ್ಪಸಂಖ್ಯಾತರೂ ಹೌದು. ಅಂ ಭಾರತದಲ್ಲಿರುವ ಪರಿಸ್ಥಿತಿಗೆ ವ್ಯತಿರಿಕ್ತ ವಾತಾವರಣ (ಹಿಂದೂಗಳು ಬಹುಸಂಖ್ಯಾತರು, ಮುಸ್ಲಿಂ ಅಲ್ಪಸಂಖ್ಯಾತರು) ಅಲ್ಲಿಯದು. ಅಲ್ಲಿ ಅಲ್ಪಸಂಖ್ಯಾ ಹಿಂದೂಗಳ ದೇವರ ಚಿತ್ರವನ್ನು ನೋಟಿನ ಮೇ ಮುದ್ರಿಸಲು ಬಹುಸಂಖ್ಯಾತರು ಒಪ್ಪುತ್ತಾರೆ ಎನ್ನುವುದಾದ ಇಲ್ಲಿ ಭಾರತದಲ್ಲಿ ಅದು ಸಾಧ್ಯವಾಗುವ ಪರಿಸ್ಥಿತಿ ಇದೆಯೆ

ನಿರೀಕ್ಷೆಯಂತೆ ಅತ್ತ ಮೋದಿಯಿಂದ ಯಾವ ಉತ್ತರ ಬರಲಿಲ್ಲ.

ಮರೆಯಾದ ಮೌನಿ

8 ◄◄

ಸದಸ್ಯನಾಗಿ, ಅದರ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದರು. ಎರಡು ಬಾರಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ 1968 ರಿಂದ ಹತ್ತು ವರ್ಷಗಳ ಕಾಲ ಅರಕೆರಾ ಜನತೆಗೆ ಸೇವೆ ಸಲ್ಲಿಸಿದರು.

ರಾಜಾಜಿ ಅವರ ಸ್ವತಂತ್ರ ಪಕ್ಷದ ಮೂಲಕ ಪಕ್ಷ ರಾಜಕಾರಣಕ್ಕೆ ಅಡಿಯಿಟ್ಟ ವೆಂಕಟೇಶ ನಾಯಕರು 1978ರಲ್ಲಿ ತಾಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ ಆಯ್ಕೆಯಾದ ಸಂದರ್ಭದಲ್ಲೇ ಕಾಂಗ್ರೆಸ್ ಕೈಬೀಸಿ ಕರೆಯಿತು. ದೇವದುರ್ಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವಧಿಯಲ್ಲೇ 1984ರಲ್ಲಿ ಅವಿಭಜಿತ ರಾಯಚೂರು ಎಪಿಎಂಸಿ ನಿರ್ದೇಶಕರಾಗಿ ನೇಮಕ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸಾರ್ವಜನಿಕ ಚುನಾವಣೆ ರಾಜಕಾರಣಕ್ಕೆ 1986ರಲ್ಲಿ ಪದಾರ್ಪಣೆ ಮಾಡಿದ ವೆಂಕಟೇಶ ನಾಯಕರು ಅರಕೆರಾ ಜಿಲ್ಲಾ ಪರಿಷತ್ ಕ್ಷೇತ್ರಕ್ಕೆ ಸ್ಪರ್ಧಿಸಿ ಗೆದ್ದ ನಂತರ ಜಿಲ್ಲಾ ಪರಿಷತ್‌ನ ಸ್ಥಾಯಿ ಸಮಿತಿ ಅಧ್ಯಕ್ಷರಾದರು.


ದಿಲ್ಲಿಯತ್ತ ಪಯಣ

ಕಾಂಗ್ರೆಸ್ ಪಕ್ಷದೊಳಗಿನ ಅಂತಃಕಲಹದ ಪರಿಣಾಮವಾಗಿ 1991ರ ಲೋಕಸಭಾ ಚುನಾವಣೆಯಲ್ಲಿ ರಾಯಚೂರು ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸುವುದಕ್ಕೆ ವೆಂಕಟೇಶ ನಾಯಕರಿಗೆ ಸದವಕಾಶ ಸಿಕ್ಕಿತು. ಕಾಂಗ್ರೆಸ್ ಟಿಕೆಟ್ ಪಡೆದು ಕಣಕ್ಕಿಳಿದ ಅವರು ತಮ್ಮ ಎದುರಾಳಿ ಜನತಾದಳದ ನಜೀರ್ ಅಹ್ಮದ್ ಸಿದ್ದಿಖಿ ಅವರನ್ನು 1.22 ಲಕ್ಷ ಮತಗಳ ಅಂತರದಿಂದ ಸೋಲಿಸಿ ಮೊದಲ ಬಾರಿ ಸಂಸತ್‌ಗೆ ಕಾಲಿಟ್ಟರು.

ಮುಂದಿನ ಚುನಾವಣೆಯಲ್ಲಿ, ಅಂದರೆ 1996ರ ಲೋಕಸಭಾ ಚುನಾವಣೆಯಲ್ಲಿ ಜನತಾದಳದ ರಾಜಾ ರಂಗಪ್ಪ ನಾಯಕ ಎದುರು 36,000 ಮತಗಳ ಅಂತರದಿಂದ ಸೋತರು. ಆದರೆ, ಅವರನ್ನು ಕೈಬಿಡದ ಪಕ್ಷ 1998ರ ಚುನಾವಣೆಗೆ ಮತ್ತೊಮ್ಮೆ ಟಿಕೆಟ್ ನೀಡಿ ನಿಲ್ಲಿಸಿತು. ಮತ್ತದೇ ಜನತಾದಳದ ರಾಜಾ ರಂಗಪ್ಪ ನಾಯಕರನ್ನು 80,000ಕ್ಕೂ ಅಧಿಕ ಮತಗಳ ಅಂತರದಲ್ಲಿ ಸೋಲಿಸಿ ಮುಯ್ಯಿಗೆಮುಯ್ಯಿ ತೀರಿಸಿಕೊಂಡರು.

1999ರ ಚುನಾವಣೆಯಲ್ಲಿ ಸಂಯುಕ್ತ ದಳದ ಅಬ್ದುಲ್ ಸಮದ್ ಸಿದ್ದಿಖಿ ಅವರನ್ನು ದಾಖಲೆಯ 1.72 ಲಕ್ಷ ಮತಗಳ ಅಂತರದಲ್ಲಿ ಪರಾಭವಗೊಳಿಸಿದರೆ, 2004ರ ಚುನಾವಣೆಯಲ್ಲಿ ಜನತಾದಳದ ಮದನಗೋಪಾಲ ನಾಯಕ ವಿರುದ್ಧ ಕೇವಲ 508 ಮತಗಳಿಂದ ಗೆದ್ದರು.

2008ರ ವಿಧಾನಸಭೆ ಚುನಾವಣೆಯಲ್ಲಿ ದೇವದುರ್ಗ ಕ್ಷೇತ್ರಕ್ಕೆ ಸ್ಪರ್ಧಿಸಿ ತಮ್ಮ ಸ್ವಂತ ಉಢಾಳ ಮೊಮ್ಮಗ ಜೆಡಿಎಸ್ ಅಭ್ಯರ್ಥಿ ಕೆ.ಶಿವನಗೌಡ ನಾಯಕ ಎದುರು ಪರಾಭವಗೊಂಡರು. ಗೆದ್ದು ಬೀಗುತ್ತಿದ್ದ ಶಿವನಗೌಡ ನಾಯಕ ಕೆಲವೇ ತಿಂಗಳಲ್ಲಿ ಆಪರೇಷನ್ ಕಮಲ ಕಾರ್ಯಾಚರಣೆಯಲ್ಲಿ ತನ್ನನ್ನು ಮಾರಿಕೊಂಡುಬಿಟ್ಟ. ರಾಜೀನಾಮೆ ಕೊಟ್ಟು


ವೆಂಕಟೇಶ್ ನಾಯಕ್ ಅವರ ಅಂತಿಮ ಯಾತ್ರೆಯಲ್ಲಿ ಜನಸಾಗರ

ಮತ್ತೆ ಉಪಚುನಾವಣೆ ನಡೆದಾಗ ಅವನ ವಿರುದ್ಧ ಆಗಲೇ ಸೋತಿದ್ದ ವೆಂಕಟೇಶ ನಾಯಕ ಕಣಕ್ಕಿಳಿಯಲಿಲ್ಲ. ಬದಲಿಗೆ ತನ್ನ ಮಗ ಬಿ.ವಿ. ನಾಯಕರನ್ನು ಇಳಿಸಿದರು. ಬಿಜೆಪಿಗಳ ಆರ್ಭಟ, ಗಣಿಧಣಿಗಳ ಅಟ್ಟಹಾಸ ನಡೆಯುತ್ತಿದ್ದ ಆ ದಿನಗಳಲ್ಲಿ ಬಿ.ವಿ. ನಾಯಕ ಕೂಡ ಶಿವನಗೌಡ ನಾಯಕನ ವಿರುದ್ಧ ಸೋತರು.

ಈ ನಡುವೆ ವೆಂಕಟೇಶ ನಾಯಕರ ವರ್ಚಸ್ಸು ಕುಂದಿದೆ ಎಂಬ ನೆಪದಲ್ಲಿ ಕಾಂಗ್ರೆಸ್ ಅವರಿಗೆ 2009ರ ಲೋಕಸಭೆ ಚುನಾವಣೆಗೆ ಟಿಕೆಟ್ ಕೊಡಲಿಲ್ಲ. ಅವರ ಬದಲಿಗೆ ರಾಜಾ ವೆಂಕಟಪ್ಪ ನಾಯಕರನ್ನು ಕಣಕ್ಕಿಳಿಸಿತು. ಆದರೆ, ಅವರೂ ಕೂಡ ಬಿ. ಶ್ರೀರಾಮುಲುನ ಬಲಗೈ ಭಂಟ ಹಾಗೂ ಬಿಜೆಪಿಯ ಎದುರಾಳಿ ಸಣ್ಣಫಕ್ಕೀರಪ್ಪನ ಎದುರು ಸೋತುಬಿಟ್ಟರು. 2013ರ ವಿಧಾನಸಭೆ ಚುನಾವಣೆಗಳು ಎದುರಾದಾಗ ದೇವದುರ್ಗ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತೆ ವೆಂಕಟೇಶ ನಾಯಕರನ್ನು ನಿಲ್ಲಿಸಿತು. ಆಗಲೂ ಕೂಡ ಅವರಿಗೆ ಬಿಜೆಪಿಯ ಎದುರಾಳಿ ತನ್ನ ಸ್ವಂತ ಮೊಮ್ಮಗ ಕೆ.ಶಿವನಗೌಡ ನಾಯಕ. ಅಜ್ಜ ಮೊಮ್ಮಗನ ಜಿದ್ದಾಜಿದ್ದಿಯ ಈ ಚುನಾವಣಾ ಹೋರಾಟದಲ್ಲಿ ಅಜ್ಜ ವೆಂಕಟೇಶ ನಾಯಕ ಶಿವನಗೌಡನಿಗೆ ಮಣ್ಣುಮುಕ್ಕಿಸಿದರು.

2014ರಲ್ಲಿ ಲೋಕಸಭಾ ಚುನಾವಣೆಗಳು ಎದುರಾದಾಗ ರಾಯಚೂರು ಕ್ಷೇತ್ರ ಮತ್ತೆ ಅರಕೆರಾ ಕುಟುಂಬ ಸದಸ್ಯರ ಹೋರಾಟಕ್ಕೆ ವೇದಿಕೆಯನ್ನು ಸೃಷ್ಟಿಸಿತು. ಕಾಂಗ್ರೆಸ್‌ನಿಂದ ವೆಂಕಟೇಶ ನಾಯಕರ ಮಗ ಬಿ.ವಿ. ನಾಯಕ ಸ್ಪರ್ಧಿಸಿದರೆ ಬಿಜೆಪಿಯಿಂದ ಅವರ ಮೊಮ್ಮಗ ಕೆ. ಶಿವನಗೌಡ ನಾಯಕ ನಿಂತರು. ಭಾರೀ ಜಿದ್ದಾಜಿದ್ದಿಯ ಈ ಹೋರಾಟದಲ್ಲಿ ವೆಂಕಟೇಶ ನಾಯಕರು ಮಗನ ಪಕ್ಷ ವಹಿಸಿದರು. ಪರಿಣಾಮವಾಗಿ ದೇಶದಾದ್ಯಂತ ಬೀಸುತ್ತಿದ್ದ ಮೋದಿ ಗಾಳಿಯಲ್ಲಿ ರಾಯಚೂರು ಕ್ಷೇತ್ರ ಕೊಚ್ಚಿ ಹೋಗದಂತೆ ತಡೆದರು. ಕೇವಲ ಒಂದೂವರೆ ಸಾವಿರ ಮತಗಳ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ.ವಿ. ನಾಯಕ ಗೆದ್ದರು. ಈ ಗೆಲವಿಗೆ ವೆಂಕಟೇಶ ನಾಯಕರ ಕೊಡುಗೆಯೂ ಅಪಾರವಾಗಿತ್ತು.

ಜಮೀನು ಬಿಟ್ಟರು

ದೇವರಾಜ ಅರಸು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಭೂಸುಧಾರಣೆ ಕಾಯ್ದೆಯನ್ನು ವೆಂಕಟೇಶನಾಯಕರು ಬಲವಾಗಿ ಸಮರ್ಥಿಸಿದರು. ಹುಟ್ಟೂರು ಅರಕೆರಾದಲ್ಲಿ ಜಮೀನು ಉಳಿಸಿಕೊಂಡು ಕೆರೆಬೂದೂರಿನಲ್ಲಿದ್ದ 30 ಎಕರೆ ಜಮೀನನ್ನು ಭೂರಹಿತ ರೈತರಿಗೆ ಬಿಟ್ಟುಕೊಟ್ಟರು. ಸಾಹಿತ್ಯಿಕ ಅಭಿರುಚಿ ಬೆಳೆಸಿಕೊಂಡಿದ್ದ ಅವರಿಗೆ ಓದು ನೆಚ್ಚಿನ ಹವ್ಯಾಸವಾಗಿತ್ತು?. ಹದಿನಾರನೆ ಶತಮಾನದ ಕನ್ನಡ ಕವಿ ಲಕ್ಷ್ಮೀಶ ಬರೆದ ಜೈಮಿನಿ ಭಾರತ ಅವರ ನೆಚ್ಚಿನ ಕೃತಿಯಾಗಿತ್ತು. ಸ್ವಂತ ಊರಿನ ಗುಡ್ಡದ ಮೇಲಿದ್ದ ವಿಶಾಲ ಬರಡು ಭೂಮಿಯಲ್ಲಿ ಔಷಧೀಯ ಸಸ್ಯ ಹೂ, ತರಹೇವಾರಿ ಗಿಡಗಳ ವನ ಬೆಳೆಸಿ ಪೋಷಿಸುವ ಮೂಲಕ ನಿಸರ್ಗ ಪ್ರೇಮ ಮೆರೆದಿದ್ದರು.

ದುರಂತ ನೋಡಿ. ವೆಂಕಟೇಶ ನಾಯಕರು ಮಹಾನ್ ನಾಯಕರ ಜಯಂತಿ, ಸ್ಮರಣೆ, ಶತಾಬ್ದಿ ಕಾರ್ಯಕ್ರಮಗಳಲ್ಲಿ ಭಾಷಣ ಮಾಡುವಾಗ ಅಂತಹ ನಾಯಕರ ಜೀವನ, ಸಾಧನೆ, ಚಿಂತನೆಗಳನ್ನು ಕೊಂಡಾಡುತ್ತಾ ಬಹಳಷ್ಟು ಮಹಾನ್ ನಾಯಕರು ದುರಂತ ಅಂತ್ಯ ಕಂಡಿದ್ದಕ್ಕೆ ಮರುಕ ವ್ಯಕ್ತಪಡಿಸುತ್ತಿದ್ದರು. ಈಗ ಅವರೇ ರೈಲ್ವೆ ಅಪಘಾತದಲ್ಲಿ ದುರಂತ ಅಂತ್ಯ ಕಂಡದ್ದು ವಿಪರ್ಯಾಸ.

ಸರಳ ಮತ್ತು ಸಂಭಾವಿತ ನಾಯಕ

ಪರಿಶಿಷ್ಟ ಪಂಗಡದ ಮನೆತನದಲ್ಲಿ ಹುಟ್ಟಿದರೂ ನಾಯಕತ್ವಕ್ಕೆ ದರ್ಪ, ದಾರ್ಷ್ಟ್ಯತನ ಸೋಂಕದಂತೆ ನೋಡಿಕೊಂಡವರು ವೆಂಕಟೇಶ ನಾಯಕ. ಪಂಚಾಯತಿಯಿಂದ ಪ್ರಾರಂಭವಾದ ಅವರ ರಾಜಕೀಯ ಪಯಣ ಪಾರ್ಲಿಮೆಂಟ್‌ಗೆ ಹೋಗಿ ಬಂದನಂತರವೂ ಅವರಿಂದೂ ಅಹಂ ಅನ್ನು ಹತ್ತಿರ ಸುಳಿಯಗೊಟ್ಟವರಲ್ಲ. ಸರಳತೆ, ಸಂಭಾವಿತ ಗುಣಗಳೇ ಅವರ ಜನಪ್ರಿಯತೆಯ ಆಧಾರಗಳಾಗಿದ್ದವು. ಹೀಗಿದ್ದೂ ರಾಜಕೀಯ ನಾಯಕರಾಗಿ ಬೆಳೆಯಲು ಸಾಧ್ಯವಿದೆ ಎಂಬುದನ್ನು ತೋರಿಸಿಕೊಟ್ಟ ಅಪರೂಪದ ನಾಯಕರವರು.

ಇದೇ ಅಂಶಗಳನ್ನು ಇನ್ನೊಂದು ಕೋನದಿಂದ ನೋಡಿದರೆ ಇವೇ ಸರಳತೆ, ಸಂಭಾವಿತತೆ ಮತ್ತು ಮೃದು ಸ್ವಭಾವಗಳೇ ಅವರಿಗೆ ಕೆಲವೊಮ್ಮೆ ಮುಳುವಾಗಿದ್ದೂ ಉಂಟು.

2009ರ ಲೋಕಸಭೆ ಚುನಾವಣೆಯಲ್ಲಿ ಮತ್ತೆ ಪಕ್ಷದ ಟಿಕೆಟ್ ಸಿಕ್ಕಿದ್ದರೆ ಐದನೇ ಸಲ ಗೆದ್ದು ಯುಪಿಎ-2 ಸರಕಾರದಲ್ಲಿ ಮಂತ್ರಿಯಾಗುವ ಅವಕಾಶವಿತ್ತು?. ಸೇವಾ ಹಿರಿತನದ ಜತೆಗೆ ಜಾತಿ ಲೆಕ್ಕಾಚಾರವೂ ಸಾಥ್ ನೀಡುವುದು ಸ್ಪಷ್ಟವಿತ್ತು. ಆದರೆ, ಅವರಿಗೆ ಆ ವರ್ಷ ಟಿಕೆಟ್ ಕೊಡಲೇ ಇಲ್ಲ. ಅದೇ ಕಾರಣಕ್ಕೆ ಕಾಂಗ್ರೆಸ್ ಕ್ಷೇತ್ರದಲ್ಲಿ ಗೆಲ್ಲಲೂ ಇಲ್ಲ.

ಶಾಸಕರಾದ ಮೇಲೂ ಸಿದ್ದರಾಮಯ್ಯ ಸಂಪುಟದ ಸಂಭಾವ್ಯರ ಪಟ್ಟಿಯಲ್ಲಿ ವೆಂಕಟೇಶ ನಾಯಕರ ಹೆಸರಿತ್ತು. ಕೊನೆ ಗಳಿಗೆಯಲ್ಲಿ ಕೈತಪ್ಪಿ ಹೋಯಿತು ಎಂದು ಕಾಂಗ್ರೆಸ್ ಉನ್ನತ ಮೂಲಗಳೇ ಖಚಿತಪಡಿಸಿದ್ದವು. ಜೊತೆಗೆ ಅವರಿಗೆ ಮಂತ್ರಿಪದವಿಯನ್ನು ತಪ್ಪಿಸಿದ್ದು ಈಗಿನ ಎಮ್ಮೆಲ್ಸಿ ಬೋಸರಾಜು ಎಂಬುದನ್ನು ಹಿರಿಯ ಕಾಂಗ್ರೆಸ್ ನಾಯಕರೇ ಒಪ್ಪಿಕೊಂಡಿದ್ದರು. 2009ರ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಸಿಗದಿದ್ದುದು ಹಾಗೂ 2013ರಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿ ಮಂತ್ರಿಯಾಗುವ ಅವಕಾಶ ಕೈತಪ್ಪಿದ್ದು ಮೂಲಭೂತವಾಗಿ ಅವರ ಮೃದು ಸ್ವಭಾವದ ಕಾರಣದಿಂದಲೇ. ಅವರು ಸ್ವಲ್ಪ ಕಠಿಣ ನಿಲುವು ತಾಳಿದ್ದರೆ ಅಥವಾ ತುಸು ಸೆಟೆದು ನಿಂತಿದ್ದರೆ ಎರಡೂ ಸಂದರ್ಭದಲ್ಲೂ ಅವರಿಗೆ ಅನ್ಯಾಯ ಆಗುತ್ತಿರಲಿಲ್ಲ. ಅವರು ತಮ್ಮ ವೈಯಕ್ತಿಕ ಅವಕಾಶಗಳನ್ನು ಬಿಡಲು ತಯಾರಿದ್ದರೆ ಹೊರತು ತಮ್ಮ ಮೂಲ ಸ್ವಭಾವವಾದ ಮೃದು ಧೋರಣೆ, ಹೆಚ್ಚು ಮಾತನಾಡದ ಮೌನ ಸ್ವಭಾವ, ಸಂಭಾವಿತನಗಳನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ.

ವೆಂಕಟೇಶ ನಾಯಕರು ಪಕ್ಷಾತೀತವಾಗಿ ಎಲ್ಲರ ಪ್ರೀತಿ, ಗೌರವ ಸಂಪಾದಿಸಿದ್ದರು. ಸೌಜನ್ಯದ ಸ್ಪಂದನೆ, ಸಹಬಾಳ್ವೆಗೆ ಮೇಲ್ಪಂಕ್ತಿಯಾಗಿದ್ದರು. ಜನ-ಸಾಮಾನ್ಯರಿಂದ ಹಿಡಿದು ದೊಡ್ಡವರ ತನಕ ಎಲ್ಲರಿಗೂ ಸುಲಭವಾಗಿ ಕೈಗೆಟುಕುವ ಜನಪ್ರತಿನಿಧಿಯಾಗಿದ್ದರು.

■ ಕೆ.ಎನ್.ವಿನೋದ್

ಫೋಟೋಗಳು: ಸಂತೋಷ್ ಸಾಗರ್

ದುಡ್ಡೇ ದೊಡ್ಡಪ್ಪನಾ...

ಸಭ್ಯ ನಾಗರಿಕರು ಎಂದರೆ ಬಹಳವಾಗಿ ಹೇಡಿಗಳು, ಸೈಲಾಗದವರು, ಕೆಲಸಕ್ಕೆ ಬಾರದವರು ಎಂದೇ ಸಮಾಜದ ಒಂದು ಭಾಗ ಗುರುತಿಸುತ್ತದೆ. ಅಂತಹವರಿಗೆ ದೈಹಿಕ, ಮಾನಸಿಕ ಹಿಂಸೆ ನೀಡಲು ಹಿಂಜರಿಕೆಯಾಗಲೀ, ಭಯವಾಗಲೀ ಇರುವುದಿಲ್ಲ. ಅದಕ್ಕೂ ಒಂದು ಮಿತಿ ಇರುತ್ತೆ. ಅನ್ಯಾಯ ಮಿತಿ ಮೀರಿದಾಗ ಈ ಸಭ್ಯರು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗುತ್ತಾರೆ. ಅಲ್ಲಿ ನ್ಯಾಯ ಅನ್ನುವುದು ಆರೋಪಿಯ ಹಣದ ಮೇಲೆ ನಿಂತಿರುತ್ತದೆ. ಆತ ಶ್ರೀಮಂತನಾಗಿದ್ದಷ್ಟೂ ನ್ಯಾಯ ದೊರಕುವುದು ವಿಳಂಬವಾಗುತ್ತದೆ. ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ, ಮತ್ತೊಂದು ನ್ಯಾಯಾಲಯದಿಂದ ಮಗದೊಂದು ನ್ಯಾಯಾಲಯಕ್ಕೆ ವ್ಯಾಜ್ಯ ಸುತ್ತುತ್ತಿರುತ್ತೆ. ಅಂತಿಮವಾಗಿ ತೀರ್ಪು ಬಂದಾಗ ಬೆಟ್ಟ ಅಗೆದು ಇಲಿ ಹಿಡಿದ ಅನುಭವ ಆಗುತ್ತೆ ಅನ್ನುವುದು ಕೆಲವರ ಅಂಬೋಣ. ಇದಕ್ಕೆ ಉಪಹಾರ್ ದುರಂತ ಇತ್ತೀಚಿನ ತಾಜಾ ಉದಾಹರಣೆ ಎನ್ನುತ್ತಾರೆ ಅವರು.

ಉಪಹಾರ್ ಎಂಬುದು ಒಂದು ಚಿತ್ರಮಂದಿರ. ಅದು ದೆಹಲಿಯಲ್ಲಿದೆ. 1997 ರಲ್ಲಿ ಆ ಚಿತ್ರಮಂದಿರದಲ್ಲಿ 'ಬಾರ್ಡರ್' ಚಲನಚಿತ್ರ ಪ್ರದರ್ಶಿತವಾಗುತ್ತಿತ್ತು. ಚಿತ್ರಮಂದಿರ ತುಂಬಿತ್ತು. ಎಲ್ಲೋ ಏನೋ ಯಡವಟ್ಟಾಗಿ ಚಿತ್ರಮಂದಿರದಲ್ಲಿ ಬೆಂಕಿ ಕಾಣಿಸಿಕೊಂಡಿತು. ಮಂದಿರದ ತುಂಬ ಹೊಗೆ ತುಂಬಿಕೊಂಡಿತು. ಚಿತ್ರಮಂದಿರದ ಮಾಲೀಕರು ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದರು. ಕಾನೂನು ಕಾಲ ಕಸ ಆಗಿತ್ತು. ನಿರ್ಲಕ್ಷ ಧೋರಣೆ ಎದ್ದು ಕಾಣುತ್ತಿತ್ತು. ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾದ ಸರ್ಕಾರವೂ ವಿಫಲವಾಗಿತ್ತು. ಪ್ರೇಕ್ಷಕರು ದಿಗ್ಭ್ರಮಿತರಾದರು. ಎಲ್ಲರೂ ಒಮ್ಮೆಲೇ ಹೊರಹೋಗಲು ಪ್ರಯತ್ನಿಸಿದರು. ದುರಂತಕ್ಕೆ ಅಲ್ಲಿ ಇದ್ದದ್ದು ಒಂದೇ ಹಾದಿ. ವಿಷಕಾರಿ ಗಾಢವಾದ ಹೊಗೆಯಲ್ಲಿ ಹಲವರು ಸಿಕ್ಕಿಬಿದ್ದರು. ಐವತ್ತೊಂಭತ್ತು ಜನರು ದುರ್ಮರಣಕ್ಕೀಡಾದರು. ನೂರು ಜನ ಗಾಯಗೊಂಡರು.

ದೆಹಲಿ ಸರ್ಕಾರ ಈ ಘಟನೆಯನ್ನು ಸಿಬಿಐಗೆ ವಹಿಸಿತು. ತನಿಖೆ ನಡೆದು ಅಧೀನ ನ್ಯಾಯಾಲಯದ ತೀರ್ಪು ಬರುವಷ್ಟರಲ್ಲಿ ಹತ್ತು ವರ್ಷಗಳೇ ಕಳೆದಿದ್ದವು. ನ್ಯಾಯಾಲಯ ತಪ್ಪಿತಸ್ಥರೆಂದು ಹಲವರನ್ನು ಗುರುತಿಸಿತ್ತು. ಅವರ ತಪ್ಪಿಗೆ ಅನುಗುಣವಾಗಿ ಶಿಕ್ಷೆ ವಿಧಿಸಿತು. ಚಿತ್ರಮಂದಿರದ ಮಾಲೀಕರಾದ ಗೋಪಾಲ್ ಅನ್ಸಾಲ್ ಮತ್ತು ಸುಶೀಲ್ ಅನ್ಸಾಲ್ ಪ್ರಮುಖ ಆರೋಪಿಗಳು. ಅವರಿಗೆ ಎರಡು ವರ್ಷ ಕಠಿಣ ಜೈಲುಶಿಕ್ಷೆ ವಿಧಿಸಿತು.

ಮಾಲೀಕರು ಜೈಲು ಶಿಕ್ಷೆ ಅನುಭವಿಸಲು ಸಿದ್ಧರಿರಲಿಲ್ಲ. ದೆಹಲಿ ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿದರು. ಹೈಕೋರ್ಟು ಶೀಘ್ರವೇ ಇದನ್ನು ಇತ್ಯರ್ಥ ಮಾಡಿತು. ಎರಡು ವರ್ಷ ಇದ್ದ ಕಠಿಣ ಶಿಕ್ಷೆಯನ್ನು ಒಂದು ವರ್ಷಕ್ಕೆ ಇಳಿಸಿತು. ಕೆಲವು ಆರೋಪಿಗಳನ್ನು ಬಿಡುಗಡೆ ಮಾಡಿತು. ಗಮನಿಸಬೇಕಾದ ಪ್ರಮುಖ ಅಂಶ ಅಂದರೆ ಕೆಳ ನ್ಯಾಯಾಲಯವಾಗಲೀ, ಹೈಕೋರ್ಟು ಆಗಲಿ ಇಡೀ ದುರಂತವನ್ನು ದಂಡನೀಯ ಕೊಲೆ (**Culpable Homicide**) ಎಂದು ಸೆಕ್ಷನ್ 304ರ ಅನ್ವಯ ಪರಿಗಣಿಸಲಿಲ್ಲ. ಆದರೆ ಇದು ಮತಿಹೀನ ಅಲಕ್ಷದಿಂದ ಉಂಟಾದ ಮರಣ (**Rash and negligence**) ಎಂದು ಸೆಕ್ಷನ್ 304ಎ ರೀತ್ಯ ಪರಿಗಣಿಸಲಾಗಿತ್ತು!

ಈ ತೀರ್ಪು ಸಹಜವಾಗಿಯೇ ಸಿಬಿಐಗೆ ಮತ್ತು ಸಂತ್ರಸ್ತ ಕುಟುಂಬಗಳ ಆಶಯಗಳಿಗೆ ವಿರುದ್ಧವಾಗಿತ್ತು. ಅನ್ಸಾಲ್ ಕುಟುಂಬದವರಿಗೂ ಇದು ಒಪ್ಪಿಗೆಯಾಗಿರಲಿಲ್ಲ. ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರು. ಈ ವ್ಯಾಜ್ಯ ದ್ವಿಸದಸ್ಯ ಪೀಠದ ಮುಂದೆ ಬಂತು. ಈರ್ವರು ನ್ಯಾಯಾಧೀಶರೂ ಚಿತ್ರಮಂದಿರದ ಮಾಲೀಕರು ಅಪರಾಧಿಗಳು ಎಂಬ ತೀರ್ಮಾನಕ್ಕೆ ಬಂದರು. ಆದರೆ ಜೈಲು ಶಿಕ್ಷೆಯ ವಿಷಯದಲ್ಲಿ ಒಮ್ಮತಕ್ಕೆ ಬರಲಿಲ್ಲ. ಒಬ್ಬರು ಒಂದು ವರ್ಷಕ್ಕೇ ಸೀಮಿತ ಅಂದರೆ ಇನ್ನೊಬ್ಬರು ಎರಡು ವರ್ಷ ಇರಬೇಕು ಎಂದರು. ಎರಡು ವರ್ಷಗಳಲ್ಲಿ ಒಂದು ವರ್ಷ ಜೈಲುಶಿಕ್ಷೆ, ಇನ್ನೊಂದು ವರ್ಷಕ್ಕೆ ಒಂದು ನೂರು ಕೋಟಿ ರೂಪಾಯಿ ದಂಡ ಎಂಬುದು ಅವರ ಅಭಿಮತ ಆಗಿತ್ತು. ಒಮ್ಮತದ ತೀರ್ಮಾನಕ್ಕೆ ಬಾರದ ಹಿನ್ನೆಲೆಯಲ್ಲಿ ಆ ಮೊಕದ್ದಮೆಯನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಲಾಯಿತು. ದ್ವಿಸದಸ್ಯ ಪೀಠ ಕಳೆದ ವರ್ಷ ತೀರ್ಪಿತ್ತಿತ್ತು. ಈ ಪೀಠ 19.08.2015ರಂದು ತೀರ್ಪು ನೀಡಿದೆ. ಅದರ ಮುಖ್ಯ ಪಠ್ಯ ಹೀಗಿದೆ:

ಚಿತ್ರಮಂದಿರದ ಮಾಲೀಕರು ತಪ್ಪು ಎಸಗಿದ್ದಾರೆ. ಅವರಿಗೆ ಶಿಕ್ಷೆ ಆಗಬೇಕು ನಿಜ. ಆದರೆ ಅವರಿಗೆ ವಯಸ್ಸಾಗಿದೆ (ಒಬ್ಬರಿಗೆ 77 ವರ್ಷ, ಇನ್ನೊಬ್ಬರಿಗೆ 65 ವರ್ಷ), ಈಗಾಗಲೇ ಅವರು ಐದು ತಿಂಗಳು ಜೈಲು ಶಿಕ್ಷೆ ಅನುಭವಿಸಿದ್ದಾರೆ, ಅಷ್ಟು ಸಾಕು. ಅವರು ತಮ್ಮ ತಪ್ಪಿಗಾಗಿ ಅರವತ್ತು ಕೋಟಿ ರೂಪಾಯಿಗಳನ್ನು ದೆಹಲಿ ಸರ್ಕಾರಕ್ಕೆ ನೀಡಬೇಕು. ಆ ಸರ್ಕಾರ ಅದನ್ನು 'ಟ್ರಾಮಾಸೆಂಟರ್' ತೆರೆಯಲು ಬಳಸಬೇಕು. ಅಂದರೆ

59 ಕೊಲೆಗೆ 60 ಕೋಟಿ ರೂಪಾಯಿ ದಂಡ!

ಕರ್ತವ್ಯ ನಿರ್ಲಕ್ಷಿಸಿದ ಸರ್ಕಾರಕ್ಕೆ 60 ಕೋಟಿ ರೂಪಾಯಿ ಬಹುಮಾನ!

ಕೊಲೆಗಡುಕರಿಗೆ ವಯಸ್ಸಾಗಿದೆಯೆಂದು ಬಿಡುಗಡೆ!

ಹದಿನೆಂಟು ವರ್ಷಗಳ ನಂತರ ಬಂದ ಈ ತೀರ್ಪಿನಿಂದ ಸಂತ್ರಸ್ತರು ಆಕ್ರೋಶಗೊಂಡಿದ್ದಾರೆ. ಅವರ ನೋವು, ಆಕ್ರೋಶ ಎಲ್ಲಾ ಪ್ರಮುಖ ಇಂಗ್ಲಿಷ್ ವಾಹಿನಿಗಳಲ್ಲೂ ವ್ಯಕ್ತವಾಗಿದೆ. ಓರ್ವ ತಾಯಿ 17 ವರ್ಷದ ಮಗಳನ್ನು 12 ವರ್ಷದ ಮಗನನ್ನು ಈ ದುರಂತದಲ್ಲಿ ಕಳೆದುಕೊಂಡಿದ್ದರಂತೆ. ತಾನು ಮಕ್ಕಳ ಜೊತೆ ಕಳೆದಿದ್ದಕ್ಕಿಂತ ಹೆಚ್ಚು ಸಮಯವನ್ನು ಕೋರ್ಟಿನಲ್ಲಿ ಕಳೆದ. ಆದರೂ ನ್ಯಾಯ ದೊರಕಲಿಲ್ಲ ಎಂಬುದು ಅವರ ಅಳಲು. ಹೆತ್ತ ಕರುಳಿನ ಸಂಕಟ ವ್ಯಕ್ತವಾಗಿದ್ದು ಹೀಗೆ-

"ಈ ದೇಶದಲ್ಲಿ ಬಡವರಿಗೊಂದು ನ್ಯಾಯ, ಶ್ರೀಮಂತರಿಗೊಂದು ನ್ಯಾಯ. ನ್ಯಾಯಾಲಯದಲ್ಲಿ ಬಡವರಿಗೆ ನ್ಯಾಯ ದೊರಕುವುದಿಲ್ಲ. ನಾನು ನ್ಯಾಯಾಲಯಕ್ಕೆ ಹೋಗಿ ತಪ್ಪು ಮಾಡಿದೆ. ಅದರ ಬದಲು ಅಂದೇ ಬಂದೂಕು ಹಿಡಿದು ಅಪರಾಧಿಗಳನ್ನು ಕೊಲ್ಲಬೇಕಿತ್ತು. ಉಪಹಾರ್ ದುರಂತ ನಡೆದಾಗ ನನಗೆ ದೇವರ ಮೇಲಿನ ನಂಬಿಕೆ ಹೋಯಿತು. ಈ ತೀರ್ಪು ಬಂದನಂತರ ನ್ಯಾಯಾಲಯಗಳ ಮೇಲಿನ ನಂಬಿಕೆಯೂ ಹೋಯಿತು. ನ್ಯಾಯಾಲಯಗಳ ಮೇಲೆ ನಂಬಿಕೆಯಿಟ್ಟು ನಾನು ನನ್ನ ಕಂದಮ್ಮಗಳಿಗೆ ನ್ಯಾಯ ದೊರಕಿಸುತ್ತೇನೆಂದು ಮಾತು ಕೊಟ್ಟಿದ್ದೆ. ಈಗ ನಾನು ಮಾತಿಗೆ ತಪ್ಪಿದ್ದೇನೆ. ನೀನು ವಂಚನೆ ಮಾಡಿದ್ದೀ ಎಂದು ನನ್ನ ಅಂತರಾತ್ಮ ಕೂಗಿಕೂಗಿ ಹೇಳುತ್ತಿದೆ. ನನಗೆ ಪರಿಹಾರಧನ ಬೇಕಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು."

ಇಡೀ ಕಾರ್ಯಕ್ರಮದಲ್ಲಿ ಎದ್ದು ಕಾಣುತ್ತಿದ್ದ ಅಂಶ ಅಂದರೆ ಆ್ಯಂಕರ್ ಮುಖದ ಮೇಲಿನ ಆತಂಕ. ಆ ತಾಯಿಯ ಮಾತುಗಳು ನ್ಯಾಯಾಲಯದ ನಿಂದನೆ ಆಗಬಹುದೇನೋ ಎಂಬ ಭಯ ಕಾಡುವಂತಿತ್ತು. ಅದನ್ನು ಅವರು ವ್ಯಕ್ತಪಡಿಸಿದಾಗ ಆ ತಾಯಿ ಹೇಳಿದ್ದು: "ಸತ್ಯ ಹೇಳುವುದೇ ನಿಂದನೆ ಎನ್ನುವುದಾದರೆ ನಾನು ಶಿಕ್ಷೆಗೆ ಸಿದ್ಧಳಾಗಿದ್ದೇನೆ."

ಹೆತ್ತ ಕರುಳಿನ ನೋವು ಅನುಭವಿಸಿದವರಿಗೆ ಗೊತ್ತು ಆ ನೋವು ಹೀಗೆಲ್ಲ ಮಾತನಾಡಿಸಿದೆ. ಬಡವರಿಗೆ ನ್ಯಾಯ ಸಿಗುವುದಿಲ್ಲ ಎಂಬ ಅನ್ನಿಸಿಕೆ ಸಹಜ. ಆದರೂ ನ್ಯಾಯಾಲಯಗಳು ಇರುವುದರಿಂದಲೇ ಇನ್ನೂ ಸಭ್ಯರು ಸಭ್ಯರಾಗಿ ಉಳಿಯಲು ಸಾಧ್ಯವಾಗಿದೆ. ನೈತಿಕತೆ ಉಸಿರಾಡುತ್ತಿದೆ ಎಂಬುದನ್ನು ಮರೆಯಬಾರದು.

(ಅ) ನೀತಿ : ಅಪರಾಧ ಮಾಡಲು ಬಯಸುವಿರಾ? ಹಾಗಾದರೆ ಹದಿನೆಂಟು ವರ್ಷಕ್ಕೆ ಮುನ್ನ, ಅರವತ್ತು ವರ್ಷದ ನಂತರ ಮಾಡಿ!


■ ಎಚ್ಚೆಲ್ಕೆ

ಮಾನವತೆಯನ್ನು ಹಾಸುಹೊಕ್ಕಾಗಿಸುವ ನೇಕಾರ

ಕಳೆದ ಜುಲೈ ತಿಂಗಳು ವಿ.ಎಸ್.ಎನ್.ಎ ಸಮಾವೇಶದಲ್ಲಿ ಭಾಗವಹಿಸಲು ಅಮೆರಿಕದ ನ್ಯೂಜೆರ್ಸಿಗೆ ಹೋದಾಗ, ಅಲ್ಲಿನ ಅನಿವಾಸಿ ಭಾರತೀಯರು ಮತ್ತು ಹಿರಿಯರಾದ ಗುರು ಬಾಳಿ ಅವರು "ಇಬ್ರಾಹಿಂ ಸುತಾರ ಅವರ ಸಿ.ಡಿಗಳೆಂದರೆ ನನಗೆ ಬಹಳ ಇಷ್ಟ" ಎಂದರು. ಮೂರು ವರ್ಷಗಳ ಹಿಂದೆ ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಗೋವಾದ ಮಡಗಾಂವಗೆ ಹೋದಾಗ "ನಾವು ಹಿಂದಿನ ಬಸವ ಜಯಂತಿಗೆ ಇಬ್ರಾಹಿಂ ಸುತಾರ ಅವರನ್ನು ಕರೆಸಿದ್ದೇವು" ಎಂದು ಖುಷಿಯಿಂದ ಹೇಳಿದರು. ಕಳೆದ ಜುಲೈ 31ರಂದು ಶಿವಮೊಗ್ಗ ಬಳಿಯ ಗೋಣಿಬೀಡಿನ ಶೀಲಸಂಪಾದನಾ ಮಠಕ್ಕೆ ಅನುಭಾವ ನೀಡಲು ಹೋದಾಗ ಹಿರಿಯರೊಬ್ಬರು "ಇಬ್ರಾಹಿಂ ಸುತಾರ ಅವರ ಪ್ರವಚನವನ್ನೂ ಕೇಳಿದ್ದೇನೆ" ಎಂದು ಹೆಮ್ಮೆಯಿಂದ ಹೇಳಿದರು. ಹೀಗೆ ಹೋದಲ್ಲೆಲ್ಲ ಇಬ್ರಾಹಿಂ ಸುತಾರ ಸಾಹೇಬರ ನೆನಪನ್ನು ಜನ ಮಾಡಿಕೊಳ್ಳುತ್ತಲೇ ಇರುತ್ತಾರೆ.

ಇಬ್ರಾಹಿಂ ಸುತಾರ ಸಾಹೇಬರು ಕರ್ನಾಟಕ ಮತ್ತು ಸುತ್ತಮುತ್ತಲಿನ ರಾಜ್ಯಗಳ ಲಕ್ಷಾಂತರ ಜನರ ಪ್ರೀತಿಗೆ ಪಾತ್ರರಾದವರು. ಸಂತನ ವ್ಯಕ್ತಿತ್ವ, ಸಾತ್ವಿಕ ಕಳೆ ಮತ್ತು ದೇವಕಾರುಣ್ಯದಿಂದ ತುಂಬಿದ ಭಾವಪೂರ್ಣ ಧ್ವನಿ ಮತ್ತು ಚಿಂತನೆಗಳಿಂದಾಗಿ ಪಾಮರದಿಂದ ಹಿಡಿದು ಪಂಡಿತರವರೆಗೆ ಸರ್ವಜನಾಂಗದವರನ್ನು ತಮ್ಮ ಹೃದಯಸಾಮ್ರಾಜ್ಯಕ್ಕೆ ಸೇರಿಸಿಕೊಂಡವರು.

ಸದಾ ಶುಭ್ರ ಬಿಳಿ ಜುಬ್ಬಾ ಪೈಜಾಮಾ ಮತ್ತು ಟೋಪಿ ಅವರ ಸಮವಸ್ತ್ರವಾಗಿದೆ. ಸೌಮ್ಯ ಸ್ವಭಾವದ, ಮೃದುಮಾತಿನ, ಬೆಳ್ಳಿಗಡ್ಡದ ಸುಂದರಪುರುಷ ಇಬ್ರಾಹಿಂ ಸಾಹೇಬರ ಸಾತ್ವಿಕ ಸ್ವಭಾವಕ್ಕೆ ಅವರ ಉಡುಪು ಹೇಳಿಮಾಡಿಸಿದಂತಿದೆ. ಸರಳ ಸಜ್ಜನಿಕೆಯಿಂದ ಕೂಡಿದ ಅವರ ಧ್ವನಿಯಲ್ಲಿ ವಿಶ್ವಪ್ರೇಮದ ಲಯವಿದೆ; ಸೌಹಾರ್ದದ ಸೊಬಗಿದೆ; ಮಾತೃವಾತ್ಸಲ್ಯವಿದೆ; ಮಂಗಲಕರ ತರಂಗಗಳಿವೆ. ಅಜಾತಶತ್ರುಗಳಾದ ಅವರನ್ನು ದ್ವೇಷಿಸಲು ಸಾಧ್ಯವೇ ಇಲ್ಲ. ಅವರ ಪ್ರವಚನವನ್ನು ಕೇಳುವುದೇ ಒಂದು ಆನಂದ. ಅವರ ಮಾತಿನ ಆಕರ್ಷಣೆಗೆ ಒಳಗಾಗದವರಿಲ್ಲ.



ಶರಣ ಇಬ್ರಾಹಿಂ ಎಸ್. ಸುತಾರ

ಅವರ ಪ್ರವಚನವು ಏಕಕಾಲಕ್ಕೆ ಭಾವಪೂರ್ಣವೂ ವಿಚಾರಪ್ರಚೋದಕವೂ ಆಗಿರುತ್ತದೆ. 'ಸರ್ವರಿಗಾಗಲಿ ಮಂಗಲ' ಎಂಬುದು ಅವರ ಸ್ಥಾಯಿಭಾವವಾಗಿದೆ. ಇಬ್ರಾಹಿಂ ಸಾಹೇಬರು ಮೈಕ್ ಮುಂದೆ ನಿಂತರೆ ಇಡೀ ವಾತಾವರಣ ಸ್ತಬ್ಧವಾಗುತ್ತದೆ. ಕಿವಿಗಳು ಅವರ ಧ್ವನಿಗಾಗಿ ಕಾತರಗೊಳ್ಳುತ್ತವೆ. ಎಂಥ ಸುಶ್ರಾವ್ಯ ಧ್ವನಿ! ಎಂಥ ಮಾತು! ಅದೆಂಥ ಮನಸೂರೆಗೊಳ್ಳುವ ಹಾಡುಗಾರಿಕೆ! ಸಹಜತೆಯಲ್ಲಿ ಅದೆಂಥ ಅದ್ಭುತ! ಅವರ ಅನುಭಾವದ ಚಿಂತನೆಗೆ ಜನಸಮುದಾಯ ತನ್ನನ್ನೇ ಅರ್ಪಿಸಿಕೊಳ್ಳುವ ಮೂಲಕ ಮಾನವೀಯತೆಯಲ್ಲಿ ಕರಗಿಹೋಗುತ್ತದೆ. ಅವರು ಸಂಸ್ಕೃತ, ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಭಾವಪೂರ್ಣವಾಗಿ ಮತ್ತು ತರ್ಕಬದ್ಧವಾಗಿ ಚಿಂತನೆಗೈಯುವಾಗ ಎದ್ದು ಕಾಣುವ ಸ್ಪಷ್ಟ ಉಚ್ಚಾರದಿಂದಾಗಿ ಅವರ ಪ್ರತಿಯೊಂದು ಶಬ್ದ ಹೊರಹೊಮ್ಮುವಾಗ ಮುತ್ತುಗಳು ಉದುರಿದಂತೆ ಭಾಸವಾಗುತ್ತದೆ. ವೇದ, ಉಪನಿಷತ್ತು, ಶರಣರ ವಚನ, ದಾಸರ ಪದ, ಸಂತರ ವಾಣಿ ಮತ್ತು ಸೂಫಿ ಸಂತರ ಕಥೆಗಳು ಅವರ ಪ್ರವಚನದಲ್ಲಿ ತುಂಬಿಕೊಂಡಿರುತ್ತವೆ. ಅವರು ಏನೇ ಬಳಸಿದರೂ ಅವುಗಳ ತಾರ್ಕಿಕ ಅಂತ್ಯ ಮಾನವೀಯತೆಯ ದರ್ಶನವೇ ಆಗಿರುತ್ತದೆ. ಅವರ ಚಿಂತನೆಯ ಆಳದಲ್ಲಿ ಆರೂಢ ತತ್ತ್ವವೇ ಅಡಗಿದ್ದರೂ ವಚನಗಳ ಜೊತೆಗೂಡುತ್ತ ಮಧುರಭಕ್ತಿಯ ಕಡೆಗೆ ಒಯ್ಯುವುದರಲ್ಲಿ ತಲ್ಲೀನರಾಗುವ ಅವರು ದಾಸರ ಸಮರ್ಪಣಾ ಭಾವ ಮತ್ತು ಸಂತರ ಏಕೋಭಾವದೊಂದಿಗೆ ಸೂಫಿ ಪ್ರೇಮದರ್ಶನ ಮಾಡಿಸುವ ಅನುಭಾವಿಗಳಾಗಿ ನಮ್ಮ ಮನದಲ್ಲಿ ತುಂಬಿ ಹೋಗುತ್ತಾರೆ. ಅಂತೆಯೆ ಜನ ಇವರನ್ನು ಕರ್ನಾಟಕದ ಕಬೀರ ಎಂದೇ ಗುರುತಿಸುವುದು. ಸಂತ ಕಬೀರದಾಸರು ದುಷ್ಟಶಕ್ತಿಗಳನ್ನು ಎದುರು ಹಾಕಿಕೊಂಡು ವೈಚಾರಿಕತೆಯಿಂದ ಕೂಡಿದ ಮಾನವ ಏಕತೆಯನ್ನು ಸಾಧಿಸಿದರೆ ಇವರು ಯಾರನ್ನೂ ಎದುರು ಹಾಕಿಕೊಳ್ಳದೆ ಮಾನವ ಏಕತೆಯನ್ನು ಸಾಧಿಸುವ ಕ್ರಮ ಆಪ್ಯಾಯಮಾನವಾಗಿದೆ.

ಇಬ್ರಾಹಿಂ ಸುತಾರ ಅವರು ಬಡತನಕ್ಕೆ ಅಂಜಿದವರಲ್ಲ. ಶ್ರೀಮಂತರಾಗಬೇಕೆಂಬ ಹಪಾಪಿತನವನ್ನು ಎಂದೂ ಹೊಂದಿದವರಲ್ಲ. ಕೋಮುವಾದಗಳ ಮಾತಿಗೆ ಮೌನವೇ ಅವರ ಉತ್ತರವಾಗಿರುತ್ತದೆ. ಅವರೆಂದೂ ಯಾವು[...] ಮನಸ್ಸನ್ನು ಕೆಡಿಸಿಕೊಂಡವರೇ ಅಲ್ಲ. ಕಳೆದ ಮ[...] ದಶಕಗಳ ಅವಧಿಯಲ್ಲಿ ಅವರು ಬೇಸರಗೊಂಡಿದ್ದನ್ನು [...] ಸುಸ್ತಾಗಿದ್ದನ್ನು ನೋಡಲೇ ಇಲ್ಲ. ಜನರೆಂದರೆ ಅ[...] ಅಷ್ಟೊಂದು ಪ್ರೀತಿ. ಅವರದು ವ್ಯಾವಹಾರಿಕ ಮನ[...] 'ಸಿಕ್ಕಷ್ಟು ಶಿವಾ' ಎಂಬ ಭಾವದವರು. ಜನ[...] ಸಂತೃಪ್ತಗೊಳಿಸುವ ಮೂಲಕ ಉಂಟಾಗುವ ತೃಪ್ತಿ[...] ಅವರ ದೊಡ್ಡ ಬಂಡವಾಳ. ಅವರಿಗೆ ನೆಮ್ಮದಿಯ ಮ[...] ಯಾವುದೂ ಮುಖ್ಯ ಎನಿಸುವುದಿಲ್ಲ. ಬಟ್ಟೆ ನೇಯುವು[...] ಬಲ್ಲ ಅವರು ಅಷ್ಟೇ ಸಲೀಸಾಗಿ ಜನರ ಮನ[...] ನೇಯಬಲ್ಲರು. ಏಕತಾ ಗೀತಗಳಿಂದ ಕೂಡಿದ ಅ[...] ಮಧುರ ವಾಣಿಯನ್ನು ಕೇಳಿದ ಜನರು ಭಾವಪರವಶ[...] ಅವರ ಕಾಲಿಗೆ ಎರಗುವುದನ್ನು ಕಂಡಿದ್ದೇನೆ. ಆಗ ಅ[...] ಎರಡೂ ಕೈ ಎತ್ತಿ ಆಕಾಶದ ಕಡೆ ನೋಡುತ್ತ ಇದು[...] ದೇವರಿಗೆ ಸಲ್ಲುತ್ತದೆ ಎಂಬ ರೀತಿಯಲ್ಲಿ ನಿರ್ಲಿಪ್ತ[...] ವುದನ್ನೂ ನೋಡಿದ್ದೇನೆ. ಅವರ ವ್ಯಕ್ತಿತ್ವದಲ್ಲಿ ಅಹಂಕಾ[...] ಲವಲೇಶವೂ ಇಲ್ಲ. ತಾನು ಎಲ್ಲರಿಗಿಂತ ಕಿರಿಯ [...] ಮನಸ್ಥಿತಿಯಲ್ಲೇ ಅವರು ಆನಂದಮಯವಾಗಿರುತ್ತಾ[...]

ಮನುಷ್ಯರು ಸಹಜವಾಗಿಯೇ 'ಇವ ನಮ್ಮವ, [...] ನಮ್ಮವ, ಇವ ನಮ್ಮವ' ಎಂಬ ಜಾತ್ಯತೀತ ಭಾವ[...] ಹೊಂದಿರುತ್ತಾರೆ. ಆದರೆ ದುಷ್ಟಶಕ್ತಿಗಳು ಅವ[...] ಪ್ರಜ್ಞಾಪೂರ್ವಕವಾಗಿ 'ಇವನಾರವ, ಇವನಾರವ, ಇವನಾ[...] ಎಂದು ಕೇಳುವಂತೆ ಮಾಡುತ್ತವೆ. ಇಂಥ ವಿ[...] ವಾತಾವರಣದಲ್ಲಿ ಏಕತೆಯ ನಾದ ಹೊರಡಿ[...] ಮನುಷ್ಯರಲ್ಲಿ ಸಹಜತೆಯನ್ನು ತರುವ ಇಬ್ರಾಹಿಂ ಸು[...] ಅವರು ಜನಮಾನಸದಲ್ಲಿ ಮಾನವೀಯತೆಯ [...] ಬೆಳೆಯುವ ಕೃಷಿಕರಾಗಿದ್ದಾರೆ. ಆ ಮಾನವೀಯತೆಯ[...] ಹಾಸುಹೊಕ್ಕಾಗಿಸುವ ನೇಕಾರರಾಗಿದ್ದಾರೆ. ನಮ್ಮ ಶರೀರ[...] ಮನುಷ್ಯತ್ವದ ಘಟವಾಗಿಸುವ ಕುಂಬಾರರಾಗಿದ್ದಾರೆ. ನ[...] ಮನಸ್ಸನ್ನು ತೊಳೆಯುವ ಮಡಿವಾಳರಾಗಿದ[...] ನಮಗರಿಯದಂತೆಯೆ ನಮ್ಮ ಅಹಂಕಾರವನ್ನು ಚು[...] ಸೋನಾರರಾಗಿದ್ದಾರೆ. ನಮ್ಮನ್ನು ಏಕಾಗ್ರತೆಗೆ ಒಯ[...] ಗಾರುಡಿಗರಾಗಿದ್ದಾರೆ. ಅವರ ಪವಿತ್ರ ಮಾತುಗಳು ನ[...] ಕಿವಿಗಳನ್ನು ಸ್ವಚ್ಛಗೊಳಿಸುತ್ತವೆ. ನಮ್ಮ ನೋಡುವ ದೃಷ್ಟಿ[...] ಸರಿಮಾಡುತ್ತವೆ. ನಾವು ಪರಿಪೂರ್ಣತೆಯ ಕ[...] ಹೋಗಬೇಕಾದ ದಾರಿಯನ್ನು ತೋರಿಸುತ್ತವೆ. ಒ[...] ದೇವರು, ಒಂದೇ ಜಗತ್ತು, ಒಂದೇ ಮಾನವ [...] ಎಂಬುದನ್ನು ಸಾರುತ್ತವೆ.

ಇಂಥವರಿಂದಲೇ ಬದುಕು ಹಸನಾಗು[...] ಇಂಥವರಿಂದಲೇ ಭೂಮಿ ಪುಳಕಿತಗೊಳ್ಳು[...] ಇಂಥವರಿಂದಲೇ ವರ್ತಮಾನ ಸಹ್ಯವಾಗು[...] ಇಂಥವರಿಂದಲೇ ಭವಿಷ್ಯ ಸುಂದರವಾಗುತ್ತದೆ. ಇಬ್ರಾ[...] ಸುತಾರರಂಥ ಮಾನವತಾವಾದಿಗಳು ಯಾರಿಗೆ ಬೇಡ? ಅವರಿಗೆ ಶುಭವಾಗಲಿ, ಅವರು ನೂರ್ಕಾಲ ಬಾಳಲಿ. ಜಗತ್ತಿಗೆ ಪ್ರೀತಿಯ ಧಾರೆ ಎರೆಯಲಿ.



■ ರಂಜಾನ್ ದರ್ಗಾ

ಸಾಮರಸ್ಯದ ಸಂದೇಶ

ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮಹಾಲಿಂಗಪುರದ ಇಬ್ರಾಹಿಂ ಎಸ್. ಸುತಾರ ಅವರು 1940ನೇ ಆಗಸ್ಟ್ 10ರಂದು ಮಹಾಲಿಂಗಪುರದ ಬಡ ಕುಟುಂಬದಲ್ಲಿ ಜನಿಸಿದರು. 1970ರಲ್ಲಿ 'ಭಾವೈಕ್ಯ ಜನಪದ ಸಂಗೀತ ಮೇಳ' ಸ್ಥಾಪಿಸಿದರು. ಕಳೆದ 45 ವರ್ಷಗಳಿಂದ ನಾಡಿನಾದ್ಯಂತ ಪ್ರತಿವರ್ಷ ನೂರಾರು ಕಡೆ ಭಾವೈಕ್ಯವನ್ನು ಸಾರುವ ಪ್ರವಚನ ಮತ್ತು ಭಜನೆ ಮಾಡುತ್ತ ಜನಪ್ರಿಯರಾಗಿದ್ದಾರೆ.

'ಪರಮಾರ್ಥ ಲಹರಿ' ಎಂಬ ತತ್ತ್ವಪದಗಳ ಸಂಗ್ರಹ ಮತ್ತು 'ತತ್ತ್ವಜ್ಞಾನಕ್ಕೆ ಸರ್ವರೂ ಅಧಿಕಾರಿಗಳು' ಎಂಬ ಚಿಂತನಗ್ರಂಥ ರಚಿಸಿದ್ದಾರೆ. 'ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ' ಎಂಬ ಹಾಡು ಪ್ರಸಿದ್ಧ ಭಾವೈಕ್ಯ ಪ್ರಾರ್ಥನೆ ಆಗಿದೆ.

ಪ್ರಶ್ನೋತ್ತರಗಳ ಜೊತೆಗೆ ತತ್ತ್ವಪದಗಳನ್ನು ಹಾಡುವಂಥ ತಮ್ಮ ಆರು ಜನ ಸಹಕಲಾವಿದರೊಂದಿಗೆ 'ಭಾವೈಕ್ಯ ಭಕ್ತಿ ರಸಮಂಜರಿ', 'ಅಧ್ಯಾತ್ಮ ಸಂವಾದ ತರಂಗಿಣಿ' ಮತ್ತು 'ಗೀತ ಸಂವಾದ ತರಂಗಿಣಿ' ಎಂಬ ಹೆಸರಿನ ಕಲಾಪ್ರಕಾರಗಳ ಜನಕರಾಗಿದ್ದಾರೆ.

ಇವರ 20 ಧ್ವನಿಸುರುಳಿಗಳು ಜನಮನಸೂರೆಗೊಂಡಿವೆ. ಅಧ್ಯಾತ್ಮ ಸಂವಾದ ತರಂಗಿಣಿ, ಜಗವೊಂದು ಧರ್ಮಶಾಲೆ, ಮೊದಲು ಮಾನವನಾಗು, ನೀತಿವಂತನಾಗು, ಭಾವೈಕ್ಯ ಎಂದರೇನು? ಮುಂತಾದವು ಅವರ ಧ್ವನಿಸುರುಳಿಗಳಾಗಿವೆ.

ಭಾರತ ಏಕತಾ ಆಂದೋಲನದ ರೂವಾರಿ ಮತ್ತು ಸಾಮಾಜಿಕ ಕಾರ್ಯಕರ್ತರಾದ ಮಹಾದೇವ ಹೊರಟ್ಟಿ ಅವರು 1986ರಲ್ಲಿ ಆರಂಭಿಸಿದ ಬಸವ ಶಾಂತಿ ಯಾತ್ರೆ ಮತ್ತು ಭಾರತ ಏಕತಾ ಆಂದೋಲನದಲ್ಲಿ ಸತತವಾಗಿ ಭಾಗವಹಿಸುತ್ತ ಸಾವಿರಾರು ಕಿಲೋಮೀಟರ್ ಪಾದಯಾತ್ರೆಯಲ್ಲಿ ಹಳ್ಳಿ, ಪಟ್ಟಣ ಮತ್ತು ನಗರಗಳೆನ್ನದೆ ಭಾವೈಕ್ಯದ ಹಾಡುಗಳನ್ನು ಹಾಡುತ್ತ ಹಾಗೂ ವಚನ ಪ್ರವಚನ ಮಾಡುತ್ತ ಜನಮನದಲ್ಲಿ ನೆಲೆಸಿದ್ದಾರೆ. ಕರ್ನಾಟಕ ರಾಜ್ಯವಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶ, ದೆಹಲಿ, ಒಡಿಶಾ, ರಾಜಸ್ಥಾನ, ಗೋವಾ ಮುಂತಾದ ಕಡೆಗಳಲ್ಲಿ ಮತ್ತು ದೂರದರ್ಶನ ಕೇಂದ್ರಗಳಲ್ಲಿ ಭಾವೈಕ್ಯ ಭಕ್ತಿ ರಸಮಂಜರಿ ಕಾರ್ಯಕ್ರಮಗಳ ಮೂಲಕ ಸಾಮರಸ್ಯದ ಸಂದೇಶ ನೀಡಿದ್ದಾರೆ.

1984ರಲ್ಲಿ ಟ್ರಸ್ಟ್ ಸ್ಥಾಪಿಸಿ ಯೋಗಾಸನ ಮತ್ತು ಸಾಕ್ಷರತಾ ಶಿಬಿರಗಳನ್ನು ನಡೆಸಿದ್ದಾರೆ. ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ, ಬೋರ್‌ವೆಲ್, ರಸ್ತೆ ನಿರ್ಮಾಣ, ಕಲ್ಯಾಣಮಂಟಪ, ಯಾತ್ರಿ ನಿವಾಸ ಮತ್ತು ಶಾಲಾ ಕೊಠಡಿಗಳ ಸಹಾಯಾರ್ಥ 'ಭಾವೈಕ್ಯ ರಸಮಂಜರಿ' ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ದೇವದಾಸಿ ಪದ್ಧತಿ ನಿರ್ಮೂಲನಾ ಆಂದೋಲನ ಮತ್ತು ಮುಧೋಳ ತಾಲೂಕು ಕನ್ನಡ ಜಾಗೃತಿ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ಸರ್ಕಾರ ಇವರ ಪ್ರತಿಭೆಯನ್ನು ಗೌರವಿಸಿ 1995ರಲ್ಲಿ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದೆ. ಕಥಾಕೀರ್ತನ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 2009-10ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಗೌರವ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಿದೆ.

ಇಬ್ರಾಹಿಂ ಸುತಾರ ಅವರ ಗೆಳೆಯರು, ಅಭಿಮಾನಿಗಳು ಮತ್ತು ಕೋಮುಸೌಹಾರ್ದದ ಪ್ರತಿಪಾದಕರೆಲ್ಲ ಸೇರಿ ಇಬ್ರಾಹಿಂ ಸುತಾರ ಅವರ 75ನೇ ಜನ್ಮದಿನ ಆಚರಿಸಿ ಹಮ್ಮಿಣಿ ಅರ್ಪಿಸಲು ಮತ್ತು ಅಭಿನಂದನಾ ಗ್ರಂಥ ಬಿಡುಗಡೆ ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ. ಇಬ್ರಾಹಿಂ ಸುತಾರ ಅವರ ಮೊಬೈಲ್: 9845282402.

ನಿರ್ಭಾಗ್ಯೆ ಅರುಣಾ ಶಾನಭಾಗ

ಬದುಕು ಕಟ್ಟಿಕೊಳ್ಳಲೆಂದು ಮುಂಬೈ ಸೇರಿ
ನಮ್ಮೂರ ಅರುಣಾಳು ಸೇರಿದ್ದು ಗೋರಿ
ಆ ಧೂರ್ತ ನಿಷ್ಕರುಣಿ ಕ್ರೂರ ಕಾಮಾಂಧ
ನಿರ್ದೋಷಿ ಅರುಣಾಳ ನವೆನವೆಸಿ ಕೊಂದ

ಅರುಣಾಳ ಬಾಳಿನಲ್ಲಿ

ಹತಭಾಗ್ಯೆ ಅರುಣಾಳ ಬಾಳಿನಲಿ ಎಲ್ಲ
ಕೊನೆತನಕ ಆ ಅರುಣ ಉದಿಸಲೇ ಇಲ್ಲ
ನಲ್ವತ್ತೆರಡು ವರ್ಷಗಳು ಕತ್ತಲೊಳು ನವೆದು
ಹೊರಟೇಹೋದಳು ದೂರ ಇತಿಹಾಸ ಬರೆದು

ಯಃಕಶ್ಚಿತ್ ಸ್ತ್ರೀವು!

ನಾರಿ ದೇವತೆಯೆಂಬ ಭಾರದಿ ಕೇಳಿ
ನಿಂತಿದೆಯೆ ಈ ಮಹಿಳೆಯರ ಮೇಲಿನ ದಾಳಿ?
ವರದಕ್ಷಿಣೆ ಸಾವು ಅತ್ಯಾಚಾರದ ಸಾವು
ಪಿಡಿಯುತಿವೆ ಬಲ್ಲಿರಾ ಯಃಕಶ್ಚಿತ್ ಸ್ತ್ರೀವು!

ನಿತ್ಯದ ಗೋಳು

ದಿಟ್ಟ ನಡೆ ದಿಟ್ಟ ನುಡಿಯ ಹೆಣ್ಣುಗಳ ಬಾಳು
ಆಗಿಹುದು ಕಾಣಿರೋ ಬರೆ ಗೋಳು ಗೋಳು
ಪುರುಷ ಪ್ರಧಾನದೀ ವ್ಯವಸ್ಥೆಯೊಳಗೆ
ನಾರಿಯರ ಯೋಚಿಸಿರಿ ಬಾಳುಂಟೆ ನಿಮಗೆ?



ಅರಿತೆ ಕೊರತೆ

ಈ ಹಿಂಸೆಗಳಿಗೆಲ್ಲ ಕಾರಣವ ಅರಿತೆ
ಒಂದೇ ಒಂದು ಮಾನವೀಯತೆಯ ಕೊರತೆ
ಈ ಕೊರತೆ ನೀಗಿಸಲು ಮನವಿರುವ ಒಬ್ಬ
ನಾಯಕನು ಬಂದಾಗ ಭಾರತದಿ ಹಬ್ಬ

ಮೀಸಲಾತಿಯೆಂಬ ಕೋತಿ

ಮಹಿಳಾ ಮೀಸಲಾತಿ ಮಸೂದೆ ನೋಡಿ
ಪಂಜರಕೆ ನೂಕಿಹರು ಕೋತಿಯನು ಮಾಡಿ
ಚುನಾವಣೆ ಸಮಯಕ್ಕೆ ಹೊರಗೆಳೆದು ತಂದು
ಗಲ್ಲಿಗಲ್ಲಿಗಳಲ್ಲಿ ಕುಣಿಸುವರು ಇಂದು

ಅಮಾನುಷ ಹತ್ಯೆ

ಮರ್ಯಾದಾ ಹತ್ಯೆಯೆಂಬ ಅಮಾನುಷ ಹತ್ಯೆ
ನಡೆಯುತಿವೆ ಬಲ್ಲಿರಾ ಅಲ್ಲಲ್ಲಿ ನಿತ್ಯ
ಹೃದಯವೇ ಇಲ್ಲದಿರೆ ಹೃದಯಕ್ಕೆ ಗಾಯ
ಆಗುವುದು ಇನ್ನೆಂತು ಕ್ರೌರ್ಯವೇ ನ್ಯಾಯ

ಮಾನವರಾಗೋಣ

ನಾವೆಲ್ಲ ಮಹಾತಾಯಿಯ ಆ ಒಡಲಿನಿಂದ
ಮಾನವರ ರೂಪದೊಳು ಬಂದವರೊ ಚಂದ
ಮಾನವರು ಆಗಿಯೇ ಬಾಳನ್ನು ಸವೆಸಿ
ಹೋಗೋಣ ಆಗದಾ ಒಂದು ದಿನ ಗತಿಸಿ?

ಆಗಿಹುದು ಪತ್ತೆ


ಈ ನಮ್ಮ ಮಹಾ ಭಾರತದಲ್ಲಿ ಗೊತ್ತೆ
ತೀರಾ ಅಗ್ಗವು ಎರಡು ಆಗಿಹುದು ಪತ್ತೆ
ಈ ನಮ್ಮ ಮಹಿಳೆಯರ ಹಿರಿದಾದ ಮಾನ
ಇನ್ನೊಂದು ಇವರದೇ ಆಗಿರುವ ಪ್ರಾಣ

■ ವಿಡಂಬ[...]

ಕೆಲವು ಪಾಠಗಳು



ಇಬ್ನೆ ಇನ್ಶಾ ಪಾಕಿಸ್ತಾನದ ಪ್ರಸಿದ್ಧ ಎಡಪಂಥೀಯ ಲೇಖಕ. ಕಾವ್ಯ, ಹಾಸ್ಯ ಸಾಹಿತ್ಯ, ಪ್ರವಾಸಕಥನ ಮುಂತಾದ ಪ್ರಕಾರಗಳಲ್ಲಿ ಕೃಷಿ ಮಾಡಿ ಹೆಸರುವಾಸಿಯಾದರು. ಅವರ ನಿಜವಾದ ಹೆಸರು ಶೇರ್ ಮೊಹಮ್ಮದ್ ಖಾನ್. ಉರ್ದು ಹಾಸ್ಯ ಮತ್ತು ವ್ಯಂಗ್ಯ ಸಾಹಿತ್ಯದಲ್ಲಿ ಅವರ ಶೈಲಿ ಅನನ್ಯವೆನಿಸಿದೆ. ಇದಕ್ಕೆ ಕಾರಣ ಅವರ ವಸ್ತುನಿಷ್ಠತೆ, ಸಹಜತೆ ಮತ್ತು ನಿಸ್ಸಂಕೋಚ ಪ್ರವೃತ್ತಿ. ಅವರ 'ಉರ್ದುವಿನ ಅಂತಿಮ ಪುಸ್ತಕ' ಎನ್ನುವ ಪುಸ್ತಕ ಪಠ್ಯ ಪುಸ್ತಕದ ಧಾಟಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಭೂಗೋಳ, ಇತಿಹಾಸ, ವ್ಯಾಕರಣ, ಗಣಿತ ಮುಂತಾದ ವಿಭಿನ್ನ ವಿಷಯಗಳ ಕುರಿತ ಪಾಠ ಮತ್ತು ಪ್ರಶ್ನಾವಳಿಗಳಿವೆ. ಇಂಶಾ ಅವರ ವ್ಯಂಗ್ಯದಲ್ಲಿ ಕಂಡುಬರುವ ರೋಷ ಸಣ್ಣ ಪುಟ್ಟ ವಿಷಯಗಳಿಗೆ ಸಂಬಂಧಿಸಿದ್ದಲ್ಲ, ದೇಶ ವಿಭಜನೆ, ಹಿಂದುಸ್ತಾನ್ ಮತ್ತು ಪಾಕಿಸ್ತಾನ್ ಧೋರಣೆ, ಕಾಯ್ದೆ ಆಜಮ್ ಜಿನ್ನಾ, ಮುಸ್ಲಿಮ್ ಅರಸರ ಆಡಳಿತ, ಸ್ವಾತಂತ್ರ್ಯದ ಮುಖವಾಡ, ಶಿಕ್ಷಣ ವ್ಯವಸ್ಥೆ, ತೋರಿಕೆಯ ನೈತಿಕತೆ, ಭ್ರಷ್ಟ ರಾಜಕೀಯ ಮುಂತಾದ ವಿಷಯಗಳು ಅವರ ವ್ಯಂಗ್ಯದ ವಸ್ತುವಾಗಿವೆ.



ನಮ್ಮ ದೇಶ

ಇರಾನ್‌ನಲ್ಲಿ ಯಾರು ಇರುವರು?"

ಇರಾನ್‌ನಲ್ಲಿ ಇರಾನಿಯರು ಇರುವರು."

ಇಂಗ್ಲೆಂಡ್‌ನಲ್ಲಿ ಇರುವವರು ಯಾರು?"

ಇಂಗ್ಲೆಂಡ್‌ನಲ್ಲಿ ಇರುವವರು ಆಂಗ್ಲರು."

ಫ್ರಾನ್ಸ್‌ನಲ್ಲಿ ಯಾರು ಇರುವರು?"

ಫ್ರಾನ್ಸ್‌ನಲ್ಲಿ ಫ್ರೆಂಚ್‌ರು ಇರುವರು."

ಇದು ಯಾವ ದೇಶ?"

ಇದು ಪಾಕಿಸ್ತಾನ್."

ಇದರಲ್ಲಿ ಪಾಕಿಸ್ತಾನಿಯರು ವಾಸವಾಗಿರಬಹುದು."

ಇಲ್ಲ, ಇಲ್ಲಿ ಪಾಕಿಸ್ತಾನಿಯರು ಇರುವುದಿಲ್ಲ; ಇಲ್ಲಿ ...ನ ಇರುವರು. ಇಲ್ಲಿ ಪಂಜಾಬಿ ಜನ ಇರುವರು. ...ಂಗಾಲಿ ಜನ ಇರುವರು. ಇಲ್ಲಿ ಈ ಜನ ಇರುವರು. ... ಇರುವರು."

...ದರೆ ಪಂಜಾಬಿಯರು ಪಂಜಾಬಿನಲ್ಲೂ ಇದ್ದಾರೆ. ...ಜನ ಭಾರತದಲ್ಲೂ ಇದ್ದಾರೆ. ಬಂಗಾಲಿಗಳು ಭಾರತದಲ್ಲೂ ಇದ್ದಾರೆ. ಮತ್ತೆ ಈ ಬೇರೆ ದೇಶ ಏಕೆ ನಿರ್ಮಿಸಿದರು?"

"ತಪ್ಪಾಯಿತು. ಕ್ಷಮಿಸಿರಿ. ಇನ್ನೆಂದೂ ನಿರ್ಮಿಸುವುದಿಲ್ಲ."

-೦-

ಪಾಕಿಸ್ತಾನ್

ಗಡಿಗಳು: ಪಾಕಿಸ್ತಾನದ ಪೂರ್ವದಲ್ಲಿ ಸೀಟೊ ಇದೆ, ಪಶ್ಚಿಮದಲ್ಲಿ ಸಂಟೊ ಇದೆ, ಉತ್ತರದಲ್ಲಿ ತಾಷ್ಕೆಂಟ್ ಮತ್ತು ದಕ್ಷಿಣದಲ್ಲಿ ನೀರು ಇದೆ. ಅಂದರೆ ಪಲಾಯನಕ್ಕೆ ದಾರಿ ಎಲ್ಲೂ ಇಲ್ಲ.

ಪಾಕಿಸ್ತಾನದಲ್ಲಿ ಎರಡು ಭಾಗಗಳಿವೆ - ಪೂರ್ವ ಪಾಕಿಸ್ತಾನ್ ಮತ್ತು ಪಶ್ಚಿಮ ಪಾಕಿಸ್ತಾನ್. ಇವು ಪರಸ್ಪರ ತೀರ ದೂರದಲ್ಲಿವೆ. ಅದೆಷ್ಟು ದೂರ ಎನ್ನುವುದರ ಕಲ್ಪನೆ ಈಗ ಸ್ಪಷ್ಟವಾಗುತ್ತಿದೆ. ಎರಡಕ್ಕೂ ತನ್ನದೇ ಆದ ಗಡಿಗಳಿವೆ.

ಪಶ್ಚಿಮ ಪಾಕಿಸ್ತಾನದ ಉತ್ತರಕ್ಕೆ ಪಂಜಾಬ, ದಕ್ಷಿಣಕ್ಕೆ ಸಿಂಧ, ಪಶ್ಚಿಮಕ್ಕೆ ಹಿಂದುಸ್ತಾನ್ ಮತ್ತು ಪಶ್ಚಿಮಕ್ಕೆ ಗಡಿ ಪ್ರಾಂತ ಹಾಗೂ ಬಲೂಚಿಸ್ತಾನ್‌ಗಳಿವೆ. ಮಹನೀಯರೇ, ನಿಜವಾದ ಪಾಕಿಸ್ತಾನ್ ಇರುವುದಾದರೂ ಎಲ್ಲಿ? ಇದೆಯಾದರೂ ಇಲ್ಲವೋ? ಈ ವಿಷಯವಾಗಿ ಇತ್ತೀಚೆಗೆ ಸಂಶೋಧನೆ ನಡೆಯುತ್ತಿದೆ.

ಪೂರ್ವ ಪಾಕಿಸ್ತಾನದ ನಾಲ್ಕೂ ನಿಟ್ಟಿನಲ್ಲಿ ಈಗೀಗ ಪೂರ್ವ ಪಾಕಿಸ್ತಾನವೇ ಇದೆ.

-೦-

ಹಿಂದೂಸ್ತಾನ್

ಇದು ಹಿಂದೂಸ್ತಾನ್. ಗಾಂಧೀಜಿ ಇಲ್ಲೇ ಜನಿಸಿದ್ದರು. ಇಲ್ಲಿ ಅವರು ತುಂಬ ಗೌರವಕ್ಕೆ ಪಾತ್ರರಾಗಿದ್ದರು. ಅವರನ್ನು ಮಹಾತ್ಮ ಎನ್ನುತ್ತಿದ್ದರು. ಹೀಗಾಗಿ ಅವರನ್ನು ಕೊಂದು ಇಲ್ಲೇ ದಫನ್ ಮಾಡಲಾಯಿತು ಮತ್ತು ಅವರ ಸಮಾಧಿ ನಿರ್ಮಿಸಲಾಯಿತು. ಬೇರೆ ದೇಶದ ಗಣ್ಯರು ಇಲ್ಲಿಗೆ ಆಗಮಿಸುತ್ತಾರೆ ಮತ್ತು ಅದರ ಮೇಲೆ ಹೂಗಳನ್ನು ಅರ್ಪಿಸುತ್ತಾರೆ. ಗಾಂಧೀಜಿಯವರ ಕೊಲೆಯಾಗಿರದಿದ್ದರೆ ಇಡೀ ಹಿಂದೂಸ್ತಾನದಲ್ಲಿ ಶ್ರದ್ಧಾವಂತರಿಗೆ ಹೂಗಳನ್ನು ಅರ್ಪಿಸಲು ಸ್ಥಳವೇ ಇದ್ದಿರಲಿಲ್ಲ, ಈ ಸಮಸ್ಯೆ ನಾವು, ಅಂದರೆ ಪಾಕಿಸ್ತಾನಿಯರೂ ಎದುರಿಸಿದ್ದೆವು. ನಾವು ಕಾಯ್ದೆ ಆಜಮ್‌ರಿಗೆ ಋಣಿಯಾಗಿರಬೇಕು. ಕಾರಣ ಅವರು ತಾವಾಗಿಯೇ ಸತ್ತು ಹೋದರು ಹಾಗೂ ಪ್ರವಾಸಿಗರಿಗೆ ಹೂಗಳನ್ನು ಅರ್ಪಿಸುವುದಕ್ಕೆ ಒಂದು ಸ್ಥಳ ಸಹ ನಿರ್ಮಿಸಿಹೋದರು. ಇಲ್ಲದಿದ್ದರೆ ಪ್ರಾಯಶಃ ನಾವು ಅವರನ್ನು ಕೊಲ್ಲುವುದು ಅನಿವಾರ್ಯವಾಗುತ್ತಿತ್ತು.

ಹಿಂದೂಸ್ತಾನದ ಪವಿತ್ರ ಪ್ರಾಣಿ ಗೋವು. ಹಿಂದೂಗಳು ಅದರದೇ ಹಾಲು ಕುಡಿಯುತ್ತಾರೆ, ಅದರ ಸಗಣಿಯಿಂದಲೇ ನೆಲ ಸಾರಿಸುತ್ತಾರೆ. ಆದರೆ ಮನುಷ್ಯನನ್ನು ಮಾತ್ರ ಹಿಂದೂಸ್ತಾನದಲ್ಲಿ ಪವಿತ್ರ ಪ್ರಾಣಿ ಎಂದು ಪರಿಗಣಿಸಲ್ಪಡುವುದಿಲ್ಲ.

ಮೂಲ ಉರ್ದು: ಇಬ್ನೆ ಇನ್ಶಾ

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

...ಂಜೀವ್ ಭಟ್: ಹೋರಾಟ, ಕವನ

...ಜರಾತ್‌ನಲ್ಲಿ ಐಪಿಎಸ್ ಅಧಿಕಾರಿಯಾಗಿ ...ಸಲ್ಲಿಸುತ್ತಿದ್ದ ಸಂಜೀವ್ ಭಟ್ 2002ರ ...ಾತ್ ಮಾರಣಹೋಮದಲ್ಲಿ ನರೇಂದ್ರ ...ಯ ಪಾತ್ರವಿದೆ ಎಂದು ಆರೋಪಿಸಿದ್ದರು. ... ಅಲ್ಲ, ಮುಖ್ಯಮಂತ್ರಿಯವರ ಮನೆಯಲ್ಲಿ ... ಪೊಲೀಸ್ ಉನ್ನತಾಧಿಕಾರಿಗಳ ಸಭೆಯಲ್ಲಿ ...ೂಗಳಿಗೆ ತಮ್ಮ ಆಕ್ರೋಶ ತೀರಿಸಿಕೊಳ್ಳಲು ...ವು ಮಾಡಿಕೊಡಿ ಎಂದು ಮೋದಿಯೇ ...ದ್ದರೆಂದು ಸುಪ್ರೀಂಕೋರ್ಟಿಗೆ ಅಫಿಡವಿಟ್ ಸಲ್ಲಿಸಿದ್ದರು. ಅವರನ್ನು 2012ರಲ್ಲಿ ...ಯಿಂದ ಅಮಾನತುಗೊಳಿಸಿದ ಸರ್ಕಾರ ಈಗ ...ನ್ನು ಸೇವೆಯಿಂದ ವಜಾಗೊಳಿಸಿದೆ. ಸತ್ಯದ ...ುತ್ತಿದವರಿಗೆ ಭವಿಷ್ಯದ ಭಾರತದಲ್ಲಿ ಕಾದಿರುವ ...ಂತಹದೆಂಬುದನ್ನು ತೀಸ್ತಾ ಮತ್ತು ಸಂಜೀವ್ ಅವರಿಗೊದಗಿದ ಪರಿಸ್ಥಿತಿಯೇ ...ುತ್ತಿರುವಂತಿದೆ. ಇದರ ನಡುವೆ ಫೇಸ್‌ಬುಕ್ ...ಸಂಜೀವ್ ಭಟ್ ಹಂಚಿಕೊಂಡ ಕವಿತೆಯ ...ಾದ ಇದು

...ಗೆ ಸಸದೇ ತತ್ವವಿದೆ, ಅಧಿಕಾರವಿಲ್ಲ
...ಬಳಿ ಅಧಿಕಾರವಿದೆ ತತ್ವವಿಲ್ಲ
...ವು ಹೀಗೇ
...ವು ಹಾಗೇ
...ಜಿ ಹೊಂದಾಣಿಕೆಯ ಪ್ರಶ್ನೆಯೇ ಇಲ್ಲ
...ಾಗಿ ಶುರುವಾಗಲಿ ಹೋರಾಟ..

...ಬಳಿ ಸತ್ಯವಿದೆ, ಬಲವಿಲ್ಲ
...ಬಳಿ ಬಲವಿದೆ, ಸತ್ಯವಿಲ್ಲ
...ವು ಹೀಗೇ
...ವು ಹಾಗೇ
...ಜಿ ಹೊಂದಾಣಿಕೆಯ ಪ್ರಶ್ನೆಯೇ ಇಲ್ಲ
...ಾಗಿ ಶುರುವಾಗಲಿ ಹೋರಾಟ..



ನೀನು ನನ್ನ ತಲೆಬುರುಡೆಯ ಒಡೆಯಬಹುದು
ನಾನು ಹೋರಾಡುತ್ತೇನೆ
ನೀನು ನನ್ನೆಲುಬುಗಳ ಪುಡಿಪುಡಿಯಾಗಿಸಬಹುದು
ನಾನು ಹೋರಾಡುತ್ತೇನೆ
ನನ್ನ ಜೀವಂತ ದಹಿಸೀಯೆ ನೀನು
ಆದರೂ ನಾ ಹೋರಾಡುತ್ತೇನೆ
ನರನಾಡಿಗಳಲಿ ಸತ್ಯ ಹರಿಯುತಿರುವಾಗ
ನಾನು ಹೋರಾಡುತ್ತೇನೆ
ಶಕ್ತಿಯ ಪ್ರತಿ ಕಣದಿಂದ ನಿನ್ನೊಡನೆ
ನಾನು ಹೋರಾಡುತ್ತೇನೆ
ಉಸಿರಿನ ಕೊನೆಯ ಚಣದವರೆಗು
ನಾನು ಹೋರಾಡುತ್ತೇನೆ

ಸುಳ್ಳುಗಳಿಂದ ಕಟ್ಟಿದ
ನಿನ್ನರಮನೆಯು ಕುಸಿದು ಬೀಳುವವರೆಗು
ನಾನು ಹೋರಾಡುತ್ತೇನೆ
ನಿನ್ನ ಸುಳ್ಳುಗಳಿಂದ ನೀ ಪೂಜಿಸಿದ ದೆವ್ವವು
ನನ್ನ ಸತ್ಯದೇವತೆಯೆದುರು ಮಂಡಿಯೂರುವವರೆಗು
ನಾ ಹೋರಾಡುತ್ತೇನೆ..

ಕನ್ನಡಕ್ಕೆ: ಡಾ. ಎಚ್.ಎಸ್.ಅನುಪಮಾ

ಮಾದೇಗೌಡರ ಇಬ್ಬಂದಿತನ

06 ⏮

ಆದಾಯ-ಖರ್ಚುಗಳ ವಿವರವನ್ನು ಬಿಡುಗಡೆ ಮಾಡಿದ್ದು.

ರಾಜು ಲೆಕ್ಕದ ಪ್ರಕಾರ ಒಟ್ಟು 14 ಮಳಿಗೆಗಳಿಂದ ತಿಂಗಳಿಗೆ ಕೇವಲ 56,275 ಬಾಡಿಗೆ ಬರುತ್ತದಂತೆ. ಗಾಂಧಿಭವನ ಸಭಾಂಗಣದ ದಿನದ ಬಾಡಿಗೆ 500 ರೂ. ಆಗಿದ್ದು ಅದರಿಂದ ಬರುವ ಆದಾಯ 10,000 ರೂ. ಇನ್ನು ಗಾಂಧಿಭವನದ ಉತ್ಪಾದಕ ವಸ್ತುಗಳು ಮಾರಾಟದಿಂದ ರೂ. 3,725 ಹೀಗೆ ಒಟ್ಟಾರೆಯಾಗಿ 70,000 ರೂ ಆದಾಯ ಬರುತ್ತದೆ ಎಂಬ ಮಾಹಿತಿ ಆ ಲೆಕ್ಕದಲ್ಲಿದೆ. ಇನ್ನು ಖರ್ಚಿನ ವಿಚಾರಕ್ಕೆ ಬರುವುದಾದರೆ ಗಾಂಧಿಭವನದ ನಿರ್ವಹಣೆಗೆ ಪ್ರತಿ ತಿಂಗಳು 85,300 ರೂ. ಬೇಕಾಗುತ್ತದಂತೆ. ಗಾಂದಿಭವನ ಸಿಬ್ಬಂದಿಗೆ ತಿಂಗಳಿಗೆ 58,050 ರೂ. ಸಂಬಳ ಕೊಡಬೇಕಿದೆ ಅಂತ ರಾಜು ಲೆಕ್ಕ ತೋರಿಸಿದ್ದಾನೆ. ಆದರೆ ಇಲ್ಲಿ ಕೆಲಸಗಾರರಿರುವುದೇ 3-4 ಜನ ಮಾತ್ರ. ಅವರಿಗೆ ಇಷ್ಟೊಂದು ದೊಡ್ಡ ಮೊತ್ತದ ಹಣ ಸಂಬಳಕ್ಕೆ ಎಂದರೆ ನಂಬುವ ಮಾತೇ?

ಇನ್ನು ವ್ಯಾನ್ ಇಂಧನಕ್ಕೆ 5,000 ರೂ, ವಿದ್ಯುತ್ ಬಿಲ್ ರೂ. 4,500, ಕಂಪ್ಯೂಟರ್ ಮತ್ತು ಹೊಲಿಗೆ ಯಂತ್ರ ರಿಪೇರಿಗೆ ರೂ. 8,000, ಸ್ಟೇಷನರಿ, ಕ್ಲೀನಿಂಗ್, ಫೋನ್‌ಬಿಲ್, ಇಂಟರ್‌ನೆಟ್ ಬಿಲ್, ಪತ್ರಿಕಾಮುದ್ರಣ ಅಂತೆಲ್ಲಾ ಬಾಬ್ತು ನಮೂದಿಸಿ ತಿಂಗಳ ವ್ಯಯವನ್ನು 85,300 ರೂಪಾಯಿಗೆ ತಂದು ನಿಲ್ಲಿಸಿದ್ದಾನೆ. ಇಂಥಾ ಬೋಗಸ್ ಲೆಕ್ಕಕ್ಕೆ ತಮ್ಮನ್ನು ತಾವು ಸಾಚಾ ಎಂದು ಹೇಳಿಕೊಳ್ಳುವ ಮಾಜಿ ಶಾಸಕರಾದ ಎಚ್.ಡಿ.ಚೌಡಯ್ಯ, ಎಂ.ಎಸ್.ಆತ್ಮಾನಂದ, ಡಾ.ರಾಮಲಿಂಗಯ್ಯ ಸೇರಿದಂತೆ 12 ಮಂದಿ ಗಣ್ಯರು ಸಹಿ ಹಾಕಿದ್ದಾರೆ.

ವಸ್ತುಸ್ಥಿತಿ ಏನೆಂದರೆ, ಮಂಡ್ಯ ನಗರದ ಪ್ರಮುಖ ಬಿಸಿನೆಸ್ ಸೆಂಟರ್ ಆದ ವಿ.ವಿ. ರಸ್ತೆಯಲ್ಲಿರುವ ಗಾಂಧಿಭವನ ವಾಣಿಜ್ಯ ಮಳಿಗೆಗಳಿಂದ ಪ್ರತಿ ತಿಂಗಳು ಲಕ್ಷಲಕ್ಷ ಆದಾಯ ಬರುತ್ತಿದೆ. 15x25 ಅಳತೆಯ ಒಟ್ಟು 10ಕ್ಕೂ ಹೆಚ್ಚು ಅಂಗಡಿಗಳಿವೆ. ಕೇಂದ್ರಸ್ಥಾನದಲ್ಲಿರುವ ಈ ಒಂದೊಂದು ಮಳಿಗೆಯೂ ಕಡಿಮೆಯೆಂದರೂ 10,000 ಬಾಡಿಗೆಯನ್ನು ತರುವಂತದ್ದು, ಇಂತಹ 10 ಅಂಗಡಿಗಳಿಂದ ಒಂದು ಲಕ್ಷ ಆದಾಯಕ್ಕಿಂತ ಕಡಿಮೆ ಬರುವುದಿಲ್ಲ. ಇನ್ನು 15x120 ಅಳತೆಯ ಅಂಗಡಿಗೆ ಕಡಿಮೆ ಎಂದರೂ 2-3 ಸಾವಿರ ಬಾಡಿಗೆ ಬರುತ್ತದೆ. ಗಾಂಧಿಸ್ಮಾರಕ ಟ್ರಸ್ಟ್ ಮೂಲಕ ಮಾಲೀಕರಿಗೆ ನೇರವಾಗಿ ನೀಡಿದರೆ ಇಷ್ಟೆಲ್ಲಾ ಹಣ ಬರುತ್ತದೆ. ಹೀಗಿರುವಾಗ 5-6 ಸಾವಿರ ಬಾಡಿಗೆ ಕಟ್ಟಿಸಿಕೊಂಡು ಒಳ ಬಾಡಿಗೆ ಕೊಟ್ಟಿರುವವರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ ಎಂಬುದನ್ನು ಮಾದೇಗೌಡರೇ ವಿವರಿಸಬೇಕು.

ಈ ಮಳಿಗೆಗಳ ಮೂಲ ಗುತ್ತಿಗೆ ಪಡೆದಿರುವವರಲ್ಲಿ ಬಹುತೇಕರು ಮಾದೇಗೌಡರು ಬೆಂಬಲಿಗರು ಹಾಗೂ ಶ್ರೀಮಂತ ವರ್ತಕರು. 15x25 ಅಳತೆಯ ಅಂಗಡಿಗೆ 6,500 ಕೊಡುವ ಮೂಲ ಬಾಡಿಗೆದಾರರು ಅದನ್ನು ಬೇರೆಯವರಿಗೆ 15 ಸಾವಿರದಿಂದ 18 ಸಾವಿರ ಒಳ ಬಾಡಿಗೆ ಫಿಕ್ಸ್ ಮಾಡಿ ಕೊಟ್ಟಿದ್ದಾರೆ. 15x120 ಚ.ಅಡಿಯ ಮಳಿಗೆಯನ್ನು ಗಾಂಧಿಭವನ 11,000 ರೂ.ಗೆ ನೀಡಿದ್ದರೆ, ಅದನ್ನು ಪುನಃ ಬಟ್ಟೆ ವ್ಯಾಪಾರಿಯೊಬ್ಬರಿಗೆ 50,000 ರೂ. ಒಳ ಬಾಡಿಗೆಗೆ ಬಿಡಲಾಗಿದೆ. ಈ ಹಗಲು ದರೋಡೆ ಟ್ರಸ್ಟ್‌ಗೆ ಗೊತ್ತಿಲ್ಲದೆ ನಡೆದಿದೆ ಎನ್ನುವುದನ್ನು ನಂಬಲು ಸಾಧ್ಯವಿಲ್ಲ, ಒಂದೊಮ್ಮೆ ಟ್ರಸ್ಟಿಗಳಿಗೆ ಗೊತ್ತಿರದಿದ್ದರೂ ಪ್ರಧಾನ ಕಾರ್ಯದರ್ಶಿ ಎನ್. ರಾಜುಗಂತು ಸಕಲ ಮಾಹಿತಿಯೂ ತಿಳಿದಿರುತ್ತೆ, ಗಾಂಧಿಭವನದ ಆದಾಯದಿಂದ ರಾಜುವಿನ ಆಸ್ತಿ ದಿನೇದಿನೇ ಏರಿಕೆಯಾಗುತ್ತಲೇ ಇದೆ.

ಗಾಂಧಿ ಹೆಸರಲ್ಲಿ ಮೇಯಲು ನಿಂತಿರುವ ಎನ್.ರಾಜು, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯನೂ ಹೌದು. 2 ವರ್ಷಗಳ ಹಿಂದೆ ಹೊಳಲು ರಸ್ತೆಯಲ್ಲಿ ಬ.ಹೊಸಹಳ್ಳಿ ಹತ್ತಿರ 1.20 ಎಕರೆ ಜಮೀನನ್ನು ಗುಂಟೆಗೆ 1.35 ಲಕ್ಷ ರೂ.ಗಳಂತೆ ಒಟ್ಟು 80 ಲಕ್ಷಕ್ಕೆ ಖರೀದಿಸಿದ್ದಾನೆ. ಸ್ವರ್ಣಸಂದ್ರದ ಬಳಿ, ಅಂಗಡಿ ಮಳಿಗೆ ನಿರ್ಮಿಸಿ ಬಾಡಿಗೆ ಬಿಟ್ಟಿದ್ದಾನೆ. ಮಾದೇಗೌಡರನ್ನೇ ಗುರಾಣಿ ಮಾಡಿಕೊಂಡಿರುವ ಎನ್.ರಾಜುನ ಅಕ್ರಮಗಳ ಬಗ್ಗೆ ಯಾರೂ ಚಕಾರ ಎತ್ತುತ್ತಿಲ್ಲ. ಯಾವಾಗ ಗಾಂಧಿಭವನ ಅಂಗಡಿ-ಮಳಿಗೆಗಳ ಬಾಡಿಗೆ ಸಂಬಂಧ ಮಾಧ್ಯಮಗಳಿಗೆ ಖರ್ಚು ವೆಚ್ಚದ ವಿವರ ಕೊಟ್ಟು, ಆದಾಯಕ್ಕಿಂತ ಖರ್ಚೇ ಜಾಸ್ತಿ ಎಂದನೋ ಆಗ ಎನ್.ರಾಜು ಬಣ್ಣ ಸಂಪೂರ್ಣ ಬಯಲಾಗಿದೆ.

ಈಗಲಾದರೂ ಮಾದೇಗೌಡರು ತಮ್ಮ ಗಾಂಧಿತತ್ವ ಮತ್ತು ವಯಸ್ಸಿಗೆ ತಕ್ಕಂತ ಕೆಲಸಗಳಿಗೆ ಕೈ ಇಡಬೇಕಿದೆ. ಗಾಂಧಿಗ್ರಾಮದ ಕಲ್ಪನೆ ಉತ್ತಮವಾದುದೇ ಆದರೂ, ಇವತ್ತಿಗೂ ಮಂಡ್ಯದಲ್ಲಿ ತಲೆ ಮೇಲೊಂದು ಸೂರಿಲ್ಲದ ಅದೆಷ್ಟೊ, ಸ್ಲಂ ವಾಸಿಗಳಿದ್ದಾರೆ. ಅಂತವರಿಗೆ ಮನೆ ದೊರಕಿಸಿಕೊಡಲು ತಮ್ಮ ವ್ಯಕ್ತಿತ್ವವನ್ನು ಅವರು ಸವೆಸಲು ಮುಂದಾಗುವುದು ಒಳಿತು.

■ ವರದಿಗಾರ

ಕೃಷಿಯ ಹತಾಶೆ ಮತ್ತು ಭರವಸೆಗಳ ವಾಸ್ತ

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

"ತುಂಡು ನೆಲದಿಂದ ನೆಮ್ಮದಿಯನ್ನು ಹುಡುಕಾಡುವುದೇ ಭವಿಷ್ಯದ ಅತಿ ದೊಡ್ಡ ಕಲೆ"

- ಅಬ್ರಹಂ ಲಿಂಕನ್


ಇದೀಗ ರಾಜ್ಯ ಬರ ಮತ್ತು ಆತ್ಮಹತ್ಯೆಯಂತಹ ಸುದ್ದಿಗಳಲ್ಲಿದೆ. ರೈತ ಮತ್ತವರ ಸಮಾಜ ಇಂತಹ ಪರಿಸ್ಥಿತಿಗಳಲ್ಲಿ ಅಕ್ಷರಗಳ ಪಾಲಾದಷ್ಟು ಅವರ ಭರವಸೆಯ ಪ್ರಪಂಚದ ಬಗ್ಗೆ ದಾಖಲಾದದ್ದು ಅತ್ಯಂತ ಕಡಿಮೆ. ಈಗಾಗಲೆ ಹಲವು ತಾಲೂಕುಗಳನ್ನು ಬರದ ನೆರಳು ಕಾಡುತ್ತಿದೆ. ನಮ್ಮ ಕೃಷಿಯ ಆಧುನಿಕತೆಯನ್ನು ಬಾಚಿ ತಬ್ಬಿರುವ ಅಮೆರಿಕಾದ ಕೃಷಿ ಇತಿಹಾಸದಲ್ಲೇ ಅಲ್ಲಿನ ಕೃಷಿಕರ ಭರವಸೆಯ ದನಿಯಾದ ಸಂಗತಿಯೊಂದು ನೆನಪಾಗುತ್ತಿದೆ. ಅದನ್ನು ನಮ್ಮ ಭರವಸೆಗಳ ಪ್ರಯತ್ನಗಳ ಜತೆಗೆ ಸಮೀಕರಿಸಿ ತಿಳಿಯುವ ಜಾಣತನ ಅನುರಣನದ ಓದುಗರದ್ದು. ಅವನ್ನಿಲ್ಲಿ ಹಂಚುವ ಒತ್ತಾಸೆ ನನ್ನದು.

ನಮ್ಮ ದೇಶವಿನ್ನೂ ಬ್ರಿಟಿಷರ ದಾಸ್ಯದಲ್ಲಿದ್ದಾಗಲೇ ಅಂದರೆ - 1935ರ ಸಮಯದಲ್ಲಿ - ಆಧುನಿಕತೆ ಹಾಗೂ ಬಂಡವಾಳಶಾಹಿತನ ಇವುಗಳ ಬೆನ್ನು ಹತ್ತಿದ್ದ ಅಮೆರಿಕಾದಲ್ಲಿ ಒಂದು ಚಮತ್ಕಾರ ಸಂಭವಿಸಿತ್ತು. ಅಲ್ಲಿನ ಕೊಲೊಂಬೋ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದ ಎಂ. ಜೆ. ಕೈನ್ಸ್ ಎಂಬ ಓರ್ವ ತೋಟಗಾರಿಕಾ ತಜ್ಞರು "ಐದು ಎಕರೆಯ ಸ್ವಾತಂತ್ರ್ಯ" ಎಂಬ ಶೀರ್ಷಿಕೆಯ ಪುಸ್ತಕವನ್ನು ಪ್ರಕಟಿಸಿದ್ದರು. ಅಚ್ಚರಿ ಎನ್ನಿಸದೇ ಇರದು ಏಕೆಂದರೆ ಅಮೆರಿಕೆಯ ಸಂದರ್ಭವನ್ನು ಕೃಷಿಯಲ್ಲಿ ನಾವು ಆಲೋಚಿಸುವಾಗೆಲ್ಲಾ ನೆನಪಾಗುವುದೆಂದರೆ ಅಲ್ಲಿನ ನೂರಾರು, ಸಾವಿರಾರು ಎಕರೆಗಳ ಬೃಹತ್ ವ್ಯವಸಾಯದ ಚಿತ್ರಣ. ಆರಂಭದಲ್ಲೂ ಅಭಿವೃದ್ಧಿಯನ್ನೇ ಬಂಡವಾಳದತ್ತ ತೊಡಗಿಸುತ್ತಲೇ ಬೆಳವಣಿಗೆಯನ್ನು ನಿರೀಕ್ಷಿಸುತ್ತಿದ್ದ ವಾತಾವರಣವದು. ಅಂತಹ ಪ್ರಪಂಚಕ್ಕೆ ಐದೇ ಎಕರೆಯಲ್ಲಿ ಬದುಕಿನ ಸ್ವಾತಂತ್ರ್ಯವನ್ನು ಕಟ್ಟಿ ಕೊಡುವ ಎಲ್ಲಾ ಆಶಯಗಳನ್ನೂ ಪುಸ್ತಕವು ಹೊತ್ತಿತ್ತು. ಈಗಿನ ಪುಸ್ತಕ ಪ್ರಕಟಣೆಗಳ ಭರಾಟೆಯಲ್ಲಿ ಇದ್ದೀತು ಬಿಡು ಹತ್ತರಲ್ಲಿ ಹನ್ನೊಂದು ಎನ್ನುವಂತೆಯೂ ಇಲ್ಲ. ಪ್ರಕಟವಾದ ಏಳು ವರ್ಷಗಳಲ್ಲಿ - 1942ರ ಹೊತ್ತಿಗೆ - 14 ಮರು ಮುದ್ರಣಗಳನ್ನು ಕಂಡ ಅತ್ಯಂತ ಮಹತ್ವಾಕಾಂಕ್ಷಿ ಕನಸುಗಳನ್ನು ಬಿತ್ತಿದ ಪುಸ್ತಕ ಅದು. ಮತ್ತೂ ಆಶ್ಚರ್ಯವೆಂದರೆ 1942ರಲ್ಲಿ ಕೇವಲ ಮೊದಲ ನಾಲ್ಕು ತಿಂಗಳಲ್ಲಿ ನಾಲ್ಕು ಮುದ್ರಣಗಳನ್ನು ಕಂಡ ಪುಸ್ತಕ ಅದು.

ನಮ್ಮ ರೈತರ ಪರವಾಗಿ ಆಲೋಚಿಸುವಾಗ ಬೇಸರ ಮತ್ತು ನೋವಿನ ಸಂಗತಿ ಏನೆಂದರೆ, ನಮ್ಮ ದೇಶದ ಬಹುಪಾಲು ಕೃಷಿ ವಿಶ್ವವಿದ್ಯಾಲಯಗಳು ಅಮೆರಿಕೆಯ ಸಂಶೋಧನಾ ಮತ್ತು ಶಿಕ್ಷಣ ಮಾದರಿಯನ್ನು ಅನುಸರಿಸುವ ನೆಪದಲ್ಲಿ ಅಲ್ಲಿಗೆ ಹೋದ ಅನೇಕರು "ಅಲ್ಲೂ ಇಂತಹದ್ದೊಂದು ಪುಸ್ತಕ ಇತ್ತು!" ಎಂದು ಅದನ್ನು ಹೊತ್ತು ತರಲಿಲ್ಲ. ತಂದು ನಮ್ಮ ದೇಶೀ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪನಕ್ಕೆ ಒತ್ತು ಕೊಡಲಿಲ್ಲ. ಇದೀಗ ರಾಜಕೀಯ ಕಾರಣಗಳಿಗಷ್ಟೇ ಸಣ್ಣ ರೈತರು ಮುಂತಾಗಿ ಮಾತಾಡುವ ತಜ್ಞರು, ಇಡೀ ಕೃಷಿ ಶಿಕ್ಷಣದ ಇತಿಹಾಸದಲ್ಲಿ ಸಣ್ಣ ಭೂಹಿಡುವಳಿಯನ್ನು ಕಡೆಗಣಿಸಿದ ಪಾಲನ್ನು ಹೊತ್ತಿದ್ದಾರೆ. ಸಣ್ಣ ಹಿಡುವಳಿಗಳ ಪರಂಪರೆಯನ್ನೇ ಹತ್ತಿಕ್ಕುವ ತಂತ್ರಜ್ಞಾನಗಳ ಬೆಂಬಲಕ್ಕೆ ನೆರವಾಗಿ ರೈತರ ನೆಮ್ಮದಿಯ ಆಶಯಗಳನ್ನೇ ಬದಿಗೊತ್ತಿ ದಶಕಗಳು ಕಳೆದನಂತರ ಒಣ ಬೇಸಾಯ, ಸಣ್ಣ ಹಾಗೂ ಅತಿ ಸಣ್ಣರೈತರ ಧ್ವನಿಯಾಗಿಸುವ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ವಾಸ್ತವವಾಗಿ "ಐದು ಎಕರೆಯ ಸ್ವಾತಂತ್ರ್ಯ"ದ ಆಶಯಗಳೇನು? ಹೆಚ್ಚೂ ಕಡಿಮೆ 80 ವರ್ಷಗಳ ಹಿಂದೆಯೇ ಅಂತಹ ಚಿಂತನೆಗಳ ಉಗಮವಾಗಿದ್ದರೂ ಇಂದಿನವರೆಗೂ ಅವು ಹೆಚ್ಚು ತಿಳಿದಿಲ್ಲವೆನ್ನುವುದು ನಿಜವೆ! ಎಂ.ಜೆ. ಕೈನ್ಸ್ ಅವರ ಈ ಪುಸ್ತಕ ವಾಸ್ತವವಾಗಿ ಸಣ್ಣ ಜಮೀನಿನ ಆಯ್ಕೆ ಮತ್ತು ನಿರ್ವಹಣೆಯ ಸಮಗ್ರ ಮಾರ್ಗದರ್ಶನವನ್ನು ಪ್ರಾಯೋಗಿಕವಾಗಿ ಚರ್ಚಿಸುತ್ತದೆ. ಇದೇ ಲೇಖನದ ಆರಂಭದ ಮಾತುಗಳು ಲಿಂಕನ್ನರಿಂದ ಶತಮಾನಗಳ ಹಿಂದೆಯೆ ವ್ಯಕ್ತಗೊಂಡಿದ್ದವು ಎಂದರೆ ಇಂದು ನೆಲದ ರಾಜಕೀಯ ನಡುವೆಯೇ ನೆಮ್ಮದಿಯ ಬದುಕನ್ನು ಕಟ್ಟಬೇಕಾದ ಅನಿವಾರ್ಯತೆಯ ಭಯ ಕಾಡುತ್ತದೆ. ಹಳ್ಳಿ ಮತ್ತು ನಗರ ಜೀವನಗಳ ವ್ಯತ್ಯಾಸಗಳನ್ನೂ ಕೃಷಿಯ ಹಿನ್ನೆಲೆಯಿಂದ ವಿವರಿಸುವ ಆರಂಭದಿಂದ ವೈಜ್ಞಾನಿಕ ವಿವರಗಳು ತೆರೆದುಕೊಳ್ಳುತ್ತವೆ. ಕೃಷಿ ವಿಜ್ಞಾನದ ಮರು ವಿಮರ್ಶೆಯ ಈ ಹೊತ್ತಿನಲ್ಲಿ ಚರ್ಚಿಸುತ್ತಿರುವ ಅನೇಕ ಸಂಗತಿಗಳು ಆಗಲೇ ಅನಾವರಣಗೊಂಡಿದ್ದವು. ಕೃಷಿಯಲ್ಲಿ ಜಾನುವಾರುಗಳ ಅನಿವಾರ್ಯ ಅಗತ್ಯವನ್ನು ಒತ್ತಿ ಹೇಳಿದೆ. ಕೃಷಿಯೆಂಬ ಉತ್ಪಾದಕ ಜಗತ್ತಿಗೆ ಅಗತ್ಯವಾದ ತ್ಯಾಜ್ಯಗಳ ಪುನರ್ಬಳಕೆಯಲ್ಲಿ ಕೈಗೊಳ್ಳಬೇಕಾದ ಸಂಗತಿಗಳಿಲ್ಲಿ ಹೇರಳವಾಗಿವೆ. ಮಣ್ಣು ತನ್ನ ಫಲವತ್ತತೆಯನ್ನು ನಿರಂತರವಾಗಿಸಿಕೊಂಡು ಹಸಿವಿನ ನಿವಾರಣೆಗಳ ಉಪಾಯಗಳನ್ನು ವಿವರಿಸುತ್ತದೆ.

ಕೃಷಿ ಒಂದು ವ್ಯವಸ್ಥೆಯಾಗಿ ವಿವಿಧ ಸಂಪನ್ಮೂಲಗಳನ್ನೂ, ಅಗತ್ಯ ವಾತಾವರಣವನ್ನೂ, ಸಕಾಲಿಕವಾದ ರೋಗ ಹಾಗೂ ಕೀಟಗಳ ನಿವಾರಣೆಯನ್ನೂ ಬಯಸುತ್ತದೆ. ಅದರ ಜತೆಗೇ ಬೆಳೆ ಸಮಯದ ಉತ್ಪಾದನೆಯಲ್ಲಿ ಜೇನು ಮಾಡುವ ಪರಾಗಸ್ಪರ್ಶ ಮುಂತಾದ ವಿಶೇಷಗಳನ್ನೂ ವಿವರಿಸುತ್ತದೆ. ಮಣ್ಣು ನೀರು, ಸಸ್ಯ ಸಂರಕ್ಷಣೆ ಹಾಗೂ ಎಲ್ಲಾ ಜಮೀನಿನ ತಾಂತ್ರಿಕ ವಿವರಗಳ ಲೆಕ್ಕಾಚಾರವನ್ನೂ ರೈತರು ಹೇಗೆ ನಿರ್ವಹಿಸಬೇಕು ಎಂಬುದನ್ನೂ ಮಾರ್ಗದರ್ಶನ ಮಾಡುತ್ತದೆ. ಕೃಷಿಯಲ್ಲಿ ಬೆಳೆ ಸಂದರ್ಭದಂತೆ ಬೆಳೆ ಕೊಯಿಲಿನ ನಂತರದ ತಂತ್ರಜ್ಞಾನಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇದು ಕೃಷಿಯನ್ನು ಸುಸ್ಥಿರವಾಗಿ ನಿರಂತರವಾಗಿ ಹಸಿವಿನ ನಿವಾರಣೋಪಾಯವಾಗಿ ಬಳಸುವ ಜಾಣ್ಮೆಯನ್ನು ಒದಗಿಸುತ್ತವೆ. ಕೊಯಲೋತ್ತರ ನಷ್ಟಗಳ ಬಗೆಗೆ ರೈತರಿಗೆ



ಅರಿವು ಇರುವುದೂ ಬಹುಮುಖ್ಯವಾಗುತ್ತದೆ. ಜಗತ್ತಿನ ಬಹುಪಾಲು ಆಹಾರದ ನಷ್ಟವು ಜಮೀನಿನಿಂದ ಹೊರಬಂದ ನಂತರವೇ ಎಂಬುದು ಇಂದಿಗೂ ನಡೆದೇ ಬಂದ ಸಂಗತಿ. ಅದರ ಕುರಿತೂ ಆರಂಭಿಕ ಚರ್ಚೆಗಳನ್ನು ಹುಟ್ಟು ಹಾಕಿದ್ದ ಹೆಮ್ಮೆ ಕೈನ್ಸ್ ಅವರಿಗಿದೆ. ಮೂಲತಃ ಅವರು ಅರ್ಥಶಾಸ್ತ್ರವನ್ನೂ ತೋಟ ನಿರ್ವಹಣೆಯಲ್ಲಿ ಪ್ರಬಲವಾಗಿ ಮನಗಂಡವರಾಗಿದ್ದು ವ್ಯವಹಾರಿಕ ಜಾಣ್ಮೆಯನ್ನು ರೈತರು ಕಲಿಯುವ ಅಗತ್ಯವನ್ನು ಪ್ರಸ್ತಾಪಿಸುತ್ತಾರೆ.

ಕೃಷಿಯ ಯಶಸ್ಸಿನ ಗುಟ್ಟಿನ ದರ್ಶನ ಬಹಳ ಸೊಗಸಾಗಿದೆ. ನಿರಂತರ ಯಶಸ್ಸು ಕಾಣಲು ರೈತರೇನು ಮಾಡಬೇಕು? ಸದಾ ಆಲೋಚಿಸಿ ಕಾರ್ಯಪ್ರವೃತ್ತನಾಗುವ ರೈತರಿಗೆ ಯಶಸ್ಸು ಖಂಡಿತ. ತುಂಡು ನೆಲದಲ್ಲೇ ನೆಮ್ಮದಿಯನ್ನು ಅರಸಿ, ಕಾಯಕವನ್ನೇ ದೈವವೆಂಬ ಒಳಗೊಳ್ಳುವ ವ್ಯವಸಾಯವು ಗೆಲ್ಲುತ್ತದೆ. ರೈತ ತನ್ನೆಲ್ಲಾ ಕೆಲಸವನ್ನೂ ಲೆಕ್ಕಾಚಾರ ಮಾಡುತ್ತಲೇ ಮುನ್ನಡೆಯಬೇಕು. ಒಬ್ಬ ಒಳ್ಳೆಯ ಶಿಕ್ಷಕ ತನ್ನ ತರಗತಿಯ ಮಕ್ಕಳನ್ನು ವೀಕ್ಷಿಸುವಂತೆ ರೈತ ಸದಾ ಇಡೀ ಜಮೀನನ್ನು ವೀಕ್ಷಿಸುತ್ತಿರಬೇಕು. ಆಗ ಜಯ ಸಾಧ್ಯ! ಜತೆಗೆ ರೈತರು ನಿತ್ಯವೂ ಹಣದ ಅಗತ್ಯವನ್ನು ಬಯಸುವವರೇ ಆಗಿದ್ದೂ ಅವರ ಉತ್ಪನ್ನಗಳಲ್ಲಿ ದಿನವೂ ಮಾರುವ ಪರಿಕರಗಳಿರುವ ಬಗ್ಗೆ ಒತ್ತಾಯಿಸುತ್ತಾರೆ. ಇದನ್ನು ಹಾಲಿನ ವಹಿವಾಟಿನಲ್ಲಿ ಸಾಧ್ಯ ಮಾಡಿದ ಕೀರ್ತಿ ನಮ್ಮ ದೇಶದ ಕುರಿಯನ್ ಅವರಿಗಿದೆ. ಬಹು ಮುಖ್ಯವಾದದ್ದೆಂದರೆ ಐದೇ ಎಕರೆಯ ಬದುಕನ್ನು ವಿವರಿಸುವ ಪುಸ್ತಕವು ಹೆಚ್ಚು ನೆಲವನ್ನು ಹೊಂದಿರುವ ಅಪಾಯವನ್ನೂ ವಿವರಿಸುತ್ತದೆ. ಅತಿಹೆಚ್ಚು ನೆಲದ ನಿರ್ವಹಣೆಯ ನಷ್ಟ ಹಾಗೂ ಅಸಾಧ್ಯದ ಸಂಗತಿಗಳನ್ನೂ ವಿವರಿಸುತ್ತದೆ.

ಸಹಜವಾಗಿ ಮಾನವ ಸಂಸ್ಕೃತಿಯು ಯಾವುದೇ ವೃತ್ತಿಯಿಲ್ಲದಿದ್ದರೂ ಬದುಕಿ ಉಳಿಯುತ್ತದೆ. ಆದರೆ ಕೃಷಿಯೇ ಇಲ್ಲವಾದರೆ ಸಂಸ್ಕೃತಿಯೂ ನಾಶವಾಗುತ್ತದೆ. ಕೃಷಿಯಲ್ಲಿ ಮಾತ್ರವೇ ನಮ್ಮ ಅನೇಕ ಅಗತ್ಯಗಳನ್ನು ಒದಗಿಸಿಕೊಂಡು ಸ್ವತಂತ್ರವಾಗಿ ಜೀವಿಸಲು ಸಾಧ್ಯ ಅದೂ ಒಂದು ಪುಟ್ಟ ನೆಲದಲ್ಲಿ! ಅಮೆರಿಕದಂತಹ ದೊಡ್ಡಣ್ಣನ ಬದುಕನ್ನೇ ಅದು ಸಾಧ್ಯ ಮಾಡುವುದಾದಲ್ಲಿ ಅಗತ್ಯಗಳ ವಿಚಾರದಲ್ಲಿ ತುಸು ಹೆಚ್ಚೇ ನೆಮ್ಮದಿಯಿಂದಿರುವ ನಮ್ಮಂತಹವರಿಗೆ ಇನ್ನೂ ಕಡಿಮೆ ನೆಲವೇ ಅಂದರೆ 3 ಎಕರೆಗಳಲ್ಲೂ ಸ್ವಾತಂತ್ರ ಸಾಧ್ಯವಿದ್ದೀತು. ಅಂತಹ ಸಂಗತಿಗಳ ಮಾದರಿಗಳನ್ನು ಒದಗಿಸುವ ಜವಾಬ್ದಾರಿ ಕೃಷಿಯನ್ನು ಪೋಷಿಸುವ ಸಂಸ್ಥೆಗಳಿಗಿದೆ. ಅಗತ್ಯವಾದ ಎಲ್ಲವನ್ನೂ ನೆಲದಿಂದಲೆ ಪಡೆಯುವ ಅನಿವಾರ್ಯಗಳಿಂದ, ಇದನ್ನು ಸಾಧ್ಯಮಾಡಬಹುದಾಗಿದೆ. ಇವೆಲ್ಲವೂ ನೆಲದ ಒಡಲಾಳದ ಬಯಕೆಗಳಲ್ಲಿವೆ ಎನ್ನುವುದೇ ಸಮಾಧಾನದ ಸಂಗತಿ.

ನಮ್ಮ ನಡುವಿನ ವಾಸ್ತವ

ನಮ್ಮ ನಡುವಿನ ವಾಸ್ತವದ ಕಡೆ ಕೃಷಿಯ ಸ್ವಾತಂತ್ರ್ಯವನ್ನು ಸಮೀಕರಿಸಿ ನೋಡೋಣ. ಭಾರತೀಯ ಕೃಷಿಯಲ್ಲಾದ ಬದಲಾವಣೆಯ ಚಲನಶೀಲತೆ ಏನು? ಪರಂಪರಾಗತವಾಗಿದ್ದ ಈ ವೃತ್ತಿಯನ್ನು ಆಧುನೀಕರಣಗೊಳಿಸುತ್ತಾ ಸಮಾಧಾನ ಹೇಳುತ್ತಿದ್ದಂತೆ ಕಾಣುತ್ತಿದೆ. ಇತರೇ ವೃತ್ತಿಗಳ ಫಲಿತಗಳಾದ ಉತ್ಪನ್ನಗಳಲ್ಲಿ ಇದ್ದಂತಹ -ಲಾಭವೇ ಮುಖ್ಯವಾದ ಪರಿಸರ- ಕೃಷಿಗೆ ಒದಗಿಸಲಾಗೇ ಇಲ್ಲ. ಆದರೆ ಒಂದಷ್ಟು ಪರ್ಯಾಯ ಚಿಂತನೆಗಳ ಹಚ್ಚಿದ್ದ ಅವಕಾಶಗಳ ಸಂದರ್ಭಗಳು ಇವನ್ನು ಮಾಡಿದವು. ಕೆಲವು ಪ್ರಯೋಗಗಳಲ್ಲಿ ಉತ್ಪಾದಕ ಮತ್ತು ಗ್ರಾಹಕ ಒಪ್ಪಂದಗಳ ಮೂಲಕ ಇಬ್ಬರೂ ಲಾಭನಷ್ಟಗಳ ಹೊಣೆ ಹೊರುವಂತಹ ಕೆಲಸಗಳನ್ನು ಇಂತಹ ಸಣ್ಣ ಸಣ್ಣ ಸಾವಯವ/ಸುಸ್ಥಿರ ಕೂಟಗಳು ಅಲ್ಲಲ್ಲಿ ಮಾಡಿದವು. ಆದರೆ ಇವು ಇಡಿಯಾಗಿ ಕೃಷಿಗೆ ಅಥವಾ ಒಂದು ಸಮುದಾಯಕ್ಕೆ ದೊರಕಿಸಬಹುದಾದ ಸಾಧ್ಯತೆಗಳನ್ನಿರಲಿ, ವಿಶೇಷ ಅಧ್ಯಯನಗಳನ್ನೂ ಕೃಷಿ ವಿಶ್ವವಿದ್ಯಾನಿಲಯಗಳು ಮಾಡಲಿಲ್ಲ. ಎಲ್ಲಾ ಆಧುನಿಕ ಕೃಷಿ ಅಧ್ಯಯನಗಳೂ ಮಧ್ಯವರ್ತಿಗಳ ಲಾಭಗಳನ್ನು ಹೆಚ್ಚಿಸಿದವೇ ಹೊರತು ಕೃಷಿಕರ ಕಷ್ಟವನ್ನು ನಿವಾರಿಸಲಿಲ್ಲ. ನಮ್ಮ ರೈತರಿಗೆ ಉತ್ಪಾದನೆ ಮಾತ್ರವಲ್ಲ, ಅವನ್ನು ಬಳಸುವ ಸಮುದಾಯಗಳಲ್ಲೂ ಮಾರುಕಟ್ಟೆ ನಿಯಂತ್ರಣದ ಜತೆಗೇ ತಂತ್ರಜ್ಞಾನಗಳ ಗ್ಯಾಪ್ ಎಂತಹದ್ದೆಂಬ ಗಟ್ಟಿ ಸಿದ್ಧಾಂತಗಳ ಮಾದರಿಗಳು ಸಿಗಬೇಕು. ದುರಾದೃಷ್ಟವೆಂದರೆ ತಂತ್ರಜ್ಞಾನಗಳ ಪರಿಚಯಿಸುವ ಮೇಳಗಳು ಯಾವಾಗಲೂ ಏನನ್ನಾದರೂ ಮಾರುವ ಕನಸುಗಳನ್ನಷ್ಟೇ ವೈಭವೀಕರಿಸುತ್ತವೆ. ರೈತರಿಗೆ ಏನನ್ನಾದರೂ ಪರಿಕರವೆಂದು ಪರಿಚಯಿಸುವ ಹುನ್ನಾರವೇ ನಿರಂತರವಾಗಿದೆ. ಇನ್ನು ಸ್ವಾವಲಂಬನೆಯ ಮಾತು ದೂರವೇ ಉಳಿದಿದೆ. ಏನೋ ಒಂದಷ್ಟು ಮೇಳಗಳ ಜಾಹಿರಾತುಗಳ ಸಮಾಧಾನವೇ ಗತಿಯಾಗಿದೆ.

ತಂತ್ರಜ್ಞಾನಗಳ ವೈಭವದಲ್ಲಿ ಕಳೆದು ಹೋಗುವ ರೈತ ಮತ್ತು ಗ್ರಾಹಕ ಸರಪಳಿ

ತಂತ್ರಜ್ಞಾನಗಳ ಪರಿಚಯಿಸುವ ಕೃಷಿಮೇಳಗಳು ಸಾಕಷ್ಟು ನವೀನ ತಂತ್ರಜ್ಞಾನಗಳ ವೈಭವೀಕರಿಸಿ ಪರಿಚಯಿಸುವ ಧಾವಂತದಲ್ಲಿರುತ್ತವೆ. ಜಗತ್ತಿನಾದ್ಯಂತ ಇಂತಹ ಮೇಳಗಳು ಆರಂಭಗೊಂಡದ್ದೇ ಉತ್ಪಾದಕ ಮತ್ತು ಬಳಕೆದಾರ ಸಮುದಾಯಗಳಿಗೆ ವಾಸ್ತವಗಳನ್ನು ಪರಿಚಯಿಸುವ ಆಕಾಂಕ್ಷೆಯಿಂದ. ಆದರೆ ಎಲ್ಲಾ ಸಂದರ್ಭಗಳಲ್ಲೂ ಅವುಗಳನ್ನು ಆಯೋಜಿಸುವ ಮತ್ತು ಪ್ರಾಯೋಜಿಸುವವರ ಹಿತಾಸಕ್ತಿಗಳೆ ಮುಖ್ಯವಾಗಿ ಮತ್ತೆ ಮಧ್ಯವರ್ತಿಗಳ ಹಿಡಿತಕ್ಕೇ ಸಿಕ್ಕವು. ಇದರ ಇಲ್ಲಿನ ಮೂಲ ಉದ್ದೇಶಗಳಲ್ಲಿ ಎಲ್ಲರ

ಹಿತವೂ ಇದೆ. ಇದರ ಫಲದಲ್ಲಿ ಪ್ರತಿಯೊಬ್ಬರ
ಉತ್ತರಗಳು ಇದೆ. ಒಂದು ಉದಾಹರಣೆ
ಗಮನಿಸುವುದಾದರೆ ಇಂತಹ ಮೇಳಗಳು ದಶಕ
ನಡೆಯುತ್ತಲೇ ಇವೆ. ಆದರೂ ಆಗಾಗ್ಗೆ ಹಲವಾರು
ಮಾರುಕಟ್ಟೆ ಬೆಲೆಗಳ ಏರಿಳಿತಗಳು ರೈತ-ಗ್ರಾಹಕರ
ಸೋಲಿಸುತ್ತಲೇ ಇವೆ. ಇಂತಹ ಉತ್ಪಾದಕ-
ಸಂಬಂಧಗಳಲ್ಲಿ ಇಬ್ಬರೂ ಸೋಲುವ ಸಂದರ್ಭಗ
ಈರುಳ್ಳಿ ಮತ್ತು ಟೊಮ್ಯಾಟೊಗಳ ಸುತ್ತಮುತ್ತ
ಹೆಚ್ಚು! ಈರುಳ್ಳಿಯಂತೂ ರೈತ ಗ್ರಾಹಕರಿಬ್ಬರನ್ನೂ
ತರಿಸುತ್ತಲೇ ರಾಜಕೀಯವಾಗಿ ಬಲಾಢ್ಯವಾದ
ಟೊಮ್ಯಾಟೊ ಅಂತೂ ರಸ್ತೆಗಳ ತಲುಪುವ ಬೆ
ಆಗಬಲ್ಲುದು. ಕೃಷಿ ನಿಯಂತ್ರಿತ ಮಾರುಕಟ್ಟೆಗಳು ಹೆ
ಇವೆ. ರೈತರ ಉತ್ಪನ್ನಗಳಿಗೆ ತಕ್ಕುದಾದ. ಬೆಲೆ
ಒದಗಿಸಿಕೊಡುವಲ್ಲಿ ಮತ್ತು ಆ ಮೂಲಕ ವೃತ್ತಿ
ಸುಭದ್ರವಾಗಿಡುವ ತಾಂತ್ರಿಕ ಸಂಗತಿಗಳು ಯಾ
ಮೇಳಗಳಲ್ಲಿ ಪ್ರಮುಖವಾಗಿ ಕಾಣುವುದೇ ಇಲ್ಲ, ಉ
ಮತ್ತು ಗ್ರಾಹಕ ಇಬ್ಬರನ್ನೂ ಕೊಂಡಿ ಮಾಡಬ
ಮೇಳಗಳು ರೈತನಿಗೆ ಒಂದಷ್ಟು ತಂತ್ರಜ್ಞಾನಗಳ ಪರಿ
ಸುವ ನೆಪದಲ್ಲಿ ಇದ್ದು ಗ್ರಾಹಕರಿಗೆ ಉತ್ಪಾದಕರ ಕ
ತಿಳಿಯದಂತೆ ಅದರ ವೈಭವವಷ್ಟೇ ಅರಿ
ತಮ್ಮದೇನೂ ಪಾಲಿಲ್ಲದಂತೆ ಬಿಂಬಿಸುವ ಪ್ರದರ್ಶನ
ಒಟ್ಟಾರೆ ಲಾಭ ಕಡಿಮೆ.

ಒಂದು ಕಥೆ ನೆನಪಾಗುತ್ತಿದೆ. ಒಮ್ಮೆ ಒಂದು ಹ
ಕಿಡಿಗೇಡಿಯೊಬ್ಬ ತಮಾಷೆಗೆ ಒಂದು ಸುಳ್ಳನ್ನು ಹಬ್ಬಿಸಿ
ಅದೇನೆಂದರೆ "ಊರ ಹೊರಗಿನ ಅಂಜನೇಯನ ಗುಡಿ
ಚುರುಮು (ಪ್ರಸಾದ) ಹಂಚುತ್ತಾರೆ" ಎಂಬುದು.
ಮಾತು ಕಿವಿಯಿಂದ ಕಿವಿಗೆ ತಲುಪುತ್ತಾ ಸಾಗಿತು
ಸಮಯದಲ್ಲಿ ಇದ್ದಕ್ಕಿದ್ದಂತೆ ನೋಡಿದರೆ ಹೆಚ್ಚೂ
ಊರಿಗೆ ಊರೆ ಹೋಗುವಂತೆ ಅನ್ನಿಸುತ್ತಿತ್ತು, ವ
ಬಾರಿ ಸುಳ್ಳನ್ನು ಹಬ್ಬಿಸಿದವನಿಗೆ "ಅಯ್ಯೋ ನಿಜಕ್ಕೂ
ವೇಳೆ ಹಂಚುತ್ತಿರಬಹುದೇ" ಎಂಬುದಾಗಿ ಅನ
ಬಂತಂತೆ! ಸರಿ ಅವನೂ ಹೋದನಂತೆ! ಜನ ಮ
ನಮಗೆ ಬೇಕೋ ಬೇಡವೋ ಜಾತ್ರೆಯಲ್ಲಿ ಪೀಪೀ ಊ
ಸದ್ದಿನಲ್ಲಿ ಅಡ್ಡಾಡಿ ಬರುವುದರಲ್ಲಿ ಖುಷಿ ಪಡು
ಆದರೆ ಕೃಷಿಮೇಳಗಳಿಂದ ವೃತ್ತಿಯ ಪರಂಪರೆಯ
ಸಾಧ್ಯತೆಗಳ ವಿಶ್ವಾಸದ ಏರಿಕೆಯಾಗಿ ವೃತ್ತಿ ಮರ್ಯಾ
ಅಭಿವ್ಯಕ್ತತೆ ಆಗುವುದೇ? ಇದಾದರೆ ಮೇಳಗಳು ಸಾ
ಆದರೆ ಆಗುವುದೇನು? ಬಂದ ಮುಕ್ಕಾಲು ಪಾಲು
ತಮ್ಮ ಊಟವನ್ನು ಮತ್ತೊಬ್ಬರ ಶ್ರಮದಲ್ಲಿ
ಮಾಡುಕೊಂಡು ಹೋಗುವವರೇ ಹೆಚ್ಚು. ಸಾಹಿತ್ಯ ಮೇ
ಅಡ್ಡಾಡಿದವರಿಗೆ ಒಂದು ಪುಟ್ಟ ಕವಿತೆ ಬರೆಯುವ
ಯಂತ್ರೋಪಕರಣದ ಮೇಳದಲ್ಲಿ ಸುತ್ತಾಡಿದ
ಕಾರ್ಖಾನೆಯ ಕಟ್ಟುವ ಕನಸೂ, ಕಲೆಯ ಜಾತ್ರೆ
ಅಡ್ಡಾಡಿದವರಿಗೆ ಕಲೆಯು ಒಂದಿನಿತಾದರೂ ಕಾಡು
ಕೃಷಿಮೇಳಗಳು ಕಾಡಬೇಕು. ನಮಗೂ ನಮ್ಮ ಅನ್ನ
ಬೆಳೆದು ತಿನ್ನುವ ಹಂಬಲವಾಗಬೇಕು. ನಮ್ಮ ಕೈಮ
ಬೆಳೆಯಲ್ಲಿ ಹೊಸ ಬಗೆಯ ರುಚಿಯಿದೆ ಎನ್ನುವ
ಮನದಟ್ಟಾಗಬೇಕು. ಅದು ಬಿಟ್ಟು ರೈತನಷ್ಟೇ ಕಷ್ಟ
ಬೆಳೆದು ನಮ್ಮ ಆಹಾರದ ಭದ್ರತೆ ಹೆಚ್ಚಿಸಬೇ
ಅಭಿಲಾಷೆಗಳು ಬೆಳೆಯುವಂತೆ ಮೇಳಗಳು ಪ್ರೇ
ಬಾರದು. ಆದರೆ ದುರದೃಷ್ಟವೆಂದರೆ ಆಗುತ್ತಿರುವುದು
ಮಾತ್ರ! ಕೃಷಿ ತಂತ್ರಜ್ಞಾನದ ಸಂವಹನದ ಪರಿ ರೈತ
ಒಳಗೊಳ್ಳುವ ಪ್ರಯತ್ನಗಳ ಮೂಲಕ ಭರವಸೆ
ಹೆಚ್ಚಿಸಬಹುದಷ್ಟೇ! ಆದರೆ ಆಗಬೇಕಲ್ಲ. ರೈತಾ
ಇಂದಿಗೂ ಅನಿವಾರ್ಯದ ವೃತ್ತಿಯಷ್ಟೆ.

ಯೋಗೇಶ್ ಮಾಸ್ಟರ್

ಸುಗಾಣಿದ ಹೂರಣ

ಸಿದ್ಧಾರ್ಥ ಎಂಬ ಬೀಜರೂಪ

ಹರ್ಮನ್ ಹೆಸ್ಸೆ (1877 - 1962) ಓರ್ವ ...ನ್ (ಸ್ವಿಸ್ ಕೂಡ) ಕವಿ, ಕಾದಂಬರಿಕಾರ ಮತ್ತು ...ರ. ಇವರ ಹೆಸರಾಂತ ಕೃತಿ 'ಸಿದ್ಧಾರ್ಥ'. ಇದು ... ಪುಟ್ಟ ಕಾದಂಬರಿ. ನನ್ನ ಗ್ರಹಿಕೆಯ ಮಟ್ಟಿಗೆ ಈ ...ಬರಿ ಪಾಲೋ ಕೋಲೋನ 'ಅಲ್‌ಕೆಮಿಸ್ಟ್' ...ಂದು, ರಾಬಿನ್ ಶರ್ಮರ 'ದ ಮಾಂಕ್ ಹೂ ...ಸ್ ಹಿಸ್ ಫೆರಾರಿ'ಯಂತಹ ಅನೇಕ ತಾತ್ವಿಕ ಮತ್ತು ...ತ್ಮಿಕ ಒಳನೋಟಗಳನ್ನು ನೀಡುವಂತಹ ...ಬರಿಗಳಿಗೆ ಪ್ರೇರಣೆ ನೀಡಿರಬಹುದಾದ ಮೊದಲ ...ಲ್ಲಿ ನಿಲ್ಲುತ್ತದೆ.

...ಸಿದ್ಧಾರ್ಥ'ನ ಹೊರತಾಗಿ ನನಗೆ ಅತ್ಯಂತ ಪ್ರಿಯವಾದ ...ುವರ ಇನ್ನೊಂದು ಕಾದಂಬರಿ 'ಡಿಮಿಯನ್'. ...ರ್ಥ'ದಲ್ಲಿ ಸಿದ್ಧಾರ್ಥನೆಂಬ ಬ್ರಾಹ್ಮಣ ಯುವಕ ತನ್ನ ...ಷಣೆಯ ಮೂಲಕ ತನ್ನ ಇರುವಿಕೆಯನ್ನು (ಅಸ್ತಿತ್ವ) ...ಭವ ಮತ್ತು ಅನುಭಾವದ ಮೂಲಕ ...ಕ್ಷರಿಸಿಕೊಳ್ಳುವಂತೆ, 'ಡಿಮಿಯನ್'ನಲ್ಲಿ ಎಮಿಲ್ ...ರ್ ಎಂಬಾತನ ಬಾಲ್ಯದ ಅನುಭವಗಳ ಮೂಲಕ ... ಜಗತ್ತುಗಳ ನಡುವೆ ಇರುವ ಜಂಜಾಟವನ್ನೂ, ...ವನ್ನೂ ಮತ್ತು ಸಂಬಂಧವನ್ನೂ ಅನಾವರಣ ಮಾಡುತ್ತಾ ...ಗುತ್ತಾರೆ. ವಾಸ್ತವವಾಗಿ 'ಸಿದ್ಧಾರ್ಥ' ಕಾದಂಬರಿಯಲ್ಲಿ ...ಳೇ ಸಂಕೇತವೆಂದು ಭಾವಿಸಬಹುದಾದರೆ, ಉಳಿದಂತ ... ಆಯಾಮಗಳಲ್ಲಿ ವೈವಿಧ್ಯದ ಅರ್ಥಗಳನ್ನು ...ವಂತಹ ಸಾಂಕೇತಿಕ ರೂಪಕಗಳೇನೂ ಇಲ್ಲದೇ ... ತಮ್ಮ ಗ್ರಹಿಕೆಯಂತೆ ನೇರವಾಗಿ ವಸ್ತುವನ್ನು ...ಸುತ್ತಾ ಹೋಗುತ್ತಾರೆ. ತಾವು ಗ್ರಹಿಸಿರುವ ...ನೋಟಗಳ ವಿವರಣೆ ನೀಡುತ್ತಾರೆ. ಆದರೆ 'ಡಿಮಿಯನ್' ...ಲ್ಲಿ ಮಧ್ಯಮ ವರ್ಗದ ಕುಟುಂಬದ ಶಾಲಾ ಬಾಲಕನ ...ಹಿಕೆ ಮತ್ತು ಸಾಮಾಜಿಕ ಪ್ರಪಂಚಗಳ ನಡುವಿನ ..., ಅದರ ಭಯ ಮತ್ತು ಕಾಲದ ಜೊತೆಯಲ್ಲಿ ... ರೂಪಾಂತರಗೊಳ್ಳುವ ಪ್ರಕ್ರಿಯೆ, ಭ್ರಾಮಕ ಜಗತ್ತು (...ಮೆ) ಮತ್ತು ಬದುಕುವ ಜಗತ್ತು (ವಾಸ್ತವ) ಇವೆರಡರ ...ವೆ ವ್ಯಕ್ತಿಯ ಭಾವನೆಗಳು ಮತ್ತು ವಿಚಾರಗಳು ತಲ್ಲಣ ... ಪಲ್ಲಟಗೊಳ್ಳುವ ರೀತಿ, ಈ ಎರಡರ ಒತ್ತಡಗಳು- ... ಹತ್ತು ಹಲವು ವಿಷಯಗಳ ಅನಾವರಣದೊಂದಿಗೆ ...ಗೆ ಹಲವು ಕ್ಷೇತ್ರಗಳ ಮತ್ತು ಹತ್ತಾರು ಬಗೆಯ ...ನೋಟಗಳನ್ನು ದೊರಕಿಸಿಕೊಡುತ್ತಾ ಹೋಗುತ್ತವೆ. ...ಬರಿಯೇ ಆದರೂ ಅದೊಂದು ಕಾವ್ಯ ರೂಪಕದಂತೆ ...ರೆ, 'ಸಿದ್ಧಾರ್ಥ'ವನ್ನು ಗದ್ಯ ರೂಪದ ಕಥನ ...ಬಹುದು.

ಹೃದಯ ಮತ್ತು ಮನಸ್ಸು

ಪಶ್ಚಿಮದವರ ಮನಸ್ಸು ಮತ್ತು ಪೂರ್ವದವರ ...ಯವೆರಡೂ ಹೆಸ್ಸೆಯ ಸಿದ್ಧಾರ್ಥನಲ್ಲಿ ಕೆಲಸ ಮಾಡುತ್ತದೆ. ...ನೇ ಇರಲಿ, ನನ್ನ ಒಲವನ್ನು ಡಿಮಿಯನ್ ಕೂಡ ...ಕೊಂಡಿರುವುದರಿಂದ ಸಿದ್ಧಾರ್ಥನೊಂದಿಗೆ ತಾಳೆ ...ಡುವ ಅನವಶ್ಯಕ ತವಕ ಉಂಟಾಗುತ್ತದೆ. ಆದರೆ, ...ತ ವಿಷಯ ತಿಳಿವಳಿಕೆಯಿಂದಾಗಿ ಬೇರೆ ಬೇರೆ ...ಯನಗಳಿಂದ ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ...ರಣೆಗಳಿಂದ ಲೋಪಗಳನ್ನು ಕಾಣಬಹುದಾದರೂ ...ಮಾಣಿಕವಾಗಿ ಮೂಡಿಬಂದಿರುವ ಸಿದ್ಧಾರ್ಥನಿಗೆ ಆ ...ರ್ಥನೇ ಸಾಟಿ ಎಂಬುದು ನಿಜ.


ಹರ್ಮನ್ ಹೆಸ್ಸೆಗೆ ಎರಡನೇ ವಿಶ್ವ ಯುದ್ಧದ ...ಾವಗಳಾಗಲಿ, ತಾನಿದ್ದಂತಹ ದೇಶದ ಪರಿಸರ ಮತ್ತು ...ಸ್ಕೃತಿಕ ದ್ವಂದ್ವದ ಪ್ರಭಾವವಾಗಲಿ, ಸ್ವಯಂ ಬಾಳಿ ...ಕಿದ ಸಮಾಜದ ವೈಯಕ್ತಿಕ ಗ್ರಹಿಕೆಗಳಾಗಲಿ; ಅವರ ...ಗಳಲ್ಲಿ ಎಷ್ಟೇ, ಹೇಗೇ ಕೆಲಸ ಮಾಡಿದ್ದರೂ, ಅವರ ...ತ ಕೃತಿಯ ಸಿದ್ಧಾರ್ಥದ ಅಧ್ಯಯನದಲ್ಲಿ ಅವರಿಗೆ ...ತೀಯ ತತ್ವಶಾಸ್ತ್ರದ ಮೇಲಿನ ಒಲವು ಮತ್ತು ಬುದ್ಧನ ...ನೋಟಗಳ ಗ್ರಹಿಕೆಯನ್ನು ಧಾರಾಳವಾಗಿ ಕಾಣುತ್ತದೆ. ... ಕೃತಿಯನ್ನು ಮುಂದಿಟ್ಟುಕೊಂಡು ಕೃತಿಕಾರನ ಹಿನ್ನೆಲೆ ... ಕೃತಿಯ ರಚನೆಯ ಸಮಯದ ಆಗುಹೋಗುಗಳನ್ನು ...ಸಾನ ಮಾಡಿದರೆ, ಆ ಕೃತಿಯು ಹೇಳದೇ ...ವುದನ್ನೆಲ್ಲಾ ಗ್ರಹಿಸಲು, ಅವರು ಏಕೆ ಅವನ್ನು ...ತ್ತಿದ್ದಾರೆ ಎಂದು ಹೇಳಲೂ ಒಂದು ಹಂತಕ್ಕೆ ಸಾಧ್ಯ ...ದೂ ಕೃತಿ ಏನನ್ನು ಧ್ವನಿಸಲು ಯತ್ನಿಸುತ್ತಿದೆ ಎಂಬುದನ್ನು ...ರಿಚಯದ ಆಗ್ರಹವಿಲ್ಲದೇ ಸಾಕ್ಷೀಕರಿಸಿದರೆ ಯಾವುದೇ ...ದಲ್ಲಿ ಯಾವುದೇ ಸಮಯದಲ್ಲಿ, ಓದುಗ ತನ್ನ ಬದುಕಿಗೆ, ..., ಸಮಾಜ, ಸಂಸ್ಕೃತಿಯ ವಿದ್ಯಮಾನಕ್ಕೆ, ...ಯಿಸಿಕೊಳ್ಳಬಹುದು ಮತ್ತು ಕೃತಿಯ ಸಾರವನ್ನು ...ನಾಗಿಸಿಕೊಳ್ಳಬಹುದು. ಇಲ್ಲವಾದರೆ ಚಾರಿತ್ರಿಕ ...ಣೆಗಳು ಕೃತಿಕಾರನ ಮತ್ತು ಕೃತಿಯ ಚಾರಿತ್ರಿಕ,

ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಯ ಒಂದು ಮಹತ್ವದ ದಾಖಲೆಯಾಗುತ್ತದೆ ಅಷ್ಟೇ. ಒಂದು ಸ್ಮಾರಕಕ್ಕೂ ಮತ್ತು ಬೀಜಕ್ಕೂ ವ್ಯತ್ಯಾಸವಿರುವಂತೆ ವಿಶ್ಲೇಷಣೆಯ ದಾಖಲೆಗಳು ಸ್ಮಾರಕಗಳಾಗುತ್ತವೆ, ಗ್ರಹಿಕೆ ಮತ್ತು ಅನುಭಾವಗಳು ಮೊಳಕೆಯೊಡೆಯುವಂತಹ ಬೀಜಗಳಾಗುತ್ತವೆ. ಕೆಲವೊಮ್ಮೆ ಸ್ಮಾರಕಗಳ ತಿಳಿವಳಿಕೆ ಮತ್ತು ಬೀಜಗಳ ಅರಿವು ಎರಡೂ ಕೂಡಿ ದೃಷ್ಟಿಯನ್ನು ಮತ್ತಷ್ಟು ನಿಖರ ಮತ್ತು ಪ್ರಖರಗೊಳಿಸುತ್ತದೆ.- ಇದನ್ನು ಅಲ್ಲಗಳೆಯಲಾಗದು.


ಹರ್ಮನ್ ಹೆಸ್ಸೆಯ ಸಿದ್ಧಾರ್ಥ ಮತ್ತು ಡಿಮಿಯನ್ (ಸದ್ಯಕ್ಕೆ ನಾನು ಈ ಎರಡೇ ಓದಿರುವುದು) ಬೀಜಗಳೇ ಹೊರತು ಸ್ಮಾರಕಗಳಲ್ಲ, ಏಕೆಂದರೆ ಅವುಗಳಲ್ಲಿ ಚಾರಿತ್ರಿಕವಾಗಿ ನಿಖರಪಡಿಸಲಾಗುವಂತಹ ಅಂಶಗಳನ್ನು ಗುರುತಿಸುವುದಿಲ್ಲ. ಬದಲಾಗಿ ಚರಿತ್ರೆಯ ಅವಶೇಷಗಳಲ್ಲಿ ತನ್ನ ಸಾಮರ್ಥ್ಯಕ್ಕೆ ಎಟುಕಿದ ಸತ್ವವನ್ನು ಹೀರಿಕೊಂಡು ತಾನೇ ತನ್ನ ನೆಲೆಯಿಂದ ಮತ್ತು ಸೆಲೆಯಿಂದ ವಿವೇಚಿಸುವ, ವಿಕಾಸವಾಗುವ ಪ್ರಕ್ರಿಯೆ ತಂತಾನೆ ರೂಪುಗೊಳ್ಳುತ್ತಾ ಹೋಗುತ್ತದೆ.

ಪಾತ್ರಗಳೆಂಬ ರೂಪಕಗಳು

ಸಿದ್ಧಾರ್ಥದಲ್ಲಿ ಎಲ್ಲಾ ನೆಲೆಗಳಲ್ಲಿ ಹೆಸ್ಸೆ ತಾವೇ ನಿಂತು ವಿಷಯಗಳನ್ನು ಗ್ರಹಿಸುತ್ತಾ ವಿವರಿಸುತ್ತಾರೆ. ಸಿದ್ಧಾರ್ಥದಲ್ಲಿ ಪಾತ್ರಗಳೇ ನೆಲೆಗಳ ಪರಿಚಯಾತ್ಮಕವಾದ ರೂಪಕಗಳಾಗುತ್ತವೆ. ಮುಖ್ಯ ಪಾತ್ರ ಸಿದ್ಧಾರ್ಥ, ಸಿದ್ಧಾರ್ಥನ ತಂದೆ, ತಾಯಿ, ಅವನ ಗೆಳೆಯ ಗೋವಿಂದ, ಹಿರಿಯ ಸಮಾನ, ಕಮಲ,







ಕಾಮಸ್ವಾಮಿ, ವಾಸುದೇವ ಮತ್ತು ಕಮಲೆಯ ಮಗ.

ಸಿದ್ಧಾರ್ಥನ ತಂದೆ ಮತ್ತು ತಾಯಿ ಓರ್ವ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದವರು. ಅವರ ಮಗ ಸಿದ್ಧಾರ್ಥನೂ ಆಗಿನ ಬ್ರಾಹ್ಮಣರಿಗೆ ಮಾತ್ರವೇ ಸಹಜವಾದಂತಹ ಔಪಚಾರಿಕ ಶಿಕ್ಷಣವನ್ನು ಪಡೆದಿರುವವನು. ಆದರೆ ಪಡೆದ ಶಿಕ್ಷಣಕ್ಕಿಂತ ತಾನು ಹೆಚ್ಚು ಗ್ರಹಿಸಲು ಹಾತೊರೆಯುವ ಅವನಿಗೆ ವಸ್ತುಗಳ ಅಭಾವ ಕಾಡುತ್ತವೆ. ಅದೇ ವೇದಸೂಕ್ತಗಳು, ಅದೇ ಉಪನಿಷತ್ತಿನ ಜಿಜ್ಞಾಸೆಗಳು, ಅದೇ ವೈದಿಕ ಆಚಾರವಿಚಾರಗಳು ಅವನಿಗೆ ಜಿಗುಪ್ಸೆ ಹುಟ್ಟಿಸುವುದರ ಜೊತೆಗೆ ಹೊಸತರ ಆಸಕ್ತಿ ಮತ್ತು ಹುಮ್ಮಸ್ಸು ಅವನಿಗೆ ಅದನ್ನು ತೊರೆಯುವಂತೆ ಮಾಡುತ್ತಿರುತ್ತವೆ. ಹಾಗಾಗಿ ಅವನು ತನಗೆ ಹಾಸುಹೊಕ್ಕು ತಿಳಿದಿರದ ಸಮಾನರ ಬಗ್ಗೆ ಆಸಕ್ತಿ ಮೂಡಿ ಅದರಲ್ಲಿನ ಒಂದು ಭಾಗವಾಗಿ ತನ್ನ ಅನ್ವೇಷಣೆಯನ್ನು ಮುಂದುವರಿಸುವ ಆಸಕ್ತಿಯನ್ನು ತಂದೆಯ ಬಳಿ ತೋಡಿಕೊಂಡಾಗ ಸಹಜವಾಗಿ ಅವರು ನಿರಾಕರಿಸುತ್ತಾರೆ. ಆದರೆ ಇವನು ತನ್ನ ಸಾತ್ವಿಕ ಹಟಮಾರಿತನದಿಂದ ತಂದೆಯನ್ನು ಒಪ್ಪಿಸಿ ಮನೆಯನ್ನು ಬಿಟ್ಟು ಸಮಾನನಾಗಲು ಕಾಡಿಗೆ ನಡೆಯುತ್ತಾನೆ. ಅವನಿಗೊಬ್ಬ ಬಾಲ್ಯದ ಗೆಳೆಯ. ಅವನ ಹೆಸರು ಗೋವಿಂದ. ಅವನು ಸಾಮಾನ್ಯ ತಿಳಿವಳಿಕೆಯುಳ್ಳ ಸಾಧಾರಣ ವ್ಯಕ್ತಿಯಾದರೂ, ತನ್ನ ಗೆಳೆಯನಾದ ಸಿದ್ಧಾರ್ಥನಲ್ಲಿ ವಿಶೇಷತೆಯೂ, ವಿರಳವಾದಂತಹ ಪ್ರಜ್ಞಾವಂತಿಕೆಯೂ, ಸೂಕ್ಷ್ಮ ವಿವೇಚನೆಯೂ ಇವೆ ಎಂದು ಗುರುತಿಸಿದ್ದು ಮುಂದೊಂದು ದಿನ ಈ ಚರ್ವಿತಾಚರ್ವಣ ದೈನಿಕ ಬದುಕಿನಿಂದ ಹೊರತಾದ ಮಹತ್ವವನ್ನು ಸಾಧಿಸುತ್ತಾನೆ ಎಂದು ನಂಬದ್ದೇ ಅಲ್ಲದೇ ಅವನ ಜೊತೆಗೂಡಿ ಹೂವಿನ ಜೊತೆ ನಾರೂ ಸ್ವರ್ಗಕ್ಕೇರುವುದೆಂಬ ಆಸೆ ಹೊಂದಿರುತ್ತಾನೆ.

ಸಿದ್ಧಾರ್ಥ ಸಮಾನನಾಗಲು ಕಾಡಿಗೆ ಹೋದಾಗ ಗೋವಿಂದನೂ ಹಿಂಬಾಲಿಸುತ್ತಾನೆ. ಗೋವಿಂದ ಮಹತ್ತರವಾದುದು ಏನೋ ಘಟಿಸುತ್ತದೆ ಎಂದು ನಂಬಿ ಅವನಿಗೆ ಅಗತ್ಯವಿರುವ ಎಲ್ಲಾ ಕ್ರಿಯೆಗಳನ್ನೂ ನೀಡಿದ

ನಿರ್ದೇಶನಕ್ಕೆ ತಕ್ಕಂತೆ ಮಾಡುವವನಾದರೆ, ಸಿದ್ಧಾರ್ಥನೆಂಬ ಆ ಸ್ವತಂತ್ರ ಚಿಂತಕನು ಮಾಡುವುದನ್ನೆಲ್ಲಾ ಮಾಡಿ, ಶ್ರದ್ಧೆ ಮತ್ತು ನಂಬುಗೆಗಳಿಂದ ಹೊರತಾಗಿ ಪ್ರಶ್ನಿಸುತ್ತಾನೆ. ಕೌಪಿನ ಉಟ್ಟುಕೊಂಡು ಏನೋ ಮಾಡಲು ಸಾಮಾನ್ಯ ಜನರಿಗರ್ಥವಾಗದಂತಹ ರೀತಿಗಳಲ್ಲಿ ಬದುಕುತ್ತಾ ಮತ್ತು ಅವರು ಬೆರಗಾಗುವಂತಹ ಅಸಮಾನ್ಯವಾದುದನ್ನು ಪ್ರದರ್ಶಿಸಲು ಶಕ್ಯವಿರುವ ಈ ಸಮಾನರೆಂಬ ಸಾಧುಗಳ ಬದುಕು ವ್ಯರ್ಥವಾದದ್ದು, ಭ್ರಾಮಕವಾದದ್ದು ಎಂದು ಅರಿತುಕೊಂಡ ಸಿದ್ಧಾರ್ಥ ಅದರಿಂದ ಹೊರಗೆ ಹೋಗಲು ನಿರ್ಧರಿಸುತ್ತಾನೆ. ಆದರೆ ಗೋವಿಂದ ಮುಂದುವರಿಸುವ ಇಚ್ಛೆಯನ್ನು ಉಳ್ಳವನಾಗಿರುತ್ತಾನೆ. ಅದೇ ಸಮಯದಲ್ಲಿ ಗೌತಮ ಬುದ್ಧನ ಕೀರ್ತಿ ಇವರನ್ನು ತಲುಪಿರುತ್ತದೆ. ಸಮಾನರಿಂದ ಹೊರಗೆ ಹೋಗಲು ನಿರ್ಧರಿಸಿದಂತಹ ಸಮಯದಲ್ಲೇ ಬುದ್ಧನ ಬಗ್ಗೆ ಪಡೆದ ಪರಿಚಯ ಅವರನ್ನು ಅಲ್ಲಿಗೆ ಒಯ್ಯುತ್ತದೆ.

ಜೇತವನದಲ್ಲಿ ಬುದ್ಧನ ಕಂಡಾಗ ಇತರರಂತೆ ಗೋವಿಂದನೂ ಬುದ್ಧನ ಪ್ರಭಾವಕ್ಕೆ ಒಳಗಾಗಿ ಬಿಕ್ಕುವಾಗಿ ಸಂಘಕ್ಕೆ ಸೇರಿಕೊಳ್ಳುತ್ತಾನೆ. ಆದರೆ ಸಿದ್ಧಾರ್ಥ ಬುದ್ಧನ ಬೋಧನೆಗಳಲ್ಲಿರುವ ಪ್ರಾಮಾಣಿಕ ಬದ್ಧತೆಯನ್ನು ಗುರುತಿಸಿದರೂ ಅವನು ನೀಡುವ ನಿರ್ದೇಶನ ಆತ್ಮಸಾಕ್ಷಾತ್ಕಾರಕ್ಕೆ ಸಹಕಾರಿಯಾಗದೇ ನೈತಿಕ ಮತ್ತು ಶೀಲವಂತ ಬದುಕನ್ನು ನಡೆಸಲಿಕ್ಕೆ, ಎದುರಾಗುವ ಮತ್ತು ಜೊತೆಗೇ ಇರುವ ದುಃಖ ಮತ್ತು ದುರಂತಗಳಿಗೆ ಬಲಿಯಾಗದೇ ಇರುವುದಕ್ಕೆ ನೀಡುವ ನಿರ್ದೇಶನಗಳಾಗಿ ಇರುವುದನ್ನು ಗಮನಿಸಿ ಅಲ್ಲಿಂದಲೂ ಹೊರಡುತ್ತಾನೆ. ಇಲ್ಲಿ ಹೆಸ್ಸೆ ತಾವೇ ಬುದ್ಧನ ಮತ್ತು ಸಿದ್ಧಾರ್ಥನ ಎರಡೂ ಎಡೆಗಳಲ್ಲಿ ನಿಂತು, ತಾವೇ ಪ್ರಶ್ನಿಸಿಕೊಂಡು ತಾವೇ ಅದಕ್ಕೆ ಉತ್ತರಿಸಿಕೊಂಡು ಹೋಗುವ ಪ್ರಯತ್ನ ಕಾಣುತ್ತದೆ. ಇಡೀ ಕಾದಂಬರಿಯಲ್ಲಿ ಅದು ಎಲ್ಲಾ ಪಾತ್ರಗಳಲ್ಲೂ ತೋರುತ್ತದೆ.

ಬುದ್ಧನಿಗಿಂತ ಉತ್ತಮ ಗುರುವನ್ನು ಹೊಂದಲು ತನ್ನ ಅನ್ವೇಷಣೆಯಲ್ಲ, ತನ್ನ ಅರಿವೇ ತನ್ನ ಗುರುವಾಗಬೇಕು ಎಂಬ ನಿರೀಕ್ಷೆಯಿಂದ ಹೊರಡುವ ಸಿದ್ಧಾರ್ಥನಿಗೆ ಜ್ಞಾನೋದಯವಾಗುತ್ತದೆ. ಅದೆಂದರೆ ಯಥಾರ್ಥವಾದ ಅಥವಾ ಅಸ್ತಿತ್ವ ವಾದ. ಜಗತ್ತಿನಲ್ಲಿರುವ ಎಲ್ಲಾ ವಸ್ತು ವಿಷಯಗಳು ಅವುಗಳ ಗುಣ ಸ್ವಭಾವದಂತಿರುತ್ತವೆ. ಯಾವುದೂ ಯಾವುದನ್ನೂ ಹುಡುಕುವ ಅಗತ್ಯವಿಲ್ಲ ಎಂದೂ, ಅಸ್ತಿತ್ವದಲ್ಲಿ ಘಟಿಸುವ ವಿದ್ಯಮಾನಗಳಿಗೆ ತೆರೆದುಕೊಳ್ಳುತ್ತಾ ಹೋಗಬೇಕು ಎಂದೂ, ಸಾಂಸ್ಥಿಕ ರೂಪವು ಜಡವೆಂದೂ ಅದರಲ್ಲಿ ಜೀವನದ ಪ್ರವಹನೆ ಮತ್ತು ವಿಕಾಸ ಇಲ್ಲವೆಂದೂ ಅವನು ಮುಂದೆ ಹೋಗುತ್ತಾನೆ. ಆಗಲೇ ಅವನಿಗೆ ಕಮಲೆಯೆಂಬ ವೇಶ್ಯೆಯ ಪರಿಚಯವಾಗುವುದು. ತುಂಬು ಯೌವನದ ಸಿದ್ಧಾರ್ಥನ ಲೈಂಗಿಕತೆಯ ಅಗತ್ಯವನ್ನು ಕಮಲೆ ತೀರಿಸುವುದಲ್ಲದೇ, ಅವನ ಲೌಕಿಕ ಬದುಕಿಗೆ ನೆರವಾಗುವಂತೆ ಕಾಮಸ್ವಾಮಿ ಎಂಬ ವ್ಯಾಪಾರಿಯನ್ನು ಪರಿಚಯಿಸಿ, ಅಲೌಕಿಕ ಜೀವನಕ್ಕೆ ಹೊರತಾದಂತಹ ಮತ್ತೊಂದು ಬಗೆಯ ಜೀವನವನ್ನು ಪರಿಚಯಿಸಿ ತಾನೇ ಅಲೌಕಿಕ ಬದುಕಿನತ್ತ ಮುಖ ಮಾಡುವ ಹೊತ್ತಿಗೆ ಸಿದ್ಧಾರ್ಥನಿಗೆ ಅದುವರೆಗಿನ ಲೌಕಿಕಾನುಭವ ಸಾಕಾಗುತ್ತದೆ. ಅದೆಷ್ಟರಮಟ್ಟಿಗೆ ಒಗಟಾಗುತ್ತದೆ ಎಂದರೆ ತನ್ನ ತಾನು ಕೊಂದುಕೊಳ್ಳುವಷ್ಟು ಬೇಸತ್ತು ನೀರಿಗೆ ಶರಣಾದಾಗ, ಬೌದ್ಧ ಬಿಕ್ಕುವಾಗಿ ಸಂಘದಲ್ಲಿ ನಿಯಮಗಳಿನುಸಾರ ಜೀವನ ಮಾಡುತ್ತಿದ್ದ ಗೋವಿಂದ ಮತ್ತೆ ಸಿಗುತ್ತಾನೆ. ಅಲ್ಪ ಕಾಲದ ಮಿಲನದ ನಂತರ ತಮ್ಮ ತಮ್ಮ ದಾರಿಗಳಿಗೆ ತೆರಳುತ್ತಾರೆ.


ಅಲ್ಲಿಂದ ಮುಂದೆ ಈ ಹಿಂದೆಯೇ ಪರಿಚಯವಾಗಿದ್ದ ನದಿ ದಾಟಿಸುವ ಅಂಬಿಗನಾದ ವಾಸುದೇವನಲ್ಲಿ ಸಿದ್ಧಾರ್ಥ ಆಶ್ರಯ ಪಡೆಯುತ್ತಾನೆ. ನದಿಯೊಂದಿಗೂ ಜೀವಂತವಾಗಿ ಸ್ಪಂದಿಸುವ ವಾಸುದೇವ ಹಲವು ವಿಷಯಗಳಲ್ಲಿ ಸಿದ್ಧಾರ್ಥನ ಆಲೋಚನೆಗಳಿಗೆ ಶಕ್ತಿಯೊದಗಿಸುತ್ತಿರುತ್ತಾನೆ, ವಿಮರ್ಶಿಸುತ್ತಿರುತ್ತಾನೆ, ಸರಿದಾರಿಗೆ ತರುವ ಮಾರ್ಗದರ್ಶಕನೂ ಆಗುತ್ತಾನೆ. ಬುದ್ಧನ ಮರಣದ ಸಮಯದಲ್ಲಿ ಅವನ ಕಾಣಲು ಹೋಗುವ ಕಮಲೆಯು ವಾಸುದೇವನ ಜೋಪಡಿಯ ಬಳಿಯೇ ಸಿದ್ಧಾರ್ಥನಿಂದ ಪಡೆದ ಮಗನೊಂದಿಗೆ ಬಂದು ಹಾವು ಕಡಿಸಿಕೊಂಡು ಸಾಯುತ್ತಾಳೆ. ಮಗನ ಬಗ್ಗೆ ವ್ಯಾಮೋಹ ಬೆಳೆಸಿಕೊಂಡು ಅವನನ್ನು ತನ್ನ ಪಾಶದಲ್ಲಿ ಕಟ್ಟಿಕೊಳ್ಳಲು ಯತ್ನಿಸುವ ಸಿದ್ಧಾರ್ಥನ ಭ್ರಮೆಯ ಪರೆ ಹರಿಯುವಂತೆ ಆಗಲೂ ಸಹಕರಿಸುವುದು ಇದೇ ಅಂಬಿಗನಾದ ವಾಸುದೇವ.

ತನ್ನ ತಂದೆ ತನ್ನ ಬಿಟ್ಟಂತೆ ತಾನೂ ತನ್ನ ಮಗನ ಬಿಟ್ಟುಕೊಡಲು ಸಿದ್ಧನಾದ ಸಿದ್ಧಾರ್ಥನಿಗೆ ಮುಂದೊಂದು ದಿನ ವಾಸುದೇವನೂ ವಿದಾಯ ಹೇಳುತ್ತಾನೆ. ಅವನು ತನ್ನ ಮಾಗಿದ ಮತ್ತು ಮುಕ್ತವಾದ ದಿನಗಳನ್ನು ಇನ್ನೂ ಏಕಾಂತದಲ್ಲಿ ಅನುಭಾವದಲ್ಲಿ ಕಂಡುಕೊಳ್ಳಲು ಹೊರಟುಹೋದ ಮೇಲೆ, ದೋಣಿ ನಡೆಸುವ ಕಾಯಕವನ್ನು ಮುಂದುವರಿಸುವ ಸಿದ್ಧಾರ್ಥ ಹಣ್ಣಾಗುತ್ತಾನೆ ಮತ್ತಷ್ಟು ಮಾಗುತ್ತಾನೆ. ಹಾಗೆಯೇ ವೃದ್ಧನಾಗಿದ್ದ ಗೋವಿಂದ ಮತ್ತೆ ಸಿಗುತ್ತಾನೆ. ಗೋವಿಂದನ ಅನ್ವೇಷಣೆ ಇನ್ನೂ ಮುಂದುವರೆದಿರುತ್ತದೆ. ಅನ್ವೇಷಣೆಯನ್ನು ನಿಲ್ಲಿಸುವುದರಲ್ಲೇ ಅನ್ವೇಷಣೆಯ ಗುರಿಯನ್ನು ಕಂಡುಕೊಂಡಿದ್ದ ಸಿದ್ಧಾರ್ಥ ಮಹಾಸ್ತಿತ್ವವಾದವನ್ನು ಸರಳವಾದ ಉದಾಹರಣೆಯಿಂದ ಅವನಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತಾನೆ. ಎಂದಿನಂತೆ ಗೋವಿಂದ ಒಳ್ಳೆಯ ಕೇಳುಗನಾಗಿ ಒಪ್ಪಿಕೊಂಡು ನದಿ ದಾಟುವುದರೊಂದಿಗೆ ಕಥೆ ಮುಗಿಯುತ್ತದೆ.

ಹೆಸ್ಸೆಯ ಅನ್ವೇಷಣೆಯು ಆಧ್ಯಾತ್ಮಿಕ ಮತ್ತು ತಾತ್ವಿಕದಾದ್ದರಿಂದ ಹಲವು ವಿಷಯಗಳನ್ನು ಅವರು ನಿರ್ಲಕ್ಷಿಸಿರುವರು. ಅಧ್ಯಾತ್ಮ ಮತ್ತು ವ್ಯಕ್ತಿವಾದವೆರಡೂ ತೀರ ಸಮೀಪವಿರುವುದರಿಂದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯಗಳೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳದೇ ಭಾರತದಲ್ಲಿ ಶಕ್ತಿಯುತವಾಗಿ ಪ್ರಚಲಿತದಲ್ಲಿದ್ದ ಶ್ರೇಣೀಕೃತ ಸಮಾಜವನ್ನು ಅಷ್ಟಾಗಿ ಗಮನಿಸುವುದಿಲ್ಲ, ವ್ಯಕ್ತಿಗಳಲ್ಲಿ ಪರಸ್ಪರ ಉಂಟಾಗುವ ಭಾವನಾತ್ಮಕ ಸಂಬಂಧದ ಜವಾಬ್ದಾರಿಗಳನ್ನು ಗುರುತಿಸಿಕೊಳ್ಳುವುದಿಲ್ಲ. ಭಾರತೀಯ ಮನಸ್ಥಿತಿಗೆ ಒಗ್ಗದಂತಹ ಸುಲಭವಾಗಿ ವಿದಾಯವನ್ನು ಹೇಳುವಂತಹ ಮನಸ್ಥಿತಿಯನ್ನು ಭಾರತೀಯ ಕಥಾಹಂದರದಲ್ಲಿ ಹೆಣೆಯುವ ಪ್ರಯತ್ನ ಮಾಡಿದ್ದಾರೆ. ವೈದಿಕದ ಲೌಕಿಕ ಉದ್ದೇಶವನ್ನು ಕೂಡ ಉಪನಿಷತ್ತುಗಳ ಅಲೌಕಿಕ ಉದ್ದೇಶದಂತೆಯೇ ಜಿಜ್ಞಾಸು ಭಾವದಲ್ಲಿ ನೋಡುತ್ತಾರೆ. ಕ್ರೈಸ್ತರ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವಿಕೆ, ತನಗಾಗಿ ಪ್ರಾರ್ಥಿಸು ಎಂಬ ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತಾರೆ.

ಇವಕ್ಕೆ ಹೊರತಾಗಿ ಭಾರತೀಯ ಆಧ್ಯಾತ್ಮಿಕ ಪರಂಪರೆ ಎಂದಕೂಡಲೇ ವೇದಗಳು, ಉಪನಿಷತ್ತುಗಳು ಮತ್ತು ಅವುಗಳನ್ನು ತಿಳಿದಿರುವ ಜ್ಞಾನಿಗಳೆಂದರೆ ಬ್ರಾಹ್ಮಣರು ಎಂದು ತೋರುವಂತಹ ವಿಷಯವನ್ನು ಹೆಸ್ಸೆ ಪಾತ್ರಗಳನ್ನು ಮುಂದಿಟ್ಟುಕೊಂಡು ನಿರಾಕರಿಸುತ್ತಾರೆ. ಬುದ್ಧನ ಅನುಸರಿಸುವುದರಿಂದ ನೈತಿಕ ಜೀವನವನ್ನು, ಶೀಲವಂತ ವ್ಯಕ್ತಿತ್ವವನ್ನು ಹೊಂದುವಂತಹ ಬೌದ್ಧರಾಗುತ್ತಾರೆಯೇ ಹೊರತು ಪ್ರಬುದ್ಧರಾಗುವುದಿಲ್ಲ ಎಂದೂ ಧ್ವನಿಸುತ್ತಾರೆ.

ಏನೇ ಆಗಲಿ ಸಿದ್ಧಾರ್ಥದಲ್ಲಿ ಸಿದ್ಧಾರ್ಥನೆಂಬ ಸ್ವತಂತ್ರ ಚಿಂತಕನ ಅನ್ವೇಷಣೆ ಮತ್ತು ಬುದ್ಧನೆಂಬ ಲೋಕಕಲ್ಯಾಣದ ಧೋರಣೆ ಮುಖಾಮುಖಿಯಾಗುವ ಒಂದು ತಾತ್ವಿಕ ಕಥನ ಹಲವು ಒಳಸುಳಿಗಳನ್ನು ಹೊಂದಿದೆ. ಮುಕ್ತವಾದಂತಹ ಒಳನೋಟಗಳನ್ನು ಕೊಡುತ್ತವೆ. ಅವುಗಳೇನು ಎಂದು ಮುಂದೆ ನೋಡೋಣ.



ಕಡ್ಡಾಯ ಯೋಗ: ಸೇನೆಯ ಆಗಸದಲ್ಲಿ ಕೇಸರಿ ಮೋಡಗಳು

ಯೋಗಾಭ್ಯಾಸ ಮತ್ತು ಯೋಗಾಸನಗಳ ಕುರಿತು ಹಲವಾರು ವಿಶ್ಲೇಷಣಾತ್ಮಕ ಬರಹಗಳು ಈಗಾಗಲೆ ಪ್ರಕಟವಾಗಿವೆ. ಕಾಲಾಂತರದಲ್ಲಿ ತುಂಬಾ ಬದಲಾವಣೆಗಳನ್ನು ಕಂಡಿರುವ ಯೋಗದ ದೈಹಿಕ ಕಸರತ್ತುಗಳು ಅಥವಾ ಆಸನಗಳು ಇಂದು ಧರ್ಮಾತೀತವಾಗಿವೆ. ಆದುದರಿಂದಲೆ ವಿಶ್ವಾದ್ಯಂತ ಅನೇಕ ಜನ ಒಂದು ಪರ್ಯಾಯ ವ್ಯಾಯಾಮ ವಿಧಾನವಾಗಿ ಯೋಗಾಸನಗಳನ್ನು ಮಾಡುತ್ತಿದ್ದಾರೆ. ಹೀಗೆ ಜಾತ್ಯತೀತವಾಗಿ ಪರಿಣಮಿಸಿರುವ ಯೋಗವನ್ನು ಪುನಃ ಹಿಂದೂ ಧರ್ಮದ ಆಚರಣೆಯಾಗಿ ಪರಿವರ್ತಿಸಲು ಸಂಘಪರಿವಾರ ಸಕಲ ಪ್ರಯತ್ನಗಳನ್ನೂ ಮಾಡತೊಡಗಿದೆ. ಅದರ ಭಾಗವಾಗಿ ಯೋಗವನ್ನು ಸಕಲ ರೋಗ ಪರಿಹಾರಿ ಎಂಬಂತೆ ಬಿಂಬಿಸಲಾಗುತ್ತಿದೆ. ಮೋದಿ ಸರ್ಕಾರದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಮತ್ತು ಗಿನ್ನೆಸ್ ದಾಖಲೆ ಎಂಬ ಬೃಹನ್ನಾಟಕದ ಪ್ರದರ್ಶನ ಮತ್ತು ಭಟ್ಟಂಗಿ ಮಾಧ್ಯಮಗಳಿಂದ ಇದರ ಅದ್ಭುತರಮ್ಯ ಬಣ್ಣನೆ ಎಲ್ಲವೂ ಅದೇ ಪ್ರಯತ್ನಗಳ ಮುಂದುವರಿಕೆಯಾಗಿದೆ. ಯೋಗ ದಿನಾಚರಣೆಯಂದು ಘಟಿಸಿರುವ ಒಂದು ವಿಶೇಷ ವಿದ್ಯಮಾನವೆಂದರೆ ಭಾರತೀಯ ಸೇನೆಯ ಪಾಲ್ಗೊಳ್ಳುವಿಕೆ. ತದನಂತರದ ಬೆಳವಣಿಗೆಯಲ್ಲಿ ಮೋದಿ ಸರ್ಕಾರದಿಂದ ಹೊರಟ ಸುತ್ತೋಲೆಯೊಂದು ಸೇನೆಯ ಭೂ-, ವಾಯು, ನೌಕಾವಿಭಾಗ ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ, ಔದ್ಯಮಿಕ ಭದ್ರತಾ ಪಡೆ, ಗಡಿ ಭದ್ರತಾ ಪಡೆ ಮುಂತಾದ ಅರೆಸೇನಾ ಪಡೆಗಳಿಗೆ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸಿದೆ. ಗಮನಾರ್ಹ ವಿಷಯವೆಂದರೆ ಅಲ್ಲಿ ಸೂರ್ಯ ನಮಸ್ಕಾರ ಮತ್ತು ಸಂಸ್ಕೃತ ಶ್ಲೋಕ ಪಠಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಇದರ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸಲು ಹೊರಟರೆ ಹಲವಾರು ಅಚ್ಚರಿಯ ಮಾಹಿತಿಗಳು ಹೊರಬೀಳುತ್ತವೆ.


ಸೇನೆ ಮತ್ತು ಯೋಗ

ಭಾರತೀಯ ಯೋಧರ ನಡುವಿನಲ್ಲಿ ಅತೃಪ್ತಿ, ಅಸಮಾಧಾನ ಹೊಗೆಯಾಡುತ್ತಿರುವುದು ವಾಸ್ತವ. ಸರ್ಕಾರ ಇದನ್ನು ತಹಬಂದಿಗೆ ತರಲು ಹರಸಾಹಸ ಪಡುತ್ತಿದೆ. ಅದಕ್ಕಾಗಿ ಬಳಸುತ್ತಿರುವ ಮಾರ್ಗೋಪಾಯಗಳಲ್ಲಿ ಯೋಗಾಭ್ಯಾಸ ಮತ್ತು ಧರ್ಮಬೋಧನೆಗಳೂ ಸೇರಿವೆ. ಮಾನಸಿಕ ಕ್ಲೇಷ ಮತ್ತು ಒತ್ತಡಗಳಿಂದ ಬರುವ ಕಾಯಿಲೆಗಳ ಚಿಕಿತ್ಸಾವಿಧಾನದ ಒಂದು ಭಾಗವಾಗಿ ಯೋಗದ ಬಳಕೆ ಹೆಚ್ಚುಕಡಿಮೆ ಎಲ್ಲೆಡೆ ಒಪ್ಪಿತವಾಗಿದೆ. ಆದರೆ ಸುಮಾರು 2008ರಿಂದ ಯೋಗವನ್ನೊಂದು ಕದನಕಲೆಯಾಗಿ ಮಾರ್ಪಡಿಸಲಾಗಿದೆ. ಯೋಗಾಭ್ಯಾಸ ಸೈನಿಕರ ದೈಹಿಕಶಕ್ತಿ, ಬಾಗುವಿಕೆ ಮತ್ತು ಸಮತೋಲನಗಳನ್ನು ವರ್ಧಿಸುವ ಮೂಲಕ ಅವರ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿ ಅವರನ್ನು ಆಂತರಿಕ ಮತ್ತು ಬಾಹ್ಯ ಶತ್ರುಗಳ ವಿರುದ್ಧ ಹೋರಾಡಲು ಸನ್ನದ್ಧರನ್ನಾಗಿಸುತ್ತದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಯೋಗ ಗುರುಗಳು ಬೋಧಿಸುವ ಆಧ್ಯಾತ್ಮಿಕ ವಿಚಾರಗಳು ಸೈನಿಕರು ತಮ್ಮ ಹಿರಿಯ ಅಧಿಕಾರಿಗಳ ಅವಮಾನದ ನುಡಿಗಳನ್ನು ತಾಳಿಕೊಳ್ಳುತ್ತ ಅವರ ಆಜ್ಞಾವರ್ತಿಗಳಾಗಲು ಸಹಕರಿಸುವಂತಿದೆ. ಎರಡು ವಿಧದ ಲಾಭಗಳಿಗಾಗಿ ಯೋಗದ ಬಳಕೆಯಾಗುತ್ತಿರುವಂತೆ ತೋರುತ್ತದೆ. ಒಂದು, ಅದು ಸೈನಿಕನ ಮಿದುಳನ್ನು ಹದಗೊಳಿಸಿ ಹಿರಿಯ ಅಧಿಕಾರಿಗಳ ಅಪ್ಪಣೆಗಳನ್ನು ಪ್ರಶ್ನಿಸದೆ ಪಾಲಿಸುವಲ್ಲಿ ಸಹಕಾರಿಯಾಗುತ್ತದೆ. ಎರಡು, ಯುದ್ಧಭೂಮಿಯಲ್ಲಿ ಹಿರಿಯ ಅಧಿಕಾರಿಗಳು ಯಾರನ್ನು ಶತ್ರುಗಳೆನ್ನುತ್ತಾರೊ - ಅವರು ಪಾಕಿಸ್ತಾನಿ ಸೈನಿಕರಿರಬಹುದು ಅಥವಾ ಈಶಾನ್ಯ ಭಾರತ, ಮಧ್ಯಭಾರತ, ಕಾಶ್ಮೀರದಂತಹ ಜಾಗಗಳಲ್ಲಿ ಭಾರತೀಯ ಚಳವಳಿಕಾರರಿರಬಹುದು - ಅವರ ಮೇಲೆ ಆಕ್ರಮಣ ಮಾಡಲು ನೆರವಾಗುತ್ತದೆ.

ಮೋದಿ ಸರ್ಕಾರ ಈಗ ಸೈನಿಕರ ಯೋಗ ಶಿಕ್ಷಣಕ್ಕಾಗಿ ನೇಮಿಸಿರುವುದಾದರೂ ಯಾರನ್ನು? ಬಾಬಾ ರಾಮದೇವನ ಪತಂಜಲಿ ಯೋಗಪೀಠದ ಶಿಕ್ಷಕರನ್ನು! ಮೋದಿಯ ಖಾಸಾ ದೋಸ್ತ್‌ಗಳಲ್ಲೊಬ್ಬನಾದ ರಾಮದೇವ ಹೇಳಿಕೇಳಿ ಸಂಘ ಪರಿವಾರದ ದೊಡ್ಡ ಪರಿಚಾರಕ ಹಾಗೂ ಪ್ರಚಾರಕ. ಅವನ ವಿರುದ್ಧ ಅನೇಕ ವಂಚನೆಯ ಪ್ರಕರಣಗಳು ದಾಖಲಿಸಲ್ಪಟ್ಟಿದ್ದು ಕೋರ್ಟುಗಳಲ್ಲಿ ವಿಚಾರಣೆ ನಡೆಯುತ್ತಿದೆ. ಈ ಹೊತ್ತು ಸೈನಿಕರ ಯೋಗ ಪಠ್ಯಗಳು, ಮೌಲ್ಯಮಾಪನ ನಡೆಸುವ ಸಿಬ್ಬಂದಿ ಎಲ್ಲವೂ ಪತಂಜಲಿ ಯೋಗಪೀಠದಿಂದ ಸರಬರಾಜು ಆಗುತ್ತಿವೆ. ರಾಮದೇವನ ಯೋಗ ಶಿಕ್ಷಕರು ಸೈನಿಕರಿಗೆ ಗೀತೆಯನ್ನು ಆಧರಿಸಿದ ಸಂದೇಶಗಳನ್ನು ನೀಡುತ್ತಾರೆ. ಅದರಲ್ಲಿ ಕೃಷ್ಣನನ್ನು "ಯೋಗೇಶ್ವರ" ಎನ್ನಲಾಗಿದೆ. "ಯೋಗೇಶ್ವರ"ನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ನೀಡಿದನೆನ್ನಲಾದ "ಇತರರನ್ನು ಕೊಲ್ಲಲು ನೀನು ನಿಮಿತ್ತಮಾತ್ರ; ನಿನಗೆ ಪ್ರಶ್ನಿಸುವ ಅಧಿಕಾರ ಇಲ್ಲ; ಮಾಡಿ ಮಡಿಯುವುದು ನಿನ್ನ ಕರ್ತವ್ಯ" ಎಂಬಿತ್ಯಾದಿ ಬೋಧನೆಗಳನ್ನು ಸೈನಿಕರಿಗೆ ಕಲಿಸಲಾಗುತ್ತಿದೆ. ಇಂದು ಹಿರಿಯ ಅಧಿಕಾರಿಗಳೆ "ಯೋಗೇಶ್ವರ"ರು ಎಂಬ ಸೂಚ್ಯಾರ್ಥ ಇಲ್ಲಿದೆ. ರಾಮದೇವ ಮತ್ತು ಮೋದಿಯ ಗಳಸ್ಯಕಂಠಸ್ಯ ಸ್ನೇಹವನ್ನು ಸಾಬೀತುಪಡಿಸುವಂತಹ ಮತ್ತೊಂದು ಬೆಳವಣಿಗೆ ಈಗಷ್ಟೆ ವರದಿಯಾಗಿದೆ. ರಕ್ಷಣಾ ಇಲಾಖೆಯಡಿ ಕಾರ್ಯಾಚರಿಸುವ "ರಕ್ಷಣಾ ಸಂಶೋಧನೆ ಮತ್ತು ವಿಕಾಸ ಸಂಸ್ಥೆ" (ಡಿಆರ್‌ಡಿಒ) ಮತ್ತು ಪತಂಜಲಿ ಯೋಗಪೀಠದ ನಡುವೆ ಒಂದು ವಾಣಿಜ್ಯ ಒಪ್ಪಂದ ಏರ್ಪಟ್ಟಿದ್ದು ಅದರಂತೆ ಸದರಿ ಯೋಗಪೀಠದ ಗಿಡಮೂಲಿಕಾ ಉತ್ಪನ್ನಗಳನ್ನು ಡಿಆರ್‌ಡಿಒ ಪ್ರಯೋಗಶಾಲೆಯಲ್ಲಿ ಅಭಿವೃದ್ಧಿಪಡಿಸಲಾಗುವುದೆಂದು ವರದಿ ಹೇಳುತ್ತದೆ.

ಸೇನೆ ಮತ್ತು ಧಾರ್ಮಿಕ ಶಿಕ್ಷಣ

ಈ ಹೊತ್ತಿನ ಅತ್ಯಂತ ಅನಪೇಕ್ಷಣೀಯ ಹಾಗೂ ಅಪಾಯಕಾರಿ ಬೆಳವಣಿಗೆಯೆಂದರೆ ಭಾರತೀಯ ಸೇನೆಯಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಒದಗಿಸಿರುವ ಅವಕಾಶವನ್ನು ದುರ್ಬಳಕೆ ಮಾಡಿಕೊಂಡು ಹಿಂದೂತ್ವವಾದಿ ಮೌಲ್ಯಗಳನ್ನು ತುರುಕಿಸುವ ಯತ್ನ. ಸೇನೆಯಲ್ಲಿ ಹಿಂದಿನಿಂದಲೂ ಹಿಂದೂ, ಕ್ರೈಸ್ತ, ಇಸ್ಲಾಂ, ಸಿಖ್, ಬೌದ್ಧ ಮುಂತಾದ ವಿವಿಧ ಧರ್ಮಗಳ ಬೋಧಕರನ್ನು ನೇಮಕ ಮಾಡುವುದರೊಂದಿಗೆ ಪ್ರಾರ್ಥನಾಕೇಂದ್ರಗಳ ಸೌಲಭ್ಯವನ್ನೂ ಒದಗಿಸಲಾಗುತ್ತಿದೆ. ಆದೇ ವೇಳೆ ಪಾರಸಿ ಸೈನಿಕರಿಗಾಗಿ ಧರ್ಮಗುರುಗಳಿಲ್ಲದಿರುವುದು ಸ್ವಲ್ಪ ಕುತೂಹಲಕಾರಿಯಾಗಿದೆ. ಹಾಗೆಯೆ ನಾಸ್ತಿಕರನ್ನು ಕೂಡ ಗುರುತಿಸಲಾಗುವುದಿಲ್ಲ. ಸೈನಿಕರಿಗೆ



ಹೀಗೆ ಧಾರ್ಮಿಕ ಶಿಕ್ಷಣ ನೀಡುವುದರಿಂದ ಕೆಲವು ದುಷ್ಪರಿಣಾಮಗಳಾಗುವ ಸಾಧ್ಯತೆಗಳಿವೆ. ಇಂತಹ ಸೈನಿಕರನ್ನು ಸದಾ ಜಾತಿ ಮತ್ತು ಮತೀಯ ಸಂಘರ್ಷಗಳಲ್ಲಿ ಮುಳುಗಿರುವ ಜಾಗಗಳಿಗೆ ನಿಯೋಜಿಸಿದಾಗ ಅವರ ವರ್ತನೆಗಳಿಂದ ಸಮಾಜದಲ್ಲಿರುವ ಒಡಕುಗಳು ಇನ್ನಷ್ಟು ಜಾಸ್ತಿಯಾಗಬಹುದು. ಪಂಜಾಬಿನಲ್ಲಿ ಸಿಖ್ ಜನರೊಂದಿಗೆ, ನಾಗಾಲ್ಯಾಂಡ್‌ನಲ್ಲಿ ನಾಗಾಜನರೊಂದಿಗೆ ಹಿಂಸಾತ್ಮಕವಾಗಿ ವರ್ತಿಸಿರುವುದು, ಕಾಶ್ಮೀರದಲ್ಲಿ ಹಿಂದೂ ಅರೆಸೇನಾ ಪಡೆಗಳು ಮುಸ್ಲಿಮರಿಗೆ ಹೊಡೆಯುವಾಗ ಅವರ ಧರ್ಮ ಮತ್ತು ಧಾರ್ಮಿಕ ನಂಬಿಕೆಗಳನ್ನು ಮೂದಲಿಸಿ ಪಾಕಿಸ್ತಾನಕ್ಕೆ ಹೋಗಿರೆಂದು ಹೇಳುವುದು ಇವೇ ಮುಂತಾದ ಹೇರಳ ಉದಾಹರಣೆಗಳು ನಮ್ಮ ಮುಂದಿವೆ.

ಭಾರತ ಸರಕಾರದ ರಾಷ್ಟ್ರೀಯ ಸಮನ್ವಯತೆಯ ನೀತಿಗೆ ವಿರುದ್ಧವಾಗಿ ಕನಿಷ್ಠ 22 ರೆಜಿಮೆಂಟುಗಳಿಗೆ ಹಿಂದೂ ಜಾತೀಯ ಅಥವಾ ಪ್ರಾದೇಶಿಕ ಹೆಸರುಗಳನ್ನು ಇಡಲಾಗಿದ್ದು ಆಯಾ ಮಂದಿಯನ್ನು ಆಯಾ ಗುಂಪುಗಳಲ್ಲಿ ಕೂಡಲಾಗಿದೆ. ಉದಾಹರಣೆಗೆ ಜಾಟ್ ರೆಜಿಮೆಂಟ್, ರಾಜಸ್ಥಾನ ರೈಫಲ್ಸ್ ಇತ್ಯಾದಿ. ಸೇನೆಯ ಈ ನೀತಿಯನ್ನು ವಿರೋಧಿಸಿ ಯಾದವ್ ಎಂಬಾತ "ಇದು ಬ್ರಿಟಿಷರ ನೀತಿ. ಇದರ ಬಗ್ಗೆ ಭಾರತೀಯ ಸಂಸತ್ತು ಯಾವುದೇ ಕಾನೂನು ಮಾಡಿಲ್ಲ" ಎಂದು ಸುಪ್ರೀಂಕೋರ್ಟಿಗೆ ದೂರು ಸಲ್ಲಿಸಿದ್ದರು. ಆಗ ಭಾರತೀಯ ಸೇನೆ ನ್ಯಾಯಾಲಯಕ್ಕೆ ಅಫಿಡವಿತ್ ಸಲ್ಲಿಸಿ "ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕ ಏಕರೂಪತೆಗಳು ಯುದ್ಧದಲ್ಲಿ ಜಯ ತಂದುಕೊಡುವ ಅಂಶಗಳಲ್ಲೊಂದಾಗಿದ್ದು ಅದರ ಶಕ್ತಿಯನ್ನು ಹಲವು ಪಟ್ಟು ಹೆಚ್ಚಿಸುತ್ತವೆ........ ಮತ್ತು ಕಾರ್ಯಾಚರಣೆಯನ್ನು ಇನ್ನಷ್ಟು ಸುಗಮಗೊಳಿಸುತ್ತವೆ" ಎಂದು ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ಕೊನೆಗೆ ನ್ಯಾಯಾಲಯ ಯಾದವರ ಅರ್ಜಿಯನ್ನು ತಳ್ಳಿಹಾಕುತ್ತ ತಾನು "ಸೇನೆಯ ದೋಣಿಯನ್ನು ಅಲುಗಾಡಿಸಲು ಬಯಸುವುದಿಲ್ಲ" ಎಂದಿದೆ.

ಇನ್ನು ಭಾರತೀಯ ಸೇನೆಯಲ್ಲಿ ಒಂದು ಏಕಮಾತ್ರ ರಾಷ್ಟ್ರೀಯ ರಣಘೋಷ ಎಂಬುದೇ ಇಲ್ಲ. ಸದ್ಯ ಬಳಕೆಯಲ್ಲಿರುವ ಹಲವು ರಣಘೋಷಗಳು ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿವೆ. ಅವೆಲ್ಲವೂ ಸಿಖ್ ಗುರುಯಾ ಹಿಂದೂ ದೇವತೆಗಳ ಹೆಸರಿನಲ್ಲಿವೆ. ಇಂತಹ ರಣಘೋಷಗಳು ಜನರಲ್ಲಿ ಒಡಕನ್ನು ಸೃಷ್ಟಿಸಬಲ್ಲವು. 1980ರ ದಶಕದಲ್ಲೊಮ್ಮೆ ಮೇ। ಜ। ಶಾಬೇಗ್ ಸಿಂಗ್ ಎಂಬಾತನಿಗೆ ಸೈನ್ಯದ ಮೇಲೆ ತೀವ್ರ ಅಸಮಾಧಾನ ಉಂಟಾಗಿ ಸೈನ್ಯದಿಂದ ಹೊರಬಿದ್ದ. ನಂತರ ಭಿಂದ್ರನ್‌ವಾಲೆಯ ಖಲಿಸ್ತಾನಿ ಗುಂಪು ಸೇರಿದ ಈತ ಸ್ವರ್ಣಮಂದಿರದೊಳಗೆ ಉಗ್ರರಿಗೆ ತರಬೇತು ನೀಡುವಾಗ ಬಳಸಿದ್ದು ಸೇನೆಯ ಇದೇ ಸಿಖ್ ರಣಘೋಷವನ್ನು. ಕೊನೆಗೆ ನಡೆದಂತಹ ಆಪರೇಷನ್ ಬ್ಲೂಸ್ಟಾರ್ ಹೆಸರಿನ ಕಾರ್ಯಾಚರಣೆ ಸೇನೆಯ ಜಾತ್ಯತೀತ ಇಮೇಜಿಗೆ ದೊಡ್ಡ ಮರ್ಮಾಘಾತ ನೀಡಿತು. ಏಕೆಂದರೆ ಅಂದು ಸಿಖ್ ಸೈನಿಕರು ದಂಗೆ ಏಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ವಸಾಹತುಶಾಹಿ ನೀತಿಯ ಮುಂದರಿಕೆ

ಭಾರತದಲ್ಲಿ ಮುಸ್ಲಿಮರ ಜನಸಂಖ್ಯೆ 13.4% ಇದ್ದರೂ ಸೇನೆಯಲ್ಲಿರುವುದು ಕೇವಲ 2% ಮುಸ್ಲಿಮರು ಎಂಬುದನ್ನು ಗಮನಿಸಬೇಕು. ಭಾರತೀಯ ಸೇನೆ ಮತ್ತು ಅರೆಸೇನಾ ಪಡೆಗಳಲ್ಲಿ ಇತರ ಅಲ್ಪಸಂಖ್ಯಾತ ಬುಡಕಟ್ಟುಗಳು, ಭಾಷಿಕರು ಮತ್ತು ಪ್ರಾದೇಶಿಕರ ವಿರುದ್ಧ ದ್ವೇಷದ ಭಾವನೆ ಮನೆಮಾಡಿರುವುದನ್ನು ತೋರಿಸುವಂಥ ಘಟನೆಗಳು ಹಲವಾರಿವೆ. ಅಸ್ಸಾಂ ರೈಫಲ್ಸ್‌ನ ಅರೆಸೇನಾ ಪಡೆಗಳಿಂದ ಮಣಿಪುರದ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ. ಛತ್ತೀಸ್‌ಗಢ, ಜಾರ್ಖಂಡ್ ಮತ್ತಿತರ ನಕ್ಸಲ್‌ಪೀಡಿತ ಪ್ರದೇಶಗಳಲ್ಲಿ ಸಿಆರ್‌ಪಿಎಫ್ ಪಡೆಗಳು ಅಮಾಯಕ ದಲಿತರು, ಆದಿವಾಸಿಗಳ ಮೇಲೆ ದೌರ್ಜನ್ಯ ನಡೆಸುತ್ತಾ ಹತ್ಯೆಗಳನ್ನೂ ಮಾಡುತ್ತಿವೆ. ಇದಕ್ಕೆ ಒಂದು ಕಾರಣವೆಂದರೆ ಸಿಆರ್‌ಪಿಎಫ್ ಸೈನಿಕರು ಮತ್ತು ಅಧಿಕಾರಿಗಳು ಮುಖ್ಯವಾಗಿ ಹಿಂದೂ ಮೇಲ್ಜಾತಿ ಮತ್ತು ಇತರ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದು ಅವರಲ್ಲಿ ಅನೇಕರಿಗೆ ದಲಿತರು, ಆದಿವಾಸಿಗಳ ಬಗ್ಗೆ ಸಾಂಪ್ರದಾಯಿಕ ಪೂರ್ವಗ್ರಹಗಳಿವೆ. ಹೀಗೆ ಭಾರತೀಯ ಪ್ರಜೆಗಳನ್ನೆ ಪರಸ್ಪರರ ವಿರುದ್ಧ ನಿಲ್ಲಿಸುವ ಭಾರತದ ಪ್ರಭುತ್ವ ಯಥಾರ್ಥದಲ್ಲಿ ವಸಾಹತುಶಾಹಿಗಳ ಒಡೆದಾಳುವ ನೀತಿಯನ್ನೆ ಮುಂದುವರಿಸುತ್ತಿದೆ.

ಇಂತಹ ಪರಿಸ್ಥಿತಿಗಳಲ್ಲಿ ಸಿಲುಕುವ ಸೈನಿಕ ಎರಡು ವ್ಯಕ್ತಿತ್ವಗಳನ್ನು ಬೆಳೆಸಿಕೊಳ್ಳುತ್ತಾನೆ. ಅವನ ಆತ್ಮಸಾಕ್ಷಿಯ ಮುಂದೆ ಎರಡು ಸವಾಲುಗಳಿರುತ್ತವೆ. ಒಂದು ಸಮಾಜದ ಸದಸ್ಯನಾಗಿ ತನ್ನ ಕುಟುಂಬವನ್ನು ಸಲಹುವ ಶಾಂತಿಕಾಲದ ಜವಾಬ್ದಾರಿ. ಎರಡು, ಸೇನೆಯ ಸದಸ್ಯನಾಗಿ ಹಿರಿಯ ಅಧಿಕಾರಿಗಳು ಯಾರನ್ನು ಶತ್ರುಗಳೆಂದು ಕರೆಯುತ್ತಾರೊ ಆ ತಾನರಿಯದ, ಅವೈಯಕ್ತಿಕ ಜನರನ್ನು ಹಿಂಸಾತ್ಮಕವಾಗಿ ಕೊಲ್ಲುವುದು. ಇದರ ಬಾಹ್ಯ ಪರಿಣಾಮವಾಗಿ ಸೇನೆಯಲ್ಲಿ ಆಂತರಿಕ ಸಾವುಗಳು ಹೆಚ್ಚುತ್ತಿರುವುದನ್ನು ಕಾಣಬಹುದು. 2001-11ರ ಅವಧಿಯಲ್ಲಿ ಸುಮಾರು 1300 ಯೋಧರು ಸಾವನ್ನಪ್ಪಿರುವುದಕ್ಕೆ ಕಾರಣ ಶತ್ರು ಪಡೆಗಳಲ್ಲ, ಆತ್ಮಹತ್ಯೆ ಮತ್ತು ಭ್ರಾತೃಹತ್ಯೆಗಳು (ಸೈನಿಕರೆ ಸೈನಿಕರನ್ನು ಕೊಲ್ಲುವುದು). ಹಿರಿಯ ಅಧಿಕಾರಿಗಳಿಂದ ದಬ್ಬಾಳಿಕೆ, ರಜೆಯ ನಿರಾಕರಣೆ ಮತ್ತು ವಾಸಸ್ಥಳದಲ್ಲಿ ಸೌಕರ್ಯಗಳ ಕೊರತೆಗಳೆ ಭ್ರಾತೃಹತ್ಯೆಗಳಿಗೆ ಪ್ರಮುಖ ಕಾರಣವೆನ್ನಲಾಗುತ್ತದೆ. ಹಾಗೆ ನೋಡಿದರೆ ಸೈನಿಕರ ಮೇಲೆ ಒತ್ತಡಗಳು ಬ್ರಿಟಿಷರ ಕಾಲದಲ್ಲೂ ಇದ್ದವು. ಆದರೆ ಆಗ ಅದನ್ನು ಸಾಮೂಹಿಕ ಪ್ರತಿಭಟನೆಗಳ ಮೂಲಕ ಹೊರಹಾಕಲಾಗುತ್ತಿತ್ತು, ಆತ್ಮಹತ್ಯೆ ಭ್ರಾತೃಹತ್ಯೆಗಳ ಸಂಖ್ಯೆ ಕಡಿಮೆ ಇತ್ತು. ಭಾರತೀಯ ಪ್ರಜೆಗಳ ವಿರುದ್ಧ ಕಾರ್ಯಾಚರಣೆ ನಡೆಸುವ ಆದೇಶ ಬಂದಾಗ ಅದನ್ನು ಪಾಲಿಸದೆ ಇರುವ ಘಟನೆಗಳೂ ಸಾಕಷ್ಟು ಬಾರಿ ನಡೆದಿವೆ. ಉದಾಹರಣೆಗೆ 1930ರ ದಶಕದ ಅಸಹಕಾರ ಚಳವಳಿಯ ಸಂದರ್ಭದಲ್ಲಿ ಗಡವಾಲ್ ರೈಫಲ್ಸ್‌ನ ಹಿ... ಸೈನಿಕರು ಪೇಶಾವರದಲ್ಲಿ ನಿರಾಯುಧ ... ಪ್ರತಿಭಟನಾಕಾರರ ಮೇಲೆ ಗುಂಡು ಹಾರಿ... ನಿರಾಕರಿಸಿದ್ದರು. ಅವರು ಕೋರ್ಟ್ ಮಾ... ಎದುರಿಸಲೂ ಹಿಂಜರಿದಿರಲಿಲ್ಲ. 1946ರಲ್ಲಿ ಮುಂ... ಯಲ್ಲಿ ಬ್ರಿಟಿಷ್ ನೌಕಾಪಡೆಯ ಕಾಲೇಜು ವಿದ್ಯಾರ್ಥಿ... (ಕ್ಯಾಡೆಟ್) ಬ್ರಿಟಿಷ್ ಅಧಿಕಾರಿಗಳ ವಿರುದ್ಧ ದಂಗೆ ಎ... ದಕ್ಷಿಣ ಪೂರ್ವ ಏಷಿಯಾದಲ್ಲಿ ಯುದ್ಧನಿರತ ಭಾರ... ಸೈನಿಕರು ಬ್ರಿಟಿಷ್ ಸೈನ್ಯವನ್ನು ತ್ಯಜಿಸಿ ನೇತಾಜಿ ಸು... ಬೋಸರ ಐಎನ್‌ಎ ಸೇರಿದ್ದರು. ಗಮನ... ವಿಷಯವೆಂದರೆ ಅಂದಿನ ಗಾಂಧಿ ನೇತೃತ್ವದ ಕಾ... ಪಕ್ಷ ಭಾರತೀಯ ಸೈನಿಕರನ್ನು ತನ್ನ ನಾಗರಿಕ ಶಾಸ... ಮತ್ತು ಅಸಹಕಾರ ಚಳವಳಿಗಳಿಂದ ಹೊರಗಿ... ಗಾಂಧೀಜಿ ಗಡವಾಲಿ ಸೈನಿಕರ ಕ್ರಮವನ್ನು ಖಂಡಿ... ಕಾಂಗ್ರೆಸ್ ಪಕ್ಷವೂ ಬ್ರಿಟಿಷ್ ನೌಕಾಪಡೆಯ ಕ್ಯಾಡೆ... ದಂಗೆಯನ್ನು ಬೆಂಬಲಿಸದೆ ಅವರೆಲ್ಲ ಶರಣಾಗತರಾಗ... ಸೂಚಿಸಿತ್ತು, ಅರ್ಥಾತ್ ಸೈನಿಕರು ಪ್ರಭುತ್ವದ ... ನಿಲ್ಲಬಾರದೆಂಬ ಆಳುವ ವರ್ಗಗಳ ಧೋರಣೆ ಆಗಿನಿ... ಇದೆ.


ಸ್ವಾತಂತ್ರ್ಯಾನಂತರದಲ್ಲಿ ಹಿಂದಿನ ಬ್ರಿಟಿಷ್ ... ಬದಲಾಗಿ ಭಾರತೀಯ ಸೇನೆ ಅಸ್ತಿತ್ವಕ್ಕೆ ಬಂದಾಗ ... ಮನಃಸ್ಥಿತಿಯಲ್ಲಿ ಬದಲಾವಣೆ ಆಗಿರುವು... ಗಮನಿಸಬಹುದು. ಹೀಗಾಗಿ 1974-75ರ ... ಚಳವಳಿಯ ಕಾಲದಲ್ಲಿ ಕಿರಿಯರು ಹಿರಿಯ ಅಧಿಕ... ಅಕ್ರಮ ಆದೇಶಗಳನ್ನು ವಿರೋಧಿಸಬೇಕೆಂಬ ಕರೆಗೆ ಸ್ಪ... ಸೈನಿಕರ ಸಂಖ್ಯೆ ತೀರ ಕಮ್ಮಿ. ಭಾರತದ ಪ್ರಭುತ್ವ ... ರಕ್ಷಣೆಯ ಭರವಸೆ ಮತ್ತು ವಿಶೇಷ ಸವಲ... ಆಮಿಷಗಳನ್ನೊಡ್ಡುವ ಮೂಲಕ ಸೈನಿಕರನ್ನು ... ಸೆಳೆಯುವಲ್ಲಿ ಸಫಲವಾಗಿದೆ. ಆದರೆ ಹೀಗೆ ಬಹು... ಶೌರ್ಯಪ್ರಶಸ್ತಿ, ಸರದಿ ತಪ್ಪಿಸಿದ ಮುಂಬಡ್ತಿ ಮು... ವಿವಿಧ ಆಮಿಷಗಳನ್ನು ತೋರಿಸಿರುವುದರ ಪರಿ... ವೇನು? ಅಮಾಯಕ ಪ್ರಜೆಗಳು ಉಗ್ರರೆಂದು ಬಿಂಬಿ... ಹತ್ಯೆಗೀಡಾಗುತ್ತಿದ್ದಾರೆ. ಸಶಸ್ತ್ರ ಪಡೆಗಳ ವಿಶೇಷ... ಕಾಯಿದೆ (ಎಎಫ್‌ಎಸ್‌ಪಿಎ) ಎಂಬ ಕುಖ್ಯಾತ ಕಾ... ಜಾರಿಯಲ್ಲಿರುವಲ್ಲೆಲ್ಲ ಸೈನಿಕರ ವಿರುದ್ಧ ಯಾ... ಕಾನೂನುಕ್ರಮ ಜರಗಿಸುವ ಹಾಗೇ ಇಲ್ಲ. ಈ ... ಪರಿಸ್ಥಿತಿ ಹೇಗಿದೆ ಎಂದರೆ ಸೇನಾ ಮತ್ತು ಅ... ಪಡೆಗಳಿಂದ ಎಷ್ಟೇ ಮಾನವಹಕ್ಕುಗಳ ಉಲ್ಲಂಘನೆ ನ... ಪ್ರಭುತ್ವ ಮಾತ್ರ ಗಾದೆಯ ಮೂರು ಮಂಗ... ವರ್ತಿಸುತ್ತದೆ ಅಥವಾ ಅಪರೂಪಕ್ಕೊಮ್ಮೆ ... ಮಾಡುತ್ತಿರುವಂತೆ ನಟಿಸುತ್ತದೆ. ಮೋದಿ ಸ... ಕಾರುಬಾರಿನಲ್ಲಂತೂ ಇಂತಹ ಉಲ್ಲಂಘನೆಗಳ ... ಸೊಲ್ಲೆತ್ತುವವರ ವಿರುದ್ಧವೆ ಕ್ರಮ ಜರುಗಿಸಲಾ... ಇತ್ತೀಚಿನ ಘಟನೆಯೊಂದರಲ್ಲಿ ಜಮ್ಮು, ಕಾಶ್ಮೀರದಲ್ಲಿ ... ಪಡೆಗಳಿಂದಾಗಿರುವ ಮಾನವಹಕ್ಕುಗಳ ಉಲ್ಲಂಘನ... ಸಾಬೀತುಪಡಿಸುವಂಥ ವರದಿಯನ್ನು ಸಿದ್ಧಪಡಿಸಿ... ಒಬ್ಬರಾದ ಕ್ರಿಸ್ಟಿನ್ ಮೆಹತಾ ಎಂಬ ಅ... ಇಂಟರ್‌ನ್ಯಾಷನಲ್ ಸಂಸ್ಥೆಯ ಸದಸ್ಯೆಯನ್ನು ಮೋದಿ ... ಗಡೀಪಾರು ಮಾಡಿದೆ!

ಇಂಥಾ ಸರ್ಕಾರ ಈಗ ಸೈನಿಕರಿಗೆ ಯೋಗ ... ಮಾಡಿರುವ ಕ್ರಮ ನಾವು ತಿಳಿದಿರುವಷ್ಟು ನಿರಪಾ... ಅಲ್ಲ. ಅದರ ಉದ್ದೇಶ ಆಧ್ಯಾತ್ಮಿಕ ಮತ್ತು ದೈಹಿಕ ಕಸ... ಹೆಸರಿನಲ್ಲಿ ಸೈನಿಕರ ಮನದಲ್ಲಿ ಸಂಘ ಪರಿ... ಮೌಲ್ಯಗಳನ್ನು ಬಿತ್ತಿ ಅವರನ್ನು ಹಿಂದೂತ್ವ ಸಿ... ಮೂಕಚಾಕರರನ್ನಾಗಿ ಪರಿವರ್ತಿಸುವುದಾಗಿದೆ. ಇದ... "ಸಲ್ಯೂಟ್ ಸೆಲ್ಫಿ"ಯಂತಹ ಗಿಮಿಕ್ ಆಂದೋ... ಹುಸಿ ಪ್ರೇಮದ ಪ್ರದರ್ಶನವಷ್ಟೆ ಹೊರತು ವ... ಇವೆಲ್ಲದರ ಅಂತಿಮ ಪ್ರಯೋಜನ ಸಿಗುವುದು ... ಪರಿವಾರ, ಮೋದಿ ಸರ್ಕಾರ ಮತ್ತು ಕಾರ್ಪೋರೇಟ... ಬಡಪಾಯಿ ಸೈನಿಕರ ಪಾಡನ್ನು ಕೇಳುವವರಿಲ್ಲ.

(ಆಧಾರ: 15.8.2015ರ ಇಕನಾ... ಅಂಡ್ ಪೊಲಿಟಿಕಲ್ ವೀಕ್ಲಿ ಇದರಲ್ಲಿ ... ಬ್ಯಾನರ್ಜಿ ...

ರಂಗಭೂಮಿಯೇ ಉಳಿದವುಗಳಿಗೆ ಪ್ರೇರಣೆ

ರಂಗಭೂಮಿ, ಕಿರುತೆರೆ ಮತ್ತು ಸಿನಿಮಾ ಈ ಮೂರು ರಂಗದಲ್ಲೂ ತಮ್ಮನ್ನು ತೊಡಗಿಸಿಕೊಂಡವರು ರಾಘು ಶಿವಮೊಗ್ಗ. ನಟನೆ ಮಾತ್ರವಲ್ಲ, ನಿರ್ದೇಶನದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಅವರ ಜತೆಗಿನ ಸಂದರ್ಶನ ಇಲ್ಲಿದೆ.



** ಶಿವಮೊಗ್ಗದ ಪರಿಸರ ನಿಮ್ಮನ್ನು ನೀನಾಸಂನತ್ತ ...ದುಕೊಂಡು ಹೋಯಿತಾ?*

...ಪಿಯುಸಿ ಮುಗಿದಿತ್ತು. ಮುಂದೇನು ಅಂತ ...ತ್ತಿರಲಿಲ್ಲ. ಹೀಗಾಗಿ ನೀನಾಸಂನತ್ತ ಮುಖ ಮಾಡಿದೆ. ...ಾಸಂ ಅಂದರೆ ಏನು ಅಂತ ನನಗೆ ಗೊತ್ತಿರಲಿಲ್ಲ. ...ತರೊಬ್ಬರು ಅದರ ಬಗ್ಗೆ ಮಾಹಿತಿ ನೀಡಿದರು. ...ಾಸಂ ಅಂದರೆ ಏನಿರಬಹುದು ಎಂಬ ಕುತೂಹಲದಿಂದ ...ಗೆ ಹೋದೆ. ಕೊನೆಗೆ ಅದೇ ಬದುಕಿನ ಮತ್ತೊಂದು ...ು ತೋರಿಸಿತು.

** ನೀನಾಸಂನಲ್ಲಿ ತರಬೇತಿ ಮುಗಿಸಿದವರು ನೇರವಾಗಿ ...ತೆರೆಯತ್ತ ಹೋಗಿದ್ದು ಯಾಕೆ? ರಂಗಭೂಮಿಯಲ್ಲಿ ...ಕೆ ತೊಡಗಿಸಿಕೊಳ್ಳಲಿಲ್ಲ?*

...ಯಾರು ಹೇಳಿದ್ದು ಹಾಗಂತ? ನಾನು ನೀನಾಸಂ ...ಬೇತಿ ಮುಗಿಸಿಕೊಂಡು ಬಂದನಂತರ ...ಭೂಮಿಯಲ್ಲೇ ಹೆಚ್ಚು ಸಕ್ರಿಯನಾಗಿದ್ದೆ. ನನ್ನ ಗೆಳೆಯರು ...ಮತೇಕ ನಟರಾದರು. ಆದರೆ ನಾನು ನಟನೆಯ ಜತೆ ...ಶ್ರಜ್ಞನಾಗಿ ಗುರುತಿಸಿಕೊಂಡೆ. ಅಲ್ಲದೇ ಅನೇಕ ...ಟಕಗಳನ್ನು ನಿರ್ದೇಶನ ಮಾಡಿದೆ. ರಂಗಭೂಮಿಯತ್ತ ...ವು ಇರುವ ಯುವಕರಿಗೆ ತರಬೇತಿ ನೀಡಿದೆ. ...ನಂತರವೇ ನಾನು ಕಿರುತೆರೆಯತ್ತ ಬಂದಿದ್ದು.

** ಧಾರಾವಾಹಿಯಲ್ಲಿ ನಟಿಸುತ್ತಿದ್ದವರು, ಅಲ್ಲಿಂದ ...ರ್ದೇಶನದತ್ತ ವಾಲಿದ್ದೀರಿ. ಈ ಪಲ್ಲಟ ಹೇಗೆ?*

...ರಂಗಭೂಮಿಯ ಅನುಭವದಿಂದಾಗಿ ಕಿರುತೆರೆ ...ಯಿತು. ಮುಗಿಲು, ಅರಸಿ, ಮುಕ್ತ ಮುಕ್ತ ಸೇರಿದಂತೆ ...ವು ಧಾರಾವಾಹಿಗಳಲ್ಲಿ ನಟಿಸಿದೆ. ಇದರ ಜತೆ ಪ್ರಕಾಶ್ ...ವಾಡಿ ಅವರ ಜತೆ ಕೆಲಸ ಮಾಡುತ್ತಿದ್ದೆ. ಅವರ ...ಸಹವಾಸದಿಂದಾಗಿ ಸಾಕಷ್ಟು ಸಿನಿಮಾಗಳನ್ನು ನೋಡುತ್ತಿದ್ದೆ. ...ದರಲ್ಲೂ ಜಗತ್ತಿನ ಶ್ರೇಷ್ಠ ಸಿನಿಮಾಗಳತ್ತ ಆಕರ್ಷಣೆ ...ಯಿತು. ಇದೇ ನನ್ನನ್ನು ನಿರ್ದೇಶನದತ್ತ ಸೆಳೆದದ್ದು. ...ವು ಕಿರುಚಿತ್ರಗಳ ನಿರ್ದೇಶನ ಮಾಡಿದೆ. ಅದನ್ನು ...ನೋಡಿದ ಬಿ.ಸುರೇಶ, ಮೆಗಾ ಧಾರಾವಾಹಿ ನಿರ್ದೇಶನ ...ಮಾಡಲು ಹೇಳಿದರು. ಅದು ಏಳುನೂರು ಕಂತುಗಳಲ್ಲಿ ...ಸಾರ ಆಯಿತು. ಸಿನಿಮಾ ಮಾಡುವ ಉದ್ದೇಶದಿಂದಲೇ ...ಮು ಹಲವು ರೀತಿಯಲ್ಲಿ ತಯಾರಿ ಮಾಡಿಕೊಳ್ಳುತ್ತಿದ್ದೆ. ...ಹಾಗಾಗಿ ನಿರ್ದೇಶನವು ನನ್ನನ್ನು ಬೇಗ ಅಪ್ಪಿಕೊಂಡಿತು.

** ರಂಗಭೂಮಿ ಮತ್ತು ಕಿರುತೆರೆಯಲ್ಲಿನ ನಟನೆಯ ...ಅನುಭವ ಹೇಗಿದೆ?*

ಎರಡೂ ಬೇರೆ ಬೇರೆ ಮಾಧ್ಯಮ. ಎರಡಕ್ಕೂ ತಯಾರಿ ಮತ್ತು ತರಬೇತಿ ಎರಡೂ ಬೇಕು. ರಂಗಭೂಮಿಯಲ್ಲಿ ಒಂದು ನಾಟಕವನ್ನು ತಿಂಗಳುಗಟ್ಟಲೆ ಅಭ್ಯಾಸ ಮಾಡಿ, ಒಂದ್ ದಿನ ಪ್ರದರ್ಶನ ಕೊಡ್ತೇವೆ. ಆದರೆ, ಕ್ಯಾಮೆರಾ ಮುಂದೆ ನಟಿಸುವಾಗ ಇಷ್ಟೆಲ್ಲ ಸಮಯ ಇರುವುದಿಲ್ಲ. ಎರಡಕ್ಕೂ ತನ್ನದೇ ಆದ ಮಿತಿಗಳಿವೆ. ಅವುಗಳನ್ನು ಅರ್ಥಮಾಡಿಕೊಂಡರೆ ಎಲ್ಲವೂ ಸುಲಭ.

** ಸಿನಿಮಾ ನಿರ್ದೇಶನದತ್ತ ಆಸಕ್ತಿಯೂ ಇದೆ ಅಂದಿದ್ದೀರಿ. ಬೆಳ್ಳಿತೆರೆಯ ಪ್ರವೇಶ ಯಾವಾಗ?*

ಆದಕ್ಕಾಗಿ ತಯಾರಿ ನಡದಿದೆ. ಅಲ್ಲದೇ ಸ್ಕ್ರಿಪ್ಟ್ ಕೂಡ ರೆಡಿ ಮಾಡಿಕೊಂಡಿದ್ದೇನೆ. ಎಲ್ಲವೂ ಕೂಡಿಬರಬೇಕು.

** ರಂಗಭೂಮಿ, ಕಿರುತೆರೆ ಮತ್ತು ಸಿನಿಮಾ.. ಯಾವ ಕ್ಷೇತ್ರ ಹೆಚ್ಚು ಖುಷಿ ಕೊಟ್ಟಿದೆ?*

ಎಲ್ಲಾ ಕ್ಷೇತ್ರಗಳೂ ಖುಷಿ ಕೊಟ್ಟಿವೆ. ನಾನು ಯಾವುದೇ ಕೆಲಸ ಮಾಡಿದರೂ ಅದನ್ನು ಇಷ್ಟಪಟ್ಟು ಮಾಡುತ್ತೇನೆ. ಅಲ್ಲದೇ ಆಯಾ ಕ್ಷೇತ್ರದಲ್ಲಿ ಹೊಸದನ್ನು ಹುಡುಕುತ್ತೇನೆ. ಹೀಗಾಗಿ ಬೇರೆ ಬೇರೆ ಅನುಭವಗಳನ್ನು ಅವುಗಳು ನೀಡಿವೆ. ಹೀಗಾಗಿ ಮೂರೂ ನನ್ನಿಷ್ಟದ ಕ್ಷೇತ್ರಗಳು.

** ಬೆಂಗಳೂರಿನಲ್ಲಿ ತತ್ಕಾಲ್ ಥಿಯೇಟರ್ ತಂಡದಲ್ಲಿ ಸಕ್ರಿಯರಾಗಿದ್ದೀರಿ. ಈ ತಂಡದ ಉದ್ದೇಶ ಏನು?*


ಇದು ಸಮ ಮನಸ್ಸಿನ ಗೆಳೆಯರು ಸೇರಿಕೊಂಡು ಕಟ್ಟಿದ ತಂಡ. ಹೆಸರೇ ಹೇಳುವಂತೆ ಇದು ತತ್ಕಾಲ್ ಥಿಯೇಟರ್. ಅನೇಕ ಕೆಲಸಗಳೂ ಹೆಸರಿನಂತೆಯೇ ಆದವುಗಳು. ಬೆಂಗಳೂರಿನ ಪ್ರದರ್ಶನಕ್ಕೆಂದು ಬರುವ ತಂಡಗಳ ಜತೆ ಇಲ್ಲಿನ ಪ್ರೇಕ್ಷಕರನ್ನು ಮುಖಾಮುಖಿ ಆಗಿಸುವ ಬಹುದೊಡ್ಡ ಕನಸು ತಂಡದ್ದು. ಈಗಾಗಲೇ ಇಂತಹ ಅನೇಕ ಕೆಲಸಗಳು ಇಲ್ಲಿಂದ ಆಗಿವೆ. ಅಲ್ಲದೇ ಹೊಸ ನಾಟಕಗಳನ್ನು ರಂಗಭೂಮಿಗೆ ಕೊಡುವ ಪ್ರಯತ್ನ ಕೂಡ ನಡೆಯುತ್ತಿದೆ. ನಟ ಅಚ್ಯುತ್ ಕುಮಾರ್, ಸತೀಶ್ ನೀನಾಸಂ, ಗೋಪಾಲಕೃಷ್ಣ ದೇಶಪಾಂಡೆ, ಕಿರಣ್ ನಾಯಕ್ ಸೇರಿದಂತೆ ಹಲವು ಗೆಳೆಯರು ಈ ತಂಡಕ್ಕಾಗಿ ಕೆಲಸ ಮಾಡುತ್ತಿದ್ದಾರೆ.

** ಪ್ರೀತಿಸಿ ಮದುವೆ ಆಗಿದ್ದೀರಿ. ನಿಮ್ಮ ಕೆಲಸಕ್ಕೆ ನಿಮ್ಮ ಪತ್ನಿಯ ಸಹಕಾರ ಹೇಗಿದೆ?*

ಪತ್ನಿಯ ಸಹಕಾರ ಇಲ್ಲದೇ ಇಷ್ಟೆಲ್ಲ ಕೆಲಸ ಮಾಡೋಕೆ ಸಾಧ್ಯವೇ ಇಲ್ಲ. ಅಲ್ಲದೇ ಅವರಿಗೂ ರಂಗಭೂಮಿಯ ಸಾಧ್ಯತೆಗಳ ಅರಿವಿದೆ. ಹೀಗಾಗಿ ನನ್ನ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವರದ್ದೂ ಪಾಲಿದೆ.

** ಡಬ್ಬಿಂಗ್ ಬಂದರೆ, ಕಿರುತೆರೆ ಕನ್ನಡದ್ದೆ ಆಗಿ ಉಳಿದುಕೊಳ್ಳುತ್ತಾ?*

ಡಬ್ಬಿಂಗ್ ಕುರಿತಾಗಿ ಬಹುದೊಡ್ಡ ಚರ್ಚೆ ಆಗುತ್ತಿದೆ. ಡಬ್ಬಿಂಗ್ ಬಂದರೆ, ಸಿನಿಮಾಗಿಂತ ಕಿರುತೆರೆಗೆ ಹೆಚ್ಚು ಪೆಟ್ಟು ಬೀಳುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ, ಎರಡೂ ರಂಗಕ್ಕೂ ಈ ಹೊಡೆತ ಬೀಳಲಿದೆ. ಅಲ್ಲದೇ ಡಬ್ಬಿಂಗ್ ಕುರಿತಾಗಿ ವ್ಯಾಪಕ ಚರ್ಚೆ ಆಗಬೇಕು.. ಅಲ್ಲಿ ಎಲ್ಲಾ ರಂಗದವರೂ ಇರಬೇಕು. ಆರೋಗ್ಯಕರ ಚರ್ಚೆಯ ನಂತರ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ... ■



ಮಹಾಭಾರತವನ್ನು ಗಣಪತಿ ಬರೆದು ಕೊಟ್ಟಿದ್ದು ಹೌದೇ?

...ಕಳೆದ ಸಂಚಿಕೆಯಲ್ಲಿ ಗಿರೀಶ್ ಶಹಾನೆಯವರ '...ದಿಕರು ಹಬ್ಬಿಸಿದ ಮಿಥ್ಯೆಗಳ' ಬಗ್ಗೆ ಓದಿದೆ. ಅದರಲ್ಲಿ ...ವರು ದೇವಭಾಷೆ ಬಿರುದಾಂಕಿತ ಸಂಸ್ಕೃತದ ಕುರಿತಾಗಿ ...ಲ್ಲೇಖಿಸಿದಂತಹ ಕಹಿ ವಿವರಗಳು ಅಕ್ಷರಶಃ ಸತ್ಯ. ಇದನ್ನು ...ಭಾಷಾ ಶಾಸ್ತ್ರಜ್ಞರೇ ಒಪ್ಪಿಕೊಳ್ಳುತ್ತಾರಾದರೂ ಪರಂಪರಾಗ ...ತವಾಗಿ ಹೇರಲ್ಪಟ್ಟ ನಂಬಿಕೆಗಳ ಕಾರಣಗಳಿಂದ ಈ ಅಭಿಪ್ರಾ ...ಯಗಳ ದನಿ ತೀರಾ ಕ್ಷೀಣವಾಗಿ ಕೇಳಲ್ಪಡುತ್ತಿದೆ ಅಷ್ಟೆ.

...ಸಂಸ್ಕೃತ ದೇವ ಭಾಷೆ, ದೇವರೊಂದಿಗಿನ ಸಂಪರ್ಕ ...ಭಾಷೆಯಾಗಿ ಪೂಜೆ ಹೋಮಹವನಗಳ ...ಮಂತ್ರೋಚ್ಚಾರಣೆಯಲ್ಲಿ ಇದೇ ಭಾಷೆ ಉದ್ದೇಶಪೂರ್ವಕವಾಗಿ ...ಸಾಮಾನ್ಯನಿಗೆ ಅರ್ಥವಾಗದಂತೆ ಹಾಗು ಮೇಲ್ ಸ್ತರದ ಪ್ರತ್ಯೇಕತೆ ಕಾಯ್ದುಕೊಳ್ಳುವ ಸಲುವಾಗಿ) ಬಳಕೆಯಾಗುತ್ತದೆ. ಸಂಸ್ಕೃತ ಶಿಷ್ಟವರ್ಗದ ಭಾಷೆಯಾಗಿ ಅದರಲ್ಲೊಂದು ನಯನಾಜೂಕುತನ ಕಾವ್ಯಾತ್ಮಕ ಗುಣಗಳು ಇದ್ದಿರಬಹುದೇ ವಿನಹ ಅದೇ ಪರಿಪೂರ್ಣ ಭಾಷೆ, ಅದೇ ಎಲ್ಲಕ್ಕೂ ಮೂಲ ಎಂದೆಲ್ಲ ಆರೋಪಿಸುವುದು ಅತಿರೇಕವೆನಿಸುತ್ತದೆ. ಆದರೆ ಸತ್ತ (ಅಥವ ಅತಿ ಮಡಿವಂತಿಕೆಯಿಂದ ಸಾಯಿಸಲ್ಪಟ್ಟ) ಈ ಸಂಸ್ಕೃತಕ್ಕೆ ಮರುಜೀವವನ್ನು ಕೊಡುವ ಸಲುವಾಗಿ ಸಂಸ್ಕೃತದ ಕುರಿತಾಗಿ ಇಂತಹ ಅತಿರೇಕದ ಪ್ರಚಾರಗಳು ಇತ್ತೀಚಿಗೆ ಅತಿ ಹೆಚ್ಚು ನಡೆಯುತ್ತಿದೆ. ತೀರಾ ವಿಭಿನ್ನ ಭಾಷಾ ವಿಧವಾದ ದ್ರಾವಿಡ ಭಾಷಾ ಪದಗಳನ್ನೂ ಸೇರಿ ಎಲ್ಲಾ ಭಾಷೆಗಳ ಪದಗಳ ವ್ಯುತ್ಪತ್ತಿಗೆ ಸಂಬಂಧಿಸಿ ಸಂಸ್ಕೃತವನ್ನೇ ಮೂಲವನ್ನಾಗಿಸಿ ನೋಡುವ ವಿದ್ವಾಂಸರೂ ಹುಟ್ಟಿಕೊಂಡಿದ್ದಾರೆ. ಈವಾಗಲಂತೂ ಕನ್ನಡದ ಊರುಗಳ ಹೆಸರುಗಳೆಲ್ಲ ಸಂಸ್ಕೃತದ ಹೆಸರಿನಲ್ಲಿ ವಿಕೃತೀಕರಣ (ಮೂಲ ಮಣ್ಣಿನ ಸೊಗಡಿಗೆ ಹಾನಿಯಾಗುವಂತೆ) ಗೊಳ್ಳುತ್ತಿದೆ. ಉದಾ ಆನೆಗುಡ್ಡೆ- ನಾಗಾಚಲ, ಕಾಪು-ರಕ್ಷಣಾಪುರ ಇತ್ಯಾದಿ.

ದೇವದೇವತೆಗಳ ಚಿತ್ರಗಳಲ್ಲಿ, ಬಾವುಟಗಳಲ್ಲಿ ಸಿನಿಮಾಗಳ ದೇವಲೋಕದ ಸೀನ್‌ಗಳಲ್ಲಿ ದೇವನಾಗರಿ ಲಿಪಿಯ 'ಓಂ' ಪದ ಸಹಜವಾಗಿ ಅಲ್ಲಲ್ಲಿ ತೋರಿಸಲಾಗುತ್ತದೆ. ಆದರೆ ಈ ದೇವನಾಗರಿಯ 'ಓಂ' (ॐ) ವಾಸ್ತವವಾಗಿ ಸಂಸ್ಕೃತದ್ದಲ್ಲ, ಅದೊಂದು ಕದ್ದ ಮಾಲು. ಯಾಕೆಂದರೆ, ಸಂಸ್ಕೃತಕ್ಕೆ ಮೂಲತಃ ಸ್ವಂತ ಲಿಪಿಯೇ ಎಂಬುದಿಲ್ಲ. ಇಲ್ಲಿನ ನಾಗರೀ ಲಿಪಿಯನ್ನೇ ಅವರು ಬಳಸಿಕೊಂಡು ಅದಕ್ಕೆ ದೇವನಾಗರಿ ಎಂದು ಹೆಸರಿಸಿ ಉಪಯೋಗಿಸಿಕೊಂಡಿದ್ದರಷ್ಟೆ. ಈ ರೀತಿಯಾಗಿ ನೋಡಿದರೆ ಮಹಾ ಭಾರತವನ್ನು ಗಣಪತಿ ಬರೆದ ಎಂಬುವುದು ಕೂಡ ಅವಾಸ್ತವವಾಗಿ ತೋರುತ್ತದೆ.

ಈ ಹಿಂದೆ ರಾಜಾಶ್ರಯ ಹಾಗು ಪ್ರಭಾವ ಹೊಂದಿದ್ದ ವೈದಿಕರ ಕಾರಣಕ್ಕೆ, ಸಂಸ್ಕೃತದ ಪ್ರಭಾವವೂ ಇನ್ನಿತರ ಭಾರತೀಯ ಭಾಷೆಗಳ ಮೇಲೆ ಉಂಟಾಯಿತೇ ವಿನಹ ಸಂಸ್ಕೃತವೇ ಮೇಲು ಇನ್ನಿತರ ಭಾಷೆ ಕೆಳಗಿನವು ಎಂಬ ವಾದ ಖಂಡಿತಾ ಸರಿಯಲ್ಲ, ಸಂಸ್ಕೃತ ವ್ಯಾಮೋಹಿಗಳು ಇದನ್ನು ಅರ್ಥಮಾಡಿಕೊಳ್ಳಲಿ.

ಅದೇ ರೀತಿ ಕಳೆದ ಸಂಚಿಕೆಯಲ್ಲಿನ ಬನ್ನಂಜೆ ಕಂಪೆನಿ ಬಂದ್ ಲೇಖನದಲ್ಲಿ ಪ್ರವೀಣ್ ಶೆಟ್ಟರ ಊರನ್ನು ಹೊಕ್ಕಾಡಿ ಎಂದು ಕರೆಯಲಾಗಿದೆ ಅದು ವಕ್ವಾಡಿ ಎಂದಾಗಬೇಕಿತ್ತು. ಕೋಟೇಶ್ವರ ಸಮೀಪದ ಈ ಪುಟ್ಟ ಊರು ಇಬ್ಬರು ಚುಪಾ ರುಸ್ತುಮ್‌ಗಳ ಊರು. ಒಂದು ಪ್ರವೀಣ್ ಶೆಟ್ಟರದ್ದಾದರೆ ಇನ್ನೊಂದು ಡಾ ರಾಜ್‌ರ ಮಾನಸ ಪುತ್ರ ವಿಕೆ ಮೋಹನರದ್ದು (ವಿ ಅಂದರೆ ವಕ್ವಾಡಿ ಎಂದು).

- ಶಶಿ ಪುತ್ತೂರು, ದಕ

22-8-15 ರ ಶನಿವಾರ ಬಿಬಿಎಂಪಿ ಚುನಾವಣೆಯಲ್ಲಿ ಮತ ಚಲಾಯಿಸಲು ಹೋದೆವು. ಆದರೆ ಅರ್ಹ ಅಭ್ಯಾರ್ಥಿಗಳು ಯಾರು ಕಾಣಲಿಲ್ಲ, ನೋಟಾಕ್ಕೆ ಮತ ಹಾಕೋಣ ಎಂದರೆ ಮತಪೆಟ್ಟಿಗೆಯಲ್ಲಿ ನೋಟಾ ಇರಲೇ ಇಲ್ಲ!

ಅಣ್ಣಾ ಹಜಾರೆಯವರ ಅನೇಕ ವರ್ಷಗಳ ಅವಿರತ ಹೋರಾಟದ ಫಲವಾಗಿ ನೋಟಾ ಜಾರಿಗೆ ಬಂದಿತ್ತು. ಅದನ್ನು ಈಗ ಇದ್ದಕ್ಕಿದ್ದಂತೆ ತೆಗೆದುಹಾಕಿದ್ದು ಏಕೆ? ಯಾವ ಮಹತ್ಕಾರ್ಯಕ್ಕಾಗಿ? ಈ ಪ್ರಶ್ನೆಗೆ ಚುನಾವಣಾ ಆಯೋಗ ಉತ್ತರಿಸಬೇಕು.


- ಮಹೇಶ. ಎಂ. ಈ ಮೇಲ್ ಮೂಲಕ

ಮೊನ್ನೆಯ ನಾಗರಪಂಚಮಿ ಹಬ್ಬದಂದು ಒಟ್ಟು ಒಂದು ಕೋಟಿ ಲೀಟರಿಗೂ ಹೆಚ್ಚು ಹಾಲು ನಮ್ಮ ದೇಶದೆಲ್ಲೆಡೆ ನಾಗನಿಗೆ ಎರೆದು ಮಣ್ಣುಪಾಲಾಗಿದೆಯೆಂಬ ಸುದ್ದಿ ಆತಂಕ ಹುಟ್ಟಿಸುತ್ತಿದೆ. ದೇವರ ಹೆಸರಲ್ಲಿ ಭಾರತದಲ್ಲಿ ನಡೆಯುವಷ್ಟು ಆಹಾರ ಪದಾರ್ಥಗಳ ನಾಶ ಜಗತ್ತಿನಲ್ಲಿ ಬೇರೆಲ್ಲಿಯೂ ನಡೆಯುವುದಿಲ್ಲ, ಇದೇ ಹಾಲು ಬಡಮಕ್ಕಳಿಗೆ ಕೊಟ್ಟಿದ್ದರೆ ದೇವರು ನಿಜವಾಗಿ ಮೆಚ್ಚುತ್ತಿದ್ದ. ಅಮೂಲ್ಯ ಆಹಾರ ಪೋಲು ಮಾಡುವ ಇಂತಹ ಮೌಢ್ಯದಲ್ಲಿ ಮಹಿಳೆಯರದೇ ಮೇಲುಗೈ, ಮೌಢ್ಯದ ಗಣಿಯಾದ ಕರಾವಳಿಯಲ್ಲಿ ಇಂತಹ ಆಹಾರದ ಪೋಲು ಅತಿ ಹೆಚ್ಚು.

ನಮ್ಮ ಹಳ್ಳಿಯಲ್ಲಿ ಒಂದು ಸಾವಿರ ವರ್ಷ ಹಳೆಯ ಸುಬ್ರಹ್ಮಣ್ಯ ದೇವಳವಿದ್ದು ನಮ್ಮ ಮನೆಯ ಮುಂದಿನಿಂದಲೇ ಅದರ ಮಾರ್ಗವಿರುವುದು. ನಾಗರ ಪಂಚಮಿಯಂದು ನಾಗನಿಗೆ ಹಾಲೆರೆಯಲು ಬಂದ ಪರವೂರಿನ ಮಹಿಳೆಯರು ಬಸ್ಸಿನಿಂದಿಳಿದು ಆ ಹಾದಿಯಲ್ಲಿ ನಡೆಯುತ್ತಾ ಹೋಗುವಾಗ ನಮ್ಮ ಮನೆಯ ಮುಂದಿನ ಪೊದೆಯಲ್ಲಿ ಒಂದು ನಾಗರ ಹಾವು ಒಂದು ದೊಡ್ಡ ಕಪ್ಪೆಯನ್ನು ಅರ್ಧ ನುಂಗಿ ಬಸವಳಿದಿತ್ತು, ಅದನ್ನು ನೋಡಿದ ಮಹಿಳೆಯರು ಆ ಹಾವಿಗೆ ಕೈಮುಗಿಯುತ್ತಾ? ಹಿಂದಿನ ಎರಡು ದಿನದಿಂದ ನಾವು ಮಾಂಸಾಹಾರ ತ್ಯಜಿಸಿ ನಾಗನ ವ್ರತ ಮಾಡಿದ್ದೆವು. ನಮ್ಮ ವ್ರತದ ಪುಣ್ಯಫಲದಿಂದ ಇಂದು ನಮಗೆ ಜೀವಂತ ನಾಗದೇವರ ದರ್ಶನವಾಯಿತು ಎಂದು ಮಾತನಾಡಿಕೊಳ್ಳುತ್ತಿದ್ದರು. ನಾಗರ ಹಾವುಗಳೆಲ್ಲಾ ಪಕ್ಕಾ ಮಾಂಸಾಹಾರಿಗಳಾಗಿದ್ದು ತಮ್ಮ ಕಣ್ಣೆದುರಿನಲ್ಲಿಯೇ ಅದು ಜೀವಂತ ಕಪ್ಪೆಯನ್ನು ನುಂಗುತ್ತಿದ್ದುದನ್ನು ಆ ಸಸ್ಯಾಹಾರ ವ್ರತಸ್ಥ ಮಹಿಳೆಯರು ಗಮನಿಸಲೇ ಇಲ್ಲ. ಅದೇ ಸಮಯಕ್ಕೆ ಎಲ್ಲಿಂದಲೋ ಒಂದು ಹದ್ದು ಹಾರುತ್ತಾ ಬಂದು ಗಬಕ್ಕನೆ ಆ ನಾಗರ ಹಾವನ್ನು ಎತ್ತಿಕೊಂಡು ಹೋಗಿ ಅಲ್ಲಿಯ ಎತ್ತರದ ತಾಳೆಮರದಲ್ಲಿ ಕುಳಿತು ಕುಕ್ಕಿ ಕುಕ್ಕಿ ತಿನ್ನತೊಡಗಿತು. ಹಾವಿನ ಬಾಯಿಂದ ಜಾರಿದ ಕಪ್ಪೆ ಬದುಕಿದೆಯಾ ಬಡಜೀವವೇ ಎಂದು ಜಿಗಿಯುತ್ತಾ ಪೊದೆಯೊಳಗೆ ಹೋಯಿತು, ತಮ್ಮ ದೇವರಿಗಾದ ಗತಿ ನೋಡಿ ಮಹಿಳೆಯರೆಲ್ಲಾ ಒಂದುಕ್ಷಣ ಸ್ಥಂಭೀಭೂತರಾದರು. ಇಂತಹ ದೇವರಿಗಾಗಿ ಕೋಟಿಗಟ್ಟಲೆ ಹಾಲು ತೋಡು ಪಾಲು! ಯಕಶ್ಚಿತ ಹದ್ದು- ನವಿಲು- ಮುಂಗುಸಿ ಅಥವಾ ಹೆಬ್ಬಾವುಗಳಿಂದ ತನ್ನನ್ನೇ ರಕ್ಷಿಸಿಕೊಳ್ಳ ಲಾಗದ ಈ ನಾಗದೇವರು ಮನುಷ್ಯರನ್ನು ಪೋಷಿಸಲು ಎಂದಾದರೂ ಸಾಧ್ಯವೇ ಎಂದು ಯಾರೂ ಆಲೋಚಿಸುವುದಿಲ್ಲ!

- ಪ್ರತೀಕ್ಷಾ ಶೆಟ್ಟಿ, ಮೂಡಬಿದ್ರಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹುದು.



ವಿಷಾದ



2007ರ ಜೂನ್ ತಿಂಗಳ ನಮ್ಮ ಪತ್ರಿಕೆಯಲ್ಲಿ 'ಬಿಡೆಂವು ವಿ.ವಿ. ಜಾತಿ ರಾಜಕಾರಣವೂ, ಸದಾನಂದನ ಬಂಧನವೂ' ಎಂಬ ಲೇಖನ ಪ್ರಕಟಗೊಂಡಿತ್ತು. ಅದು ವಾಸ್ತವ ಸಂಗತಿಗಳಿಂದ ದೂರವಿದ್ದು, ಕೆಲವರು ಕೊಟ್ಟ ತಪ್ಪು ಮಾಹಿತಿಗಳನ್ನಾಧರಿಸಿದ್ದ ವರದಿ ಆಗಿತ್ತು. ಇದರಿಂದ ಸದಾನಂದರಿಗೆ ನೋವುಂಟು ಮಾಡಿದ್ದರೆ, ಅವರಿಗಾದ ನೋವಿಗೆ ನಾವು ವಿಷಾದ ವ್ಯಕ್ತಪಡಿಸುತ್ತೇವೆ.

- ಸಂ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 09-09-2015 RNI No. KARKAN

ದರ್ಶನ್ ಟೀಮ್‌ನಿಂದ ರಚಿತಾ ರಾಮ್ ಹೊರಗೆ

ಧಾರಾವಾಹಿಯಲ್ಲಿ ನಟಿಸುತ್ತಿದ್ದ ರಚಿತಾ ರಾಮ್‌ರನ್ನು ಸಿನಿಮಾರಂಗಕ್ಕೆ ಪರಿಚಯಿಸಿದ್ದೇ ದರ್ಶನ್ ಬ್ಯಾನರ್. ಆನಂತರ ಇವರು ದರ್ಶನ್‌ರ ಹಲವು ಚಿತ್ರಗಳಲ್ಲಿ ನಟಿಸಿದರು. ಆಮೇಲೆ ಪುನೀತ್ ಅವರ 'ರಣವಿಕ್ರಮ' ಚಿತ್ರಕ್ಕೆ ಕೇಳಲಾಯಿತು. ಪುನೀತ್ ಚಿತ್ರದಲ್ಲಿ ನಟಿಸದಂತೆ ದರ್ಶನ್ ಟೀಮ್ ತಾಕೀತು ಮಾಡಿದ ಕಾರಣ ಅಂದು ಅವರು 'ರಣವಿಕ್ರಮ' ಸಿನಿಮಾದಲ್ಲಿ ನಟಿಸಲಿಲ್ಲ.

ಈಗ ಪುನೀತ್ ಜತೆ ರಚಿತಾ ನಟಿಸುತ್ತಿದ್ದಾರೆ. ಸಿನಿಮಾದ ಶೂಟಿಂಗ್‌ಗಾಗಿಯೂ ಅವರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಈ ಮಧ್ಯೆ ಮತ್ತೆ ರಚಿತಾರನ್ನು ದರ್ಶನ್ ಟೀಮ್ ಸಂಪರ್ಕಿಸಿದೆ. ಪುನೀತ್ ಚಿತ್ರದ ಬದಲಾಗಿ 'ಜಗ್ಗುದಾದ' ಸಿನಿಮಾದಲ್ಲಿ ನಟಿಸಲು ಕೇಳಿದೆ. ಈಗಾಗಲೇ ಪುನೀತ್ ಚಿತ್ರಕ್ಕೆ ಒಪ್ಪಿಕೊಂಡಿರುವ ರಚಿತಾ 'ಜಗ್ಗುದಾದ'ದಲ್ಲಿ ನಟಿಸಲು ಆಗುತ್ತಿಲ್ಲ ಅಂದಿದ್ದಾರೆ. ಹೀಗಾಗಿ ದರ್ಶನ್ ಟೀಮ್‌ನಿಂದ ರಚಿತಾರನ್ನು ಆಚೆ ಹಾಕಲಾಗಿದೆ. ಇನು ಮುಂದೆ ದರ್ಶನ್ ಅವರ ಯಾವುದೇ ಚಿತ್ರದಲ್ಲಿ ರಚಿತಾ ಕಾಣಿಸಿಕೊಳ್ಳುವುದಿಲ್ಲ ಎಂಬ ಮಾತು ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಅಲ್ಲದೇ ಪುನೀತ್ ಅಭಿಮಾನಿಗಳು ರಚಿತಾರ ಜತೆ ನಟಿಸದಂತೆ ಪುನೀತ್‌ಗೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ದರ್ಶನ್ ಮತ್ತು ಪುನೀತ್ ಸಿನಿಮಾಗಳ ಗಲಾಟೆಯಲ್ಲಿ ರಚಿತಾಗೆ ಅನ್ಯಾಯ ಆಗದಿದ್ದರೆ ಅಷ್ಟೇ ಸಾಕು.



ಬಿಟ್ಟಿ ಪ್ರಚಾರದಲ್ಲಿ ಅಜಯ್ ರಾವ್



ಆಕಸ್ಮಿಕ ಎನ್ನುವಂತೆ ಬಿಗ್‌ಬಿ ಅಮಿತಾಭ್ ಬಚ್ಚನ್‌ರನ್ನು ಭೇಟಿ ಆಗಿದ್ದಾರೆ ಅಜಯ್ ರಾವ್. ಅವರೊಂದಿಗೆ ತೆಗೆಸಿಕೊಂಡ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ. ಸಾಲದು ಎಂಬಂತೆ ತಮ್ಮ ಆಪ್ತರ ಜತೆ ಅಮಿತಾಭ್ ಜತೆ ನಟಿಸುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಇದು ಕಿವಿಯಿ... ಹರಡಿ ಅಜಯ್‌ಗೆ ದೊಡ್ಡ ಪ್ರಚಾ... ಅಸಲಿ ಅಮಿತಾಭ್ ಜತೆ ಅಜಯ್... ಯಾವುದೇ ಚಿತ್ರದಲ್ಲಿ ನಟಿಸುತ್ತಿಲ್ಲ. ... ಪ್ರಚಾರಕ್ಕಾಗಿ ಅಂಥದ್ದೊಂದು ಗಿಮಿ... ಮಾಡಿದ್ದಾರೆ.

ಅಮಿತಾಭ್ ಹೆಸರು ಹೇ... ಅಜಯ್ ಪ್ರಚಾರ ಗಿಟ್ಟಿಸಿಕೊಂಡಿರುವ... ಮೊದಲೇನೂ ಅಲ್ಲ. ಈ ಹಿಂದೆ ... ಯೋಗರಾಜ್ ಭಟ್ ಕೂಡ ಇಂಥ ಮ... ಆಡಿದ್ದರು. ತಮ್ಮ ಸಿನಿಮಾದಲ್ಲಿ ಬಿಗ್‌ಬಿ... ಪಾತ್ರ ಮಾಡುತ್ತಿದ್ದಾರೆ ಎಂದು ಹೇಳಿಕ... ಆದರೆ, ಆ ಸಿನಿಮಾನೂ ಬರಲಿಲ್ಲ. ... ಕೂಡ ಕಾಣಿಸಿಕೊಳ್ಳಲಿಲ್ಲ. ಹೇಗಿ... ಬಿಟ್ಟಿ ಪ್ರಚಾರ?

ನಿರ್ದೇಶನಕ್ಕೆ ಗಣೇಶ್



ಏಕಕಾಲಕ್ಕೆ ಮೂರು ಸಿನಿಮಾಗಳಲ್ಲಿ ನಟಿಸುತ್ತಿರುವ ಗಣೇಶ್ ಮತ್ತೆ ನಿರ್ದೇಶನ ಮಾಡುವ ಮಾತುಗಳನ್ನು ಆಡಿದ್ದಾರೆ. ಅಂದುಕೊಂಡಂತೆ ನಡೆದರೆ, ಮುಂದಿನ ವರ್ಷ ಇವರ ನಿರ್ದೇಶನದ ಎರಡನೇ ಚಿತ್ರ ಸೆಟ್ಟೇರಲಿದೆ. ಈಗಾಗಲೇ ಕತೆ ರೆಡಿ ಇದ್ದು, ಚಿತ್ರಕತೆ ಬರೆಯುತ್ತಿದ್ದಾರೆ.

ಈ ಹಿಂದೆ ಗಣೇಶ್ ಆಕಸ್ಮಿಕವಾಗಿ ಆಕ್ಷನ್ ಕಟ್ ಹೇಳಿದ್ದರು. ಇವರ ನಿರ್ಮಾಣದ 'ಕೂಲ್' ಚಿತ್ರದ ನಿರ್ದೇಶಕ ಮುಸ್ಸಂಜೆ ಮಹೇಶ್ ಮತ್ತು ಗಣೇಶ್ ಪತ್ನಿ ಶಿಲ್ಪಾ ನಡುವೆ ಗಲಾಟೆ ಆಗಿತ್ತು. ಹೀಗಾಗಿ ಮಹೇಶ್ ಸಿನಿಮಾದಿಂದ ಹಿಂದೆ ಸರಿದಿದ್ದರು. ಆಗ ಅನಿವಾರ್ಯವಾಗಿ ಗಣೇಶ್ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದರು. ಈಗ ನಿರ್ದೇಶನದ ಕನಸು ಹೊತ್ತು ಡೈರೆಕ್ಷನ್‌ಗೆ ಇಳಿಯುತ್ತಿದ್ದಾರೆ.

ಅಂದಹಾಗೆ ಇದು ನೈಜ ಕತೆ ಆಧರಿಸಿದ ಸಿನಿಮಾ ಎನ್ನಲಾಗುತ್ತಿದೆ. ಗಣೇಶ್ ಜೀವನದಲ್ಲಿ ಕಂಡುಂಡ ಅನುಭವಗಳು ಸಿನಿಮಾದಲ್ಲಿ ಇರುತ್ತವಂತೆ.

ರಾಗಿಣಿ ಚಿ... ಕಂಟ...

'ನಾನೇ ನೆಕ್ಸ್ಟ್ ಸಿಎಂ' ಚಿತ್ರದಲ್ಲಿ ರಾಗಿಣಿ ನಟಿಸುತ್ತಿರುವ ವಿಷಯ ಹಳೆ... ಸಿನಿಮಾದ ಟೈಟಲ್‌ನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ತಿ... ಬೇರೆ ಶೀರ್ಷಿಕೆ ಇಟ್ಟುಕೊಳ್ಳಲು ಸೂಚಿಸಿತ್ತು. ವಾಣಿಜ್ಯ ಮಂಡಳಿಯ ಮಾ... ಕಾಸಿನ ಕಿಮ್ಮತ್ತು ಕೊಟ್ಟಿಲ್ಲ ನಿರ್ದೇಶಕ ಮಹೇಶ್. ಮತ್ತೆ ಅದೇ ಟೈಟಲ್‌ನಿಂ... ಶುರು ಮಾಡಿದ್ದಾರೆ. ಹೀಗಾಗಿ ವಾಣಿಜ್ಯ ಮಂಡಳಿಯು ಸಿನಿಮಾ ತಂಡ... ಗರಂ ಆಗಿದೆ. ಸದ್ಯ ಮೈಸೂರಿನಲ್ಲಿ ಬೀಡುಬಿಟ್ಟಿರುವ ಚಿತ್ರತಂಡಕ್ಕೆ ನೋಟಿಸ್ ... ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮನೋಹರ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಸಿನಿಮಾ ಇದು. ... ಪಾತ್ರವು ರಾಜಕಾರಣಿಯೊಬ್ಬರ ಎರಡನೇ ಪತ್ನಿಗೆ ಸಂಬಂಧಿಸಿದ ಕತೆ ಎಂ... ಕೇಳಿಬಂದಿದೆ. ಹೀಗಾಗಿ ಈ ವಿಷಯಕ್ಕೂ ವಿವಾದ ಆಗುವ ಸಾಧ್ಯತೆ ಇದೆ... ಟೈಟಲ್‌ನ್ನು ಬದಲಿಸಿಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ವಾಣಿಜ್ಯ ಮಂ... ನಿರ್ದೇಶಕರು ವಾಣಿಜ್ಯ ಮಂಡಳಿಯ ಮಾತು ಕೇಳುತ್ತಾರೋ ಇಲ್ಲವೋ ... ಆದರೆ ಒಟ್ಟಿನಲ್ಲಿ ರಾಗಿಣಿ ಇದ್ದರೆ, ಅಲ್ಲಿ ವಿವಾದ ಕಾಯಂ ಅನ್ನುವಂತಾಗಿ...



ಪುನೀತ್ ಜತೆ ಶಿವರಾಜ್‌ಕುಮಾರ್

ಸಹೋದರ ಶಿವರಾಜ್‌ಕುಮಾರ್ ಜತೆ ಪುನೀತ್ ನಟಿಸುತ್ತಾರೆ ಎಂಬ ಸುದ್ದಿ ಎರಡು ವರ್ಷಗಳಿಂದ ಹರಿದಾಡುತ್ತಲೇ ಇದೆ. ಈಗ ಇಂಥದ್ದೇ ಮತ್ತೊಂದು ಸುದ್ದಿಯನ್ನು ಹರಿಬಿಟ್ಟಿದ್ದಾರೆ 'ಈಸೂರು ದಂಗೆ' ಸಿನಿಮಾದ ನಿರ್ದೇಶಕರು.

'ಈಸೂರು ದಂಗೆ' ಚಿತ್ರದಲ್ಲಿ ಶಿವರಾಜ್ ನಟಿಸುತ್ತಿದ್ದಾರೆ. ಇದು ಸ್ವತಂತ್ರ ಪೂರ್ವದ ಕತೆ ಆಗಿದ್ದರಿಂದ, ವಿಶೇಷ ರೀತಿಯಲ್ಲೇ ಶಿವರಾಜ್‌ಕುಮಾರ್ ತಯಾರಿ ಆಗುತ್ತಿದ್ದಾರೆ. ಇದನ್ನು ಅರಿತ ಪುನೀತ್ ಕೂಡ "ಇಂತಹ ಕತೆಯಲ್ಲಿ ನನಗೆ ಅವಕಾಶ ಸಿಕ್ಕರೆ ಖಂಡಿತಾ ನಟಿಸುತ್ತೇನೆ" ಅಂದಿದ್ದಾರೆ. ಈಸೂರು ನಿರ್ದೇಶಕರು ನಟಿಸುವಂತೆ ಪುನೀತ್‌ಗೆ ಮನವಿ ಮಾಡಿದ್ದಾರಂತೆ. ಪುನೀತ್ ನಟಿಸುತ್ತಾರೋ ಇಲ್ಲವೋ ಬೇರೆ ವಿಷಯ. ಆದರೆ, ಸುಖತ್ ಸದ್ದಂತೂ ಈ ಸುದ್ದಿ ಮಾಡಿದೆ.

ಅಂದುಕೊಂಡಂತೆ ಆಗಿದ್ದರೆ, ರವಿವರ್ಮಾ ನಿರ್ದೇಶನದಲ್ಲಿ ಪುನೀತ್ ಮತ್ತು ಶಿವರಾಜ್‌ಕುಮಾರ್ ನಟಿಸಬೇಕಿತ್ತು, ನಿರ್ಮಾಪಕ ಮತ್ತು ನಿರ್ದೇಶಕರ ನಡುವಿನ ಕಿತ್ತಾಟದಿಂದಾಗಿ ಆ ಸಿನಿಮಾ ಮಾತಿನ ಹಂತದಲ್ಲೇ ನಿಂತಿತ್ತು. ಈಗ ಮತ್ತೆ ಈ ಸುದ್ದಿಗೆ ಜೀವ ಬಂದಿದೆ. ಸಹೋದರರ ಚಿತ್ರವನ್ನು ತಾವೇ ನಿರ್ಮಾಣ ಮಾಡುವುದಾಗಿ ಜಯಣ್ಣ ಹೇಳಿದ್ದಾರೆ. ಯಾವ ಚಿತ್ರ ಮೊದಲಾಗುತ್ತೋ ಕಾದು ನೋಡಬೇಕು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com